QUESTION FOR ANSWER ON THE DAY

(but not taken up)

Treating of A.M.I.E. candidates from Andhra Pradesh as equivalent to B.E. Graduates of Mysore University.

***Q.—20.** Sri A. SHARANAPPA (Deodurg).—

Will the Government be pleased to state:—

(*a*) whether they have treated the A. M. I. E. candidates from Andhra Pradesh as equivalent to B. E. Graduates of Mysore University;

(*b*) if so, how many such candidates have been re-equated in the Junior Engineers' posts of the State;

(*c*) the reasons for re-equating such candidates when the B. E. Graduates were available in the State?

A.—Sri VEERENDRA PATIL (Minister for Public Works).—

(*a*) A. M. I. E. qualification awarded by the Institute of Engineers (India) is equivalent to B. E. Degree awarded by recognised Universities including the Mysore University irrespective of the candidates appearing from Andhra Pradesh or any other region in the country.

(*b*) The question of re-equation does not arise in view of reply to clause ( ).

(*c*) Does not arise in view of replies to clauses (*a*) and (*b*).

9-30 A.M.

BUDGET ESTIMATES FOR 1964-65—GENERAL DISCUSSION

Mr. SPEAKER.—Now Sri Vidyadhar Guruji will speak on the Budget.

Sri VIDYADHAR GURUJI (Gurumitkal).—(Spoke in Hindi).

† ಶ್ರೀ ಎಸ್. ಆವಲರೆಡ್ಡಿ (ಶಿಡ್ಲಘಟ್ಟ).—ಸ್ವಾಮಿ, ನಮ್ಮ ಸರಕಾರದವರು ಈ ವರ್ಷದ ಆಯವ್ಯಯ ಪಟ್ಟಿಯನ್ನು ಮಾನ್ಯ ಸಭೆಯ ಮುಂದೆ ಇಟ್ಟಿದ್ದಾರೆ. ಈ ಆಯವ್ಯಯದ ಪಟ್ಟಿಯನ್ನು ಕೂಲಂಕಷವಾಗಿ ನೋಡಿದ ಪಕ್ಷದಲ್ಲಿ ನನ್ನ ಅನೇಕ ಮಿತ್ರರು ಹೇಳಿದ ಹಾಗೆ ಈ ವರ್ಷದ ಬಡ್ಜೆಟ್ಟು ಬಹಳ ಬ್ಯಾಲೆನ್ಸಿಂಗ್ ಆಗಿದೆ. ಯಾವ ಹೊಸ ತೆರಿಗೆಯೂ ಇದರಲ್ಲಿಲ್ಲ ಎಂದು ಜನರೂ ಅಭಿಪ್ರಾಯ ಪಟ್ಟಿದ್ದಾರೆ ಮತ್ತು ಇಲ್ಲಿರುವ ಮಾನ್ಯ ಮಿತ್ರರೂ ಅಭಿಪ್ರಾಯಪಟ್ಟಿದ್ದಾರೆ. ನಾನೂ ಕೂಡ ಸಮರ್ಥನೆ ಮಾಡುತ್ತ ಹಲವಾರು ಸೂಚನೆಗಳನ್ನು ಸರಕಾರದ ಮುಂದೆ ಇಡಲು ಪ್ರಯತ್ನಪಡುತ್ತೇನೆ.

ತುರ್ತು ಪರಿಸ್ಥಿತಿ ಬಂದ ಮೇಲೆ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರದವರು ಆಹಾರದ ಪರಿಸ್ಥಿತಿಯನ್ನು ಸುಧಾರಿಸಬೇಕು ಎಂದು ಇದಕ್ಕಾಗಿ ನೂರಕ್ಕೆ ನೂರು ಪಾಲು ಪ್ರಯತ್ನಪಟ್ಟು ಹಲವಾರು ಕೋಟಿಯಷ್ಟು ಹಣವನ್ನು ಒಂದು ವರ್ಷದಿಂದೀಚೆಗೆ ಖರ್ಚು ಮಾಡಲು ಪ್ರಯತ್ನ ಮಾಡಿದ್ದಾರೆ. ಈ ವಿಷಯದಲ್ಲಿ ಹೋದ ಸಾರಿ ಪಿ. ಡಬ್ಲ್ಯು. ಇಲಾಖೆಯವರು ಹಲವಾರು ಕೋಟಿಗಳನ್ನು ಹೋದ ಸಲ ನಮ್ಮ ಪ್ರಾಂತದಲ್ಲಿ ಖರ್ಚು ಮಾಡಬೇಕೆಂದು ಅದರಲ್ಲೂ ಮೈನರು ಇರಿಗೇಷನ್ನು ಮತ್ತು ರೆಸ್ಟೋರೇಷನ್ನು ವಿಚಾರದಲ್ಲಿ ಒಂದು ಟೆಂಪೋ ಹುಟ್ಟಿತ್ತು. ಆ ತರದ ಟೆಂಪೋ ಹಲವಾರು ತಿಂಗಳುಗಳ ಕಾಲವಿದ್ದು ವರ್ಷಾಂತ್ಯದೊಳಗೆ ಅದು ಹಾಗೇ ಕಡಮೆಯಾಯಿತು. ಸುಮಾರು ಒಂದುವರೆ ಕೋಟಿಯಷ್ಟು ಹಣವನ್ನು ಕಂಟ್ರಾಕ್ಟರುಗಳಿಗೆ ಕೊಡಲು ಸರಕಾರದಲ್ಲಿ ಹಣವಿರಲಿಲ್ಲ. ಈ

ವರ್ಷ ಕೊಡ ಆಯುವ್ಯಯ ಪಟ್ಟಿಯನ್ನು ನೋಡುವಾಗ ಹಲವಾರು ಕಟ್ಟೆಗಳನ್ನು ಕಟ್ಟಿದ್ದಾರೆನ್ನುವುದು ತಿಳಿಯುತ್ತದೆ. ನಮ್ಮ ಹಳೆಯ ಮೈಸೂರಿನ ಭಾಗದಲ್ಲಿ ಪ್ಲಾನಿಂಗು ಕಮಿಷನ್ನಿನವರು ಕೊಟ್ಟಿರುವ ಅಂಕಿ ಅಂಶಗಳಂತೆ 29,000 ಕೆರೆಗಳು ಎಂದರೆ ಮೇಜರು ಹಾಗೂ ಮೈನರ್ ಟ್ಯಾಂಕುಗಳಿವೆ. ಹೊಸ ಮೈಸೂರಿನ ಭಾಗಗಳಲ್ಲಿ ಸುಮಾರು 3,000 ಕೆರೆಗಳಿವೆ. ಎಂದರೆ ಒಟ್ಟು ಈ ರಾಜ್ಯದಲ್ಲಿ ಸುಮಾರು 32,33,000 ಕೆರೆಗಳಿವೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಇದರ ಲೆಕ್ಕ ನೋಡಿದರೆ ನೂರಕ್ಕೆ ಐದು ಭಾಗದಷ್ಟು ಕೆರೆಗಳು ರೆಸ್ಟೋರು ಆಗಿವೆ. ಇದಕ್ಕಾಗಿ ನಮ್ಮ ಬಡ್ಜೆಟ್ಟಿನಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ಒದಗಿಸಿರತಕ್ಕ ಹಣ ಬಹಳ ಅಲ್ಪ, ಇದು ಏನೇನೂ ಸಾಲದು. ಹಿಂದೆ ಈ ವಿಷಯ ಇಲ್ಲಿ ಪ್ರಸ್ತಾಪ ಮಾಡಿದಾಗ ಕಟ್ಟೆಗಳನ್ನು ನಿರ್ಮಾಣ ಮಾಡುವುದಕ್ಕೆ ಕೆಲವು ಐ. ವಿ. ಸಿ. ರೋಡುಗಳ ಕೆಲಸವನ್ನು ನಿಲ್ಲಿಸೋಣ, ಅದರಿಂದ ಮೈನರು ಇರಿಗೇಷನ್ನು ಕೆಲಸಗಳನ್ನು ಮಾಡಲು ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದರು. ಇತ್ತೀಚೆಗೆ ನೋಡಿದರೆ ಇದರ ಫಲವಾಗಿ ಕೆಲವು ಕೆರೆಗಳೂ ಆದುವು. ಮೈನರು ಇರಿಗೇಷನ್ನು ಕೆಲಸಗಳು ಚೆನ್ನಾಗಿ ನಡೆಯುವಂತಾಗಲು ಕೋಟ್ಯಾಂತರ ರೂಪಾಯಿಗಳಷ್ಟು ಖರ್ಚು ಮಾಡುತ್ತೇವೆಂದು ಹೇಳಿದರು. ಮೈನರು ಇರಿಗೇಷನ್ನು ಮಾಡುವುದರ ಜೊತೆಗೆ ಕ್ಷಾಮದ ಇರಿಗೇಷನ್ನು ವೆಲ್ಸ್‌ಗಳನ್ನು ಮಾಡಬಹುದು.

[MR. DEPUTY SPEAKER in the Chair.]

ನಮ್ಮ ಸಂಸ್ಥಾನದಲ್ಲಿ ಹರಿಯತಕ್ಕ ನದಿಗಳ ಅಂಗಳದಲ್ಲಿ ಸರಕಾರದವರು ಬಾವಿಗಳನ್ನು ತೆಗೆದು ಸಾರ್ವಜನಿಕರಿಗೆ ನೀರನ್ನು ಒದಗಿಸಿ ತನ್ಮುಖಾಂತರ ಸಾವಿರಾರು ಎಕರೆಗಳಷ್ಟು ಭೂಮಿ ತರಿ ಸಾಗುವಳಿಗೆ ತರಬಹುದು ಎಂದು ಈ ಬಗ್ಗೆ ಒಂದು ಪತ್ರವನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳವರಿಗೂ ನಮ್ಮ ಪಾರ್ಟಿಯ ಸೆಕ್ರೆಟರಿಯವರಿಗೂ ಗುಜರಾಯಿಸಿದ್ದೆ.

ಇದನ್ನು ಕೊಟ್ಟು ಒಂದೂವರೆ ವರ್ಷವಾದರೂ ಹಲವಾರು ಯೋಜನೆಗಳನ್ನು ತಯಾರು ಮಾಡಿಕೊಟ್ಟರೂ ಅವರು ಗಮನಕ್ಕೆ ತಂದುಕೊಂಡಿಲ್ಲ. ಮಳೆಯ ಅಭಾವವಿರುವ ಮತ್ತು ಅಲ್ಪ ಮಳೆ ಬೀಳತಕ್ಕ ಜಿಲ್ಲೆಗಳಲ್ಲಿ ಸಬ್‌ಸಾಯಿಲ್ ನೀರಿರುತ್ತದೆ. ಇದನ್ನು ಉಪಯೋಗ ಮಾಡಿಕೊಳ್ಳಲು ಅವಕಾಶವಿದೆ ಎನ್ನುವುದನ್ನು ಸರಕಾರಕ್ಕೆ ಹೇಳಿದರೂ ಅವರು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಇದಕ್ಕಾಗಿ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಿಲ್ಲ. ಲಿಫ್ಟ್ ಇರಿಗೇಷನ್‌ನಲ್ಲಿ ನಮ್ಮ ಕೋಲಾರ ಜಿಲ್ಲೆ ಮುಂದುವರಿದಿದೆ. ಸರಕಾರ ಬಾವಿಗಳನ್ನು ತೆಗೆದು 2[illegible], 0 ಅಶ್ವ ಶಕ್ತಿಯ ವಿದ್ಯುಚ್ಛಕ್ತಿಯ ಪಂಪುಗಳನ್ನು ಹಾಕಿದರೆ ಸಾಕು. ಇಪ್ಪತ್ತು-ಇಪ್ಪತ್ತೈದು ಸಾವಿರ ಎಕರೆ ಸಾಗುವಳಿಗೆ ಬರುತ್ತದೆ ಎಂದು ಖಂಡಿತವಾಗಿ ಹೇಳುತ್ತೇನೆ. ಲಿಫ್ಟ್ ಇರಿಗೇಷನ್ ಜಾರಿಗೆ ತಂದು ಅನೇಕ ಕೆರೆಗಳ ಕೆಳಗೆ ಪಂಪುಗಳನ್ನು ಸರಬರಾಯಿ ಮಾಡಿದರು. ಹೋದಸಾರಿ ಹತ್ತು ಸಾವಿರಕ್ಕೆ ಕೊಟ್ಟರು, ಆದರೆ ಈ ವರ್ಷ ಐದು ಸಾವಿರವೂ ಇಲ್ಲ. ರೈತರು ಕೊಡಬೇಕಾದ ಹಣವನ್ನು ಕೊಟ್ಟರೂ, ಬಾವಿಗಳನ್ನು ತೆಗೆದರೂ, ಅವರಿಗೆ ತಿಳಿವಳಿಕೆ ಬಂದ ಮೇಲೆ, ಅವರಿಗೆ ಪಂಪ್‌ಸೆಟ್‌ಗಳಿಗೆ ಹಣ ಕೊಡದಿದ್ದರೆ ಅವರು ಎಷ್ಟು ಜಿಗುಪ್ಸೆ ಪಡುತ್ತಾರೆಂದು ಯೋಚಿಸಬೇಕು. ಲಿಫ್ಟ್ ಇರಿಗೇಷನ್ನಿಗೆ ಕೋಟ್ಯಾಂತರ ರೂಪಾಯಿ ಒದಗಿಸಿದರೂ ರೈತ ತಕ್ಷಣ ಭೂಮಿಯನ್ನು ಸಾಗುವಳಿ ಮಾಡುತ್ತಾನೆ, ಇದರಿಂದ ರೈತನ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಸದುದ್ದೇಶದಿಂದ ಇದನ್ನು ಮಾಡಬೇಕು. ಸರಕಾರ ಈಗಲಾದರೂ ಮನಸ್ಸು ಮಾಡಿ ಇದಕ್ಕೆ ಕೋಟ್ಯಾಂತರ ರೂಪಾಯಿ ಒದಗಿಸಬೇಕು.

ರಸ್ತೆಗಳು ಮತ್ತು ಶಾಲಾ ಕಟ್ಟಡಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಸುಮಾರು ನಾಲ್ಕು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಜತ್ತಿಯವರ ಸರಕಾರವಿದ್ದಾಗ ಹಳ್ಳಿಗಾಡು ರಸ್ತೆಗಳನ್ನು ನಿರ್ಮಾಣ ಮಾಡಿದರು. ಪ್ರತಿ ತಾಲ್ಲೂಕಿನಲ್ಲಿಯೂ ಮಾಡಿಸಿದರು. ಗ್ರಾವೆಲ್ ರಸ್ತೆಗಳಾದರೂ ಬಹಳ ಚೆನ್ನಾಗಿವೆ. ಇವಕ್ಕೆ ಅಗತ್ಯವಾದ ಕಲ್‌ವರ್ಟ್‌ಗಳು ಮತ್ತು ಸೇತುವೆಗಳನ್ನು ಕಟ್ಟಿಸಿದರೆ ಅನುಕೂಲವಾಗುತ್ತದೆಂದು ಪದೇಪದೇ ಹೇಳುತ್ತಿದ್ದೇನೆ. ಆದರೂ ಇದಕ್ಕಾಗಿ ಹಣವನ್ನೇನೂ ಕೊಟ್ಟಿಲ್ಲ. ಶಿಕ್ಷಣಕ್ಕಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವಾಗ ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳು ಮತ್ತು ರಸ್ತೆಗಳಿಲ್ಲದಿದ್ದರೆ ಏನು ಪ್ರಯೋಜನ?

ಶ್ರೀ ಡಿ. ದೇವರಾಜ ಅರಸ್.—ಮೈನರ್ ನೀರಾವರಿಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂದು ಸರಕಾರ ಯೋಚನೆ ಮಾಡಬೇಕಾಗಿತ್ತು, ಆದರೆ ಕಡಮೆ ಮಾಡಿದ್ದಾರೆಂದು ಹೇಳಿದರು. ಆಗ ರಸ್ತೆ ಮತ್ತು ಕಟ್ಟಡಗಳಿಗೆ ಕಡಮೆ ಮಾಡಬೇಕೆಂದು ಹೇಳಿ, ಮತ್ತೆ ಈಗ ರಸ್ತೆಗಳನ್ನು ಮಾಡಬೇಕು, ಹಳೆಯ ರಸ್ತೆಗಳನ್ನು ಸರಿಪಡಿಸಬೇಕು, ಕಟ್ಟಡಗಳನ್ನು ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಾರೆ, ಹೇಗೆ ಮಾಡುವುದು ?

ಶ್ರೀ ಎಸ್. ಅವಲರೆಡ್ಡಿ.—ತುಂಗಭದ್ರಾ ಮುಂತಾದ ದೊಡ್ಡದೊಡ್ಡ ಅಣೆಗಳನ್ನು ನಿರ್ಮಾಣ ಮಾಡುವುದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದೀರಿ, ಅದಕ್ಕಿಂತ ಹೆಚ್ಚು ಮೈನರ್ ನೀರಾವರಿಯನ್ನು ಮಾಡಬೇಕೆಂದು ಹೇಳಿದೆ.

ಅರಣ್ಯ ಇಲಾಖೆ ಮತ್ತು ರೇಷ್ಮೆ ಇಲಾಖೆಯಲ್ಲಿ ಒಳ್ಳೆಯ ಮಾರ್ಗವನ್ನನುಸರಿಸಿದ್ದಾರೆ. ಮಾರ್ಕೆಟ್ಟು ಬಂದಮೇಲೆ ರೈತ ಗೂಡುಗಳನ್ನು ಚೆನ್ನಾಗಿ ಬೆಳೆಯುತ್ತಿದ್ದಾನೆ. ರೈತ ಉತ್ಪತ್ತಿ ಮಾಡಿದ ಮಾಲಿಗೆ ಸರಿಯಾದ ಬೆಲೆ ಬರುತ್ತಿದೆ. ರೈತರು ನೋಟುಗಳ ಕಂತೆಗಳನ್ನು ತರುತ್ತಿರು ವುದನ್ನು ನೋಡಿದ್ದೇನೆ. ಸರಕಾರದವರು ಮಾರ್ಕೆಟ್ ವ್ಯವಸ್ಥೆಯನ್ನು ಜಾರಿಗೆ ತಂದಮೇಲೆ ರೈತ ನಿಗೆ ಅನುಕೂಲವಾಗಿದೆ. ಆದರೆ ರಿಸರ್ಚ್ ಅಥವಾ ಸಂಶೋಧನೆ ಭಾಗದಲ್ಲಿ ಕಾರ್ಯವನ್ನು ಅಷ್ಟು ಪ್ರಗತಿದಾಯಕವಾಗಿ ಮಾಡಿಲ್ಲ. ನಮ್ಮ ತಾಲ್ಲೂಕಿನಲ್ಲಿ ಒಂದು ರೇಷ್ಮೆ ಫಾರಂ ತೆರೆದಿದ್ದಾರೆ, ಅಲ್ಲಿ ನೀರೇ ಇಲ್ಲ. ಬಿತ್ತನೆ ಗೂಡು ಸಂಬಂಧವಾಗಿ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಒಂದು ಜಾಗವಿದೆ; ಅಲ್ಲಿ ಪ್ರಯೋಗದ ಫಾರಂ ತೆರೆಯಬೇಕೆಂದು ನಾನು ಅರಿಕೆ ಮಾಡಿದ್ದೇನೆ. ಅದನ್ನು ವಿಚಾರ ಮಾಡ ಬೇಕೆಂದು ಸೂಚಿಸುತ್ತೇನೆ.

ಫಿಲೇಚರ್ ರೇಷ್ಮೆಯಿಂದ ಒಂದು ಕೋಟಿ ರೂಪಾಯಿ ನಷ್ಟವಾಗಿದೆ. ರೈತ ಕಷ್ಟಪಟ್ಟು ಸಂಪಾದನೆ ಮಾಡಿಕೊಡುವ ಹಣವನ್ನು ಫಿಲೇಚರಿನ ಮೇಲೆ ಹಾಕಿ ಹೀಗೆ ನಷ್ಟ ಮಾಡುವುದಕ್ಕೆ ಬದಲು ಇದಕ್ಕೆ ಒಂದು ಖಾಸಗಿ ಲಿಮಿಟೆಡ್ ಕಂಪೆನಿ ಮಾಡಿ ಅದಕ್ಕೆ ಇದನ್ನು ವಹಿಸುವುದು ಒಳ್ಳೆಯದು. ಬೇಕಾದರೆ ಸರಕಾರ ಅದರಲ್ಲಿ ಸ್ವಲ್ಪ ಷೇರುಗಳನ್ನು ತೆಗೆದುಕೊಳ್ಳ ಬಹುದು. ಹೀಗೆ ಮಾಡಿ ಇದನ್ನು ಸರಿಪಡಿಸಬೇಕು.

ಇನ್ನೊಂದು ವಿಷಯವೆಂದರೆ, ರೇಷ್ಮೆಗೂಡಿಗೆ ಮಳೆಗಾಲದಲ್ಲಿ ಹೆಚ್ಚು ಕಾಯಿಲೆ ಬರುತ್ತದೆ. ಆಗ ರೈತರ ಗೋಳನ್ನು ನೋಡುವುದಕ್ಕಾಗುವುದಿಲ್ಲ. ಇದನ್ನು ನಾನು ಅನೇಕ ಸಾರಿ ಮಂತ್ರಿಗಳಿಗೆ ತೋರಿಸಿದ್ದೇನೆ. ಆದರೂ ಅವಕ್ಕೆ ಯಾವ ವ್ಯವಸ್ಥೆಯನ್ನೂ ಇದುವರೆಗೆ ಮಾಡಿಲ್ಲ. ಸರಕಾರ ಇದಕ್ಕೆ ಗಮನ ಕೊಡಬೇಕು.

ವಿದ್ಯಾಭ್ಯಾಸದ ವಿಷಯದಲ್ಲಿ ಉದಾರವಾಗಿ ಸರಕಾರದವರು ಕೋಟ್ಯಾಂತರ ರೂಪಾಯಿ ಗಳನ್ನು ಕೊಟ್ಟಿದ್ದಾರೆ. ಆದರೂ ಈಗಿನ ಪ್ರಜಾಸಂಖ್ಯೆಗನುಗುಣವಾಗಿಲ್ಲ. ಹಳ್ಳಿಗಳಲ್ಲಿ ಅನೇಕ ಸ್ಕೂಲುಗಳನ್ನು ತೆರೆದಿದ್ದಾರೆ, ಅಪ್ಪರ್ ಪ್ರೈಮರಿಯವರೆಗೆ ವಿದ್ಯಾಭ್ಯಾಸ ಮಾಡಲು ಹಳ್ಳಿಗಳಲ್ಲಿ ಅನುಕೂಲ ಮಾಡಿದ್ದಾರೆ. ಆದಕ್ಕಿಂತ ಮುಂದಯೂ ಹಳ್ಳಿಗಳಲ್ಲಿ ತಾವು ವಾಸವಾಗಿರುವ ಕಡೆಗಳಲ್ಲೇ ತಮ್ಮ ಮಕ್ಕಳು ಇದ್ದು ಶಿಕ್ಷಣ ಪಡೆಯಲೆಂಬ ಉದ್ದೇಶದಿಂದ ಕೆಲವು ಕಡೆ ಎಜ್ಯುಕೇಷನ್ ಸೊಸೈಟಿ ಗಳನ್ನು ಮಾಡಿಕೊಂಡು ಸ್ಕೂಲುಗಳನ್ನು ಪ್ರಾರಂಭ ಮಾಡದ್ದಾರೆ, ಅವರಿಗೂ ಬೇರೆಯವರಿಗೆ ಹೇಗೆ ಸೇಕಡ 83 ಅಥವಾ 85 ರಷ್ಟು ಗ್ರ್ಯಾಂಟು ಕೊಟ್ಟು ಸಹಾಯ ಮಾಡುತ್ತಾರೆಯೋ ಹಾಗೆ ಕೊಟ್ಟು ಸಹಾಯ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇದಕ್ಕೆ ಬಡ್ಜೆಟ್‌ನಲ್ಲಿ ಹಣವನ್ನೊದಗಿಸಿಲ್ಲ. ಸೆಕೆಂಡರಿ ವಿದ್ಯಾಭ್ಯಾಸವನ್ನು ಕೂಡ ಉಚಿತವಾಗಿ ಮಾಡಬೇಕು. ಇದನ್ನು ಮದರಾಸು ಮತ್ತು ಆಂಧ್ರದಲ್ಲಿ ಮಾಡಿದ್ದಾರೆ. ಈ ಬಗ್ಗೆ ನಮ್ಮ ಸರಕಾರದವರು ಏನನ್ನೂ ಮಾತನಾಡಿಲ್ಲ. ಇದನ್ನು ಪರಿಶೀಲನೆ ಮಾಡಬೇಕು. ಆಂಧ್ರದಲ್ಲಿ ಮಾಡಿರುವಂತೆ ನೀರಾಸೇಂದಿ ಅಂಗಡಿಗಳನ್ನು ನಮ್ಮ ರಾಜ್ಯ ದಲ್ಲಿಯೂ ತೆರೆದರೆ ವಿದ್ಯಾಭ್ಯಾಸಕ್ಕೆ ಬೇಕಾದಷ್ಟು ಹಣ ನಮಗೆ ಸಿಕ್ಕುತ್ತದೆ. ಈ ಸಭೆಯೂ ಇದನ್ನು ವಿರೋಧಿಸುವುದಿಲ್ಲವೆಂದು ನಾನು ಭಾವಿಸುತ್ತೇನೆ. ಆದರಿಂದ ಬರುವ ಹಣವನ್ನು ಪೂರ್ತಿಯಾಗಿ ವಿದ್ಯಾಭ್ಯಾಸಕ್ಕೆ ಖರ್ಚು ಮಾಡಬಹುದು.

ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಒಂದೇ ಮಾತನ್ನು ಹೇಳುತ್ತೇನೆ. ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲದಿರುವುದರಿಂದ ಜನರಿಗೆ ಉಪಯೋಗವಾಗುತ್ತಿಲ್ಲ. ಆದಷ್ಟು ಬೇಗ ಹೆಚ್ಚು ಜನ ಡಾಕ್ಟರುಗಳನ್ನು ನೇಮಕ ಮಾಡುವ ಏರ್ಪಾಡು ಮಾಡಬೇಕು.

ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆ ಈಗ ಹೆಚ್ಚು ಹಣವನ್ನು ಸಂಪಾದನೆ ಮಾಡುತ್ತದೆ. ಟಿಕೆಟ್ ಪಡೆಯದೆ ಬಸ್‌ಗಳಲ್ಲಿ ಪ್ರಯಾಣ ಮಾಡುವವರನ್ನು ಶಿಕ್ಷೆಗೆ ಗುರಿ ಮಾಡುವ ನಿಬಂಧನೆ ಮಾಡಿದ ಮೇಲೆ ದಿನಕ್ಕೆ ಎಂಟು ಹತ್ತು ಸಾವಿರ ರೂಪಾಯಿ ಹೆಚ್ಚು ಉತ್ಪತ್ತಿಯಾಗುತ್ತಿದೆ. ಬಹಳ ಸಂತೋಷ. ಆದರೆ ಬಸ್ಸುಗಳು ಸರಿಯಾದ ಕಾಲಕ್ಕೆ ಓಡಾಡುತ್ತಿಲ್ಲ. ಒಂದು ಸ್ಥಳದಿಂದ ಹೊರಡುವುದು ಮತ್ತು ಸೇರುವುದು ನಿಗದಿಯಾದ ಕಾಲಕ್ಕೆ ನಡೆಯುತ್ತಿಲ್ಲ. ಚಿಕ್ಕಬಳ್ಳಾಪುರದಲ್ಲಿ ನಾನು ಎಷ್ಟೋಸಾರಿ ನೋಡಿದ್ದೇನೆ. ಇದನ್ನು ಸರಿಪಡಿಸಬೇಕು.

ಶರಾವತಿಯ ವಿಷಯದಲ್ಲಿ ಪ್ರಕಟಣೆ ಮಾಡಿರುವ ಶ್ವೇತಪತ್ರದ ವಿಚಾರವನ್ನು ಮಾತನಾಡ ಬೇಕಾಗಿದೆ.

ಇನ್ನು ಇಲೆಕ್ಟ್ರಿಕ್‌ಸಿಟಿ ಬೋರ್ಡ್ ವಿಚಾರವನ್ನು ಹೇಳಬೇಕಾಗಿದೆ. ಒಂದೂವರೆ ವರ್ಷದಿಂದ ವಿದ್ಯುತ್ ಬರುತ್ತದೆಂದು ಹೇಳುತ್ತಲೇ ಇದ್ದಾರೆ. ಆದರೆ ಯಾವುದೇ ಸೂಕ್ತ ಕ್ರಮವನ್ನು ತೆಗೆದು

ಕೊಂಡಿಲ್ಲ. ಫ್ಯೂಸ್ ಹಾಕಿಲ್ಲ, ವೈರ್ ಬೇಕಾಗಿದೆ. ಆದುದರಿಂದ ತೀವ್ರ ವಿದ್ಯುತ್ ಶಕ್ತಿ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈ ಬೋರ್ಡು ತನ್ನ ಕಾರ್ಯದಲ್ಲಿ ಅಯಶಸ್ವಿಯಾಗಿದೆ ಎಂದು ಹೇಳುತ್ತೇನೆ.

10 A. M.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧೀನಗರ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಮಂತ್ರಿಗಳು ಮಂಡಿಸಿರುವ ರೋಗಗ್ರಸ್ತ ಆಯವ್ಯಯ ವರದಿಯನ್ನು ಸ್ವಾಗತಿಸುವ ಮುಂಚೆ ಸದಸ್ಯರಾದ ನಾವು ಸಹ ರೋಗಗ್ರಸ್ತ ಮಾತುಗಳಿಂದಲೇ ನಮ್ಮ ಸಂಕ್ಷಿಪ್ತ ಅಭಿಪ್ರಾಯವನ್ನು ಕೊಡಬೇಕಾಗಿದೆ. ಅಂಕಿ ಸಂಖ್ಯೆ ಬಲ್ಲ ಗಣಿತಜ್ಞರು ವರದಿಯಲ್ಲಿನ ಅಂಕಿ ಸಂಖ್ಯೆಗಳನ್ನು ಗುಣಿಸಲಿ, ಭಾಗಿಸಲಿ, ಕೂಡಿಸಲಿ, ಕಳೆಯಲಿ, ಅಭಿಪ್ರಾಯ ಕೊಡಲಿ. On important subjects like this many can speak, but few can think. ಮುಖ್ಯ ವಿಚಾರದ ಮೇಲೆ ಬೇಕಾದಷ್ಟು ಜನ ಮಾತನಾಡಬಹುದು. ಆದರೆ ಆಲೋಚಿಸುವವರು ಮಾತ್ರ ವಿರಳ ಎಂದು ಒಬ್ಬರು ಹೇಳಿದ್ದಾರೆ. ಕಾರಣ ಈ ವರ್ಷದ ಆಯವ್ಯಯ ವರದಿಯ ಮೇಲಿನ ಜನಸಾಮಾನ್ಯರ ಪ್ರತಿಕ್ರಿಯೆ ಏನಾಗಬಹುದು ? ಅದಕ್ಕೆ ಸರಕಾರದವರು ಪ್ರತ್ಯುತ್ತರ ಏನು ಕೊಡಬಹುದು ? ಪ್ರಜೆ ಮತ್ತು ಸರಕಾರದ ಪ್ರತಿಕ್ರಿಯೆಗಳಿಗೆ ಸದಸ್ಯರಾದ ನಾವು ಏನು ಹೇಳಬಹುದು ಎಂಬುದನ್ನು ಮಾತ್ರ ಪ್ರಜಾ ಉವಾಚ, ಸರಕಾರ ಉವಾಚ, ಸದಸ್ಯ ಉವಾಚ ಎಂಬ ಆಯವ್ಯಯ ಗೀತಾ ರೂಪಕದಲ್ಲಿ ಸಂಕ್ಷಿಪ್ತವಾಗಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಪ್ರಜೆಗಳ ಉವಾಚ ಹೀಗಿದೆ : ಘನ ಸರಕಾರದವರೇ, ದೇಶ ರಕ್ಷಕರೇ, ಏನು ಕಾಲ ಬಂದಿತು? ಈ ವರ್ಷದ ದೇಶದ ಆಯವ್ಯಯ ಮುಗ್ಗರಿಸಿದೆ. ಪದಚ್ಯುತ ಮಂತ್ರಿಗಳ ಜೋಲು ಮೋರೆಯಂತೆ ಕಾಣುತ್ತಿದೆ. ಮಣ್ಣಿನಿಂದ ಮಾಡಿದ ಬಣ್ಣದ ಕುದುರೆಯ ಮೇಲೆ ಕುಳಿತು ಆರ್ಥಿಕ ಮುಗ್ಗಟ್ಟಿನ ನದಿಯನ್ನು ದಾಟಲು ಹೊರಟಿದ್ದೀರಿ. ತೆರಿಗೆಗಳ ಭಾರ ಜಾಸ್ತಿಯಾಗಿದೆ. ಧಾರಣೆವಾಸಿಗಳು ಗೌರೀಶಂಕರ ಶಿಖರದಷ್ಟು ಎತ್ತರಕ್ಕೆ ಹೋಗಿವೆ. ನಿರುದ್ಯೋಗ ನರ್ತಿಸುತ್ತಿದೆ. ಲಂಚ ಭ್ರಷ್ಟಾಚಾರ ತಾಂಡವ ನೃತ್ಯ ಮಾಡುತ್ತಿದೆ. ರೋಗ ರುಜಿನಗಳಿಗೆ ಚಿಕಿತ್ಸೆ ಪಡೆಯೋಣವೆಂದರೆ ಬೆಂಗಳೂರು ಆಸ್ಪತ್ರೆಗಳಿಂದ ವಾಪಸ್ಸು ಬರುವ ಭರವಸೆ ಎಂದೋ ಹೋಗಿದೆ. ಹೀಗಾದರೆ ಜನಸಾಮಾನ್ಯರ ಗತಿಯೇನು ? ಸ್ವಂತ ಮನೆ ಇಲ್ಲ. ಹೊಲವಿಲ್ಲ. ಕೂಲಿ ನಾಲಿ ಮಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದರೂ ಸಾಮಂತ ಪುಢಾರಿಗಳು ನಮ್ಮ ಮುಂದೆಯೂ ಲೂಟಿಯ ರುದ್ರವೀಣೆ ನುಡಿಸುತ್ತಿದ್ದಾರೆ. ಅನೇಕ ಅಧಿಕಾರಿಗಳು ಪುಢಾರಿಗಳೊಂದಿಗೆ ಸೇರಿ ತಾಳ ಹಾಕುತ್ತಿದ್ದಾರೆ. ದುರ್ಭಿಕ್ಷೆಯಲ್ಲಿ ಅಧಿಕ ಮಾಸವೆಂಬಂತೆ, ಈ ಸಾರಿ ಅಧಿಕ ಮಾಸಗಳು ಬಂದಿವೆ. ನಮ್ಮ ತಾಪತ್ರಯಗಳನ್ನು ನೋಡಲು ಆರ್ಥಿಕ ಮಂತ್ರಿಗಳೂ ಇದ್ದೀರಿ. ದುರ್ಭಿಕ್ಷ ತೊಲಗಿಸಿ ಸುಭಿಕ್ಷ ತರಬಲ್ಲಿರಾ ? ಧಾರಣೆವಾಸಿಗಳನ್ನು ಕೂಡಲೆ ಇಳಿಸಬಲ್ಲಿರಾ ? ನಮಗೆ ಬಾಡಿಗೆ ಮನೆಯಾದರೂ ಚಿಂತೆಯಿಲ್ಲ, ಹೊಟ್ಟೆ ತುಂಬಾ ಊಟ, ಮೈ ತುಂಬ ಬಟ್ಟೆ ಇದ್ದವ ದೇವ ಮಾನವ, ಇಲ್ಲದವ ನರಕ ಮಾನವ ಎಂದು ಬಲ್ಲವರು ಹೇಳಿದ್ದಾರೆ. ನಮ್ಮನ್ನು ಇಂತಹ ದೇವ ಮಾನವರನ್ನಾಗಿ ಮಾಡುವ ಕಾರ್ಯ ಕ್ರಮಗಳನ್ನಾದರೂ ಕೈಕೊಳ್ಳುವಿರಾ ? ಇಲ್ಲದೆ ನಾವು ಊರು ಬಿಟ್ಟು ಕಾಡು ಸೇರಿ ಸಂನ್ಯಾಸಿಗಳಾಗಲು ಅಪ್ಪಣೆ ಕೊಡುವಿರಾ ಎಂದು ಪ್ರಜೆಗಳು ಕೇಳುತ್ತಿದ್ದಾರೆ.

ಇದಕ್ಕೆ ಸರಕಾರದವರ ಉವಾಚ ಈ ರೀತಿ ಇದೆ. ಓ ತಾಪತ್ರಯ ಶಿಖಾಮಣಿ ಪ್ರಜೆಗಳೇ ನಿಮ್ಮ ಕೇಳಿಕೆಗಳೆಲ್ಲಾ ನಮಗೆ ಅರ್ಥವಾಗಿವೆ. ನಿರಾಶರಾಗಬೇಡಿ. ಹರಿಹರ ಬ್ರಹ್ಮಾದಿಗಳಿಗೂ ತಾಪತ್ರಯ ತಪ್ಪಿದ್ದಲ್ಲ. ನಮ್ಮ ನಿಮ್ಮ ಪಾಡೇನು ? ಲಂಚ ಭ್ರಷ್ಟಾಚಾರ ಇದೆ. ಸಾಮಂತ ಪುಢಾರಿಗಳ ಕಾಟ ಜಾಸ್ತಿಯಾಗಿದೆ ಎಂಬುದು ನಮ್ಮ ಗಮನಕ್ಕೂ ಬಂದಿದೆ. ಅದನ್ನು ತಪ್ಪಿಸಲು ದಾರಿ ಹುಡುಕುತ್ತಿದ್ದೇವೆ. ಸರಿಯಾದ ದಾರಿ ನಿಮಗೆ ಗೊತ್ತಿದ್ದರೆ ತಿಳಿಸಿ. ಬಡ ನೌಕರರಿಗೆ ಮತ್ತು ವಯಸ್ಸು ದಾಟಿದ ವಿಧವೆಯರಿಗೆ ಮತ್ತು ಗಂಡಸರಿಗೆ ಜೀವನ ಸೌಕರ್ಯಕ್ಕಾಗಿ ವ್ಯವಸ್ಥೆ ಕಲ್ಪಿಸಿದ್ದೇವೆ. ಹಾಸಿಗೆ ಇದ್ದಷ್ಟು ಕಾಲು ಚಾಚೋಣ. ಆಹಾರ ಧಾನ್ಯಗಳ ಬೆಲೆಗಳನ್ನು ಹತೋಟಿಗೆ ತರುವ ಬಗ್ಗೆ ಖಚಿತವಾದ ಕಾರ್ಯ ಕ್ರಮವನ್ನು ಕೈಕೊಳ್ಳಬೇಕೆಂದಿದ್ದೇವೆ. ಸಂನ್ಯಾಸಿಗಿಂತಲೂ ಸಂಸಾರಸ್ಥ ಜೀವನವೇ ಪ್ರಶಸ್ತವಾದದ್ದು. ಎಂ. ಎ. ಮಾಡಿದವನೂ ಒಂದೇ, ಎಮ್ಮೆ ಕಾಯುವವನೂ ಒಂದೇ ಎನ್ನುವ ಕಾಲ ಬರುತ್ತಿದೆ. ಲಂಚ ಹೊಡೆದು ಶ್ರೀಮಂತರಾದರೇ ನ್ಯಾಯಿತು ! ಬೆನ್ನು ಬಾಗುವಂತೆ ತೆರಿಗೆ ಹಾಕಿ ಅವರನ್ನೂ ಬಡವರ ಮಟ್ಟಕ್ಕೆ ಇಂದಲ್ಲ ನಾಳೆ ಇಳಿಸುತ್ತೇವೆ. ನಾವು ಮಿತವ್ಯಯ ಸಾಧಿಸಲು ಪ್ರಯತ್ನಿಸುತ್ತಿದ್ದೇವೆ. ಕಾಲಾನುಕಾಲಕ್ಕೆ ಬಡವಂ ಬಲ್ಲಿದನಾಗನೇ ಎಂಬ ಮಂತ್ರ ಪುಢಾರಿಗಳಿಂದ ಕಲಿಯಿರಿ. ಒಪ್ಪತ್ತುಂಡವ ಯೋಗಿ ಎಂಬಂತೆ ಹಿತ

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಮಿತವಾಗಿದ್ದು ತ್ಯಾಗ ಕಲಿಯಿರಿ. ಭೋಗಿಗಳಿಗೂ ಒಂದಲ್ಲ ಒಂದು ದಿನ ನಿಮ್ಮ ಶಾಪ ತಾಪ ತಟ್ಟೀತು. ಅವರೂ ಆರ್ಥಿಕ ರೋಗಿಗಳಾದಾಗ, ತಾಪತ್ರಯ ಕಳೆಯುವ ಕಾಲ ಎದುರು ನೋಡಿರಿ. ತುರ್ತು ಪರಿಸ್ಥಿತಿಯಿರುವ ಕಾರಣ ನಿಮ್ಮ ತಾಪತ್ರಯಗಳನ್ನು ನೋಡಿಕೊಳ್ಳಲು ಆರ್ಥಿಕ ಮಂತ್ರಿಗಳು ಯತ್ನವಿಲ್ಲದೆ ಇರಬೇಕಾಗಿದೆ. ಆತುರ ಪಡಬೇಡಿ, ತಾಳಿದವನು ಬಾಳಿಯಾನು. ಹೇಳುವ ಧರ್ಮ ನಿಮ್ಮದು, ಮಾಡುವ ಕರ್ಮ ನಮ್ಮದು 'ಸರ್ವೇ ಜನಾ: ಸುಖಿನೋ ಭವಂತು' ಆಗಲೆಂದು ನಾವು ಪ್ರಯತ್ನಿಸುತ್ತಿದ್ದೇವೆ. ಈ ರೀತಿಯಾಗಲು ನಮ್ಮೊಂದಿಗೆ ನೀವು ಸರ್ವೇಶನ ಧ್ಯಾನ ಮಾಡಿರಿ. ಮತ್ತೇನು ? ಶಾಂತಿ: ಶಾಂತಿ: ಶಾಂತಿ:, ಎಂದು ಸರಕಾರದವರು ಪ್ರಜೆಗಳ ಉವಾಚಕ್ಕೆ ಉತ್ತರ ಕೊಡಬಲ್ಲರು.

ಈ ರೀತಿ ಪ್ರಜೆಗಳ ಉವಾಚ ಮತ್ತು ಘನ ಸರಕಾರದವರ ಉವಾಚಯಿರುವಾಗ ಪ್ರತಿನಿಧಿಗಳಾದ ನಮ್ಮ ಉವಾಚವೂ ಇರಬೇಕಲ್ಲವೇ? ನಮ್ಮ ಉವಾಚವೂ ಈ ರೀತಿ ಇದೆ. ಜಗದೀಶಾ ನೀನೆ ಪಾರು ಮಾಡೈ ಈ ದುಸ್ಥಿತಿಯಿಂದ ನಮ್ಮ ನಲ್ಮೆಯ ಕನ್ನಡ ನಾಡಂ ಎಂದು ಪ್ರಾರ್ಥಿಸೋಣ. ಸುಖಸ್ಯಾನಂತರಂ ದು:ಖಂ, ದು:ಖಸ್ಯಾನಂತರಂ ಸುಖಂ ಚಕ್ರವತ್ ಪರಿವರ್ತಂತೆ ದು:ಖಾನಿಚ ಸುಖಾನಿಚ - ಸುಖ ದು:ಖಗಳು ಚಕ್ರದೋಪಾದಿಯಲ್ಲಿ ತಿರುಗುತ್ತಿರುವುದರಿಂದ ಸುಖ ಬಂದಾಗ ಹಿಗ್ಗಬೇಡಿ, ದು:ಖ ಬಂದಾಗ ಕುಗ್ಗಬೇಡಿ ಎಂದು ಜನತೆಯ ಉವಾಚಕ್ಕೆ ನಮ್ಮ ಸಮಾಧಾನವುಂಟು.

ಎಚ್ಚರಿಕೆ! ಎಚ್ಚರಿಕೆ! ಪದವಿಯಾರಿಗೂ ಸ್ಥಿರವಲ್ಲ ನಿಶ್ಚಯ ವೆಚ್ಚರಿಕೆ,
ಸತ್ಯ ಧರ್ಮಗಳಿಂದ ನಿಷ್ಠೆಯಿಂದನಡೆಯಿರಿ ಎಚ್ಚರಿಕೆ, ಎಚ್ಚರಿಕೆ,
ನಿಷ್ಠೆ ತಪ್ಪಿದರೆ ಕಷ್ಟವೂ ತಪ್ಪದು ಎಚ್ಚರಿಕೆ, ಎಚ್ಚರಿಕೆ,
ಎಂದು ಘನ ಸರಕಾರದವರ ಉವಾಚಕ್ಕೆ ನಮ್ಮ ನಮ್ರತೆಯ ಎಚ್ಚರಿಕೆಯುಂಟು.

ಕೊನೆಯದಾಗಿ ವಿವೇಕ ಮಾಯವಾಗಿ ಅವಿವೇಕ ಹೆಚ್ಚಾದಾಗ ದೇಶದ ಆರ್ಥಿಕ ವ್ಯವಸ್ಥೆಯು ಅವನತಿ ಆಗುವುದೆಂದು ಪ್ರಸಿದ್ಧ ರಾಜಕಾರಣಿಯೊಬ್ಬರು ಹೇಳಿದ್ದಾರೆ. ಹೀಗೇನಾದರೂ ನಮ್ಮಲ್ಲಿಯೂ ಆಗಿದೆಯೇನೆಂದು ಶೋಧಿಸಿ ನೋಡಿ ಎಂದು ಸ್ವಾಭಾವಿಕವಾಗಿ ನಾವು ಹೇಳ ಬಯಸುತ್ತೇವೆ. ಆರ್ಥಿಕ ಮುಗ್ಗಟ್ಟಿನಿಂದ ಓಡುವ ಈ ವರ್ಷದ ಆಯವ್ಯಯವು ಚೇತರಿಸಿಕೊಂಡು ದೇಶದ ಅಭಿವೃದ್ಧಿಗೆ ನೆರವಾಗಲೆಂದು ಹಾರೈಸಿ ಆಯವ್ಯಯ ವರದಿಯನ್ನು ಅನುಮೋದಿಸುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, 1964-65 ನೇ ಸಾಲಿನ ಬಜೆಟ್ ಎಸ್ಟಿಮೇಟ್ಸ್ ಡಿಸ್‌ಕಸ್ ಮಾಡುತ್ತಿರುವ ಈ ಸಂದರ್ಭದಲ್ಲಿ ನಾನು ಕೆಲವು ವಿಷಯಗಳ ಬಗ್ಗೆ ಮಾತನಾಡಬೇಕೆಂದು ನಿಂತುಕೊಂಡಿದ್ದೇನೆ. ಮೂರನೆಯ ಪಂಚವಾರ್ಷಿಕ ಯೋಜನೆಯ ಮೂರನೆಯ ವರ್ಷ ಮುಗಿಯುತ್ತಾ ಇರುವ ಈ ಸಂದರ್ಭದಲ್ಲಿ ನಮ್ಮ ಫೈನಾನ್ಸ್ ಮಿನಿಸ್ಟರ್ ಅವರು ಕೆಲವು ಸೋಷಿಯಲ್ ಸೆಕ್ಯೂರಿಟಿ ಮೆಷರ್ಸ್ ಅನ್ನು ತಗೆದುಕೊಂಡಿದ್ದಾರೆ. ನಿಜವಾಗಿಯೂ at least there is some kind of attempt ಎಂದು ಹೇಳಬಹುದು. ಅದು ಎಷ್ಟು ಜನಕ್ಕೆ ಸಿಕ್ಕುತ್ತದೊ ಎಷ್ಟು ಜನಕ್ಕೆ ಸಿಕ್ಕುವುದಿಲ್ಲವೊ, ಆದರೂ ಒಂದು ಉದ್ದೇಶದಿಂದ ಇದನ್ನು ಷುರುಮಾಡುತ್ತಾರೆ. ವಿದ್ಯಾವಂತರಿಲ್ಲದ ನಮ್ಮ ದೇಶದಲ್ಲಿ ಸರಿಯಾದ ರಿಕಾರ್ಡ್ ಇರುವದಿಲ್ಲ. ನಮ್ಮ ದೇಶದಲ್ಲಿ 70 ವರ್ಷ ಮೀರಿದವರು ಎಷ್ಟು ಜನ ಇದ್ದಾರೆ ಎಷ್ಟು ಜನಕ್ಕೆ ಸಹಾಯ ಕೊಡಬೇಕಾಗುತ್ತದೆ, ಎಷ್ಟು ಹಣಬೇಕು ಎಂಬುದನ್ನು ಗುರುತು ಹಚ್ಚುವುದು ಕಷ್ಟವಾಗುತ್ತದೆ.

ಅಂಥ ಸಂದರ್ಭದಲ್ಲಿ ಯಾರು ಯಾರಿಗಾದರೂ ಸರ್ಟಿಫಿಕೇಟು ಕೊಟ್ಟು ಬಿಡಬಹುದು. ಯಾರಾದರೂ ಇದಕ್ಕೆ ಇನ್‌ಸ್ಟಿಟ್ಯೂಶನ್ನನ್ನೆ ಸ್ಟಾರ್ಟ್ ಮಾಡಿಬಿಡಬಹುದು; ಅಂಥ ಇನ್‌ಸ್ಟಿಟ್ಯೂಶನ್ನುಗಳಿಗೆ ನಮ್ಮ ದೇಶ ಹೆಸರುವಾಸಿಯಾಗಿ ಬಿಟ್ಟಿದೆ. ಅಂಥ ಇನ್‌ಸ್ಟಿಟ್ಯೂಶನ್ನುಗಳನ್ನು ತೆರೆದು ಅವರು ಎಕ್ಸ್‌ಪ್ಲಾಯಿಟ್ ಮಾಡುವದರಿಂದ ತೊಂದರೆ ಎಲ್ಲಿ ಬಂದುಬಿಡುತ್ತದೋ ಎಂಬ ಹೆದರಿಕೆ ಇದೆ. ಇದಕ್ಕೆ ನಿಗಾ ಕೊಟ್ಟು ಮುದುಕರಿಗೆ ನಿಜವಾದ ರಿಲೀಫ್ ಕೊಡುತ್ತಾರೆಂದು ನಂಬಿಕೊಂಡಿದ್ದೇನೆ. ಅದೇ ವಿಧದಲ್ಲಿ ರೋಷೇಡ್ ಎಂಪ್ಲಾಯಿಗಳು ಮೃತಪಟ್ಟಲ್ಲಿ ಅವರ ವಿಡೊಗಳಿಗೆ ರಿಲೀಫ್ ಮೆಶರಾಗಿ ಫ್ಯಾಮಿಲಿ ಪೆನ್‌ಶನ್ ಕೊಡಬೇಕೆಂದು ಮುಂದೆ ಬಂದು, ಈ ಯೋಜನೆಯಲ್ಲಿ ಒಂದು ಹೆಜ್ಜೆಯನ್ನಾದರೂ ಇಟ್ಟಿರುವುದಕ್ಕೆ ಅವರನ್ನು ಅಭಿನಂದನೆ ಮಾಡುತ್ತಾ ಇದ್ದೇನೆ.

ಇನ್ನು ಅಗ್ರಿಕಲ್ಚರಲ್ ಪ್ರೊಡಕ್ಷನ್ ವಿಷಯವಾಗಿ ಬಹಳ ದೀರ್ಘವಾಗಿ ಅನೇಕ ವಿಧವಾದ ಎನ್‌ಕರೇಜಿಂಗ್ ಮಾತುಗಳನ್ನು ಆಡಿದ್ದಾರೆ. ಅದು ಸಾಧಾರಣವಾಗಿ ಒಂದು ಫ್ಯಾಶನ್ ಆಗಿದೆ. ಈಗ ಈ ತರಹ ಸಹಾಯಮಾಡುತ್ತೇವೆ, ಆ ತರಹ ಸಹಾಯಮಾಡುತ್ತೇವೆ, ನಾವು ಜಾಸ್ತಿ ಬೆಳೆ ಬೆಳೆಸಿ ಬಿಟ್ಟಿದ್ದೇವೆ ಅಂತ ಹೇಳುತ್ತಾರೆ. ನಮ್ಮ ದೇಶದಲ್ಲಿ ಮೇಲಿನಿಂದ ಕೆಳಗಿನವರೆಗೆ ಪ್ರೈಮ್‌ಮಿನಿಸ್ಟರಿಂದ ಕೊನೆಯವರೆಗೂ ಅಗ್ರಿಕಲ್ಚರಲ್ Fieldman ವರೆಗೆ ಈ ವಿಚಾರದಲ್ಲಿ ಮಾತನಾಡುವುದು ಒಂದು ಫ್ಯಾಶನ್ ಆಗಿದೆ. ಹೇಗೆ ಜಾಸ್ತಿಯಾಗಿದೆ? ಬೆಳೆದಿರುವ ಬೆಳೆ ಎಲ್ಲಿ ಹೋಗಿದೆ ? ಒಂದು ಹೊತ್ತು ಒಪ್ಪತ್ತು ಊಟ ಇಲ್ಲದೆ ಇರುವ ಕಾಲದಲ್ಲಿ ಜಾಸ್ತಿಯಾಗಿದೆ ಜಾಸ್ತಿಯಾಗಿದೆ ಎಂದು ಹೇಳುವುದಕ್ಕೆ ನಾಚಿಕೆಯಾಗುವುದಿಲ್ಲವಲ್ಲ ಎಂದು ಬಹಳ ವ್ಯಸನವಾಗಿದೆ. ಒಂದು ಕಡೆ ಮೇಜರ್ ಇರ್ರಿಗೇಶನ್ ಪ್ರಾಜೆಕ್ಟ್ ಕೆಳಗೆ ಲಕ್ಷಾಂತರ ಎಕರೆ ಲ್ಯಾಂಡ್ ಇರ್ರಿಗೇಟ್ ಮಾಡಲು ತಯಾರಾಗಿದ್ದರೂ, ಈ ಭೂಮಿಯನ್ನು ಹದಕ್ಕೆ ತರುವುದು ಕಷ್ಟವಾಗುತ್ತದೆಂದು ಹೇಳುತ್ತೀರ. ಇನ್ನೊಂದು ಕಡೆ ಮೈನರ್ ಇರ್ರಿಗೇಶನ್‌ಗೆ ಕೆಳಗೆ ಬೇಕಾದಷ್ಟು ಅನುಕೂಲವಾಗುತ್ತೆ ಸಹಾಯ ಮಾಡುತ್ತಾ ಇದ್ದೇವೆ, ಎಲ್ಲವನ್ನೂ ಮಾಡಿಬಿಟ್ಟಿದ್ದೇವೆ ಎಂದು ಹೇಳುತ್ತೀರ. ಒಂದಕ್ಕೊಂದಕ್ಕೆ ನನ್ನ ಭಾವನೆಯಲ್ಲಿ ವಿರೋಧಾಭಾಸವಾಗುತ್ತದೆ. ಕೋಟ್ಯಂತರ ರೂಪಾಯಿ ಪ್ರಾಜೆಕ್ಟುಗಳಮೇಲೆ ಖರ್ಚಾಗುತ್ತಿದೆ. ಆದರೆ ಉಪಯೋಗವಿಲ್ಲದಿರುವಾಗ ಮೈನರ್ ಇರ್ರಿಗೇಶನ್ನಿಗೆ ಜಾಸ್ತಿ ಪ್ರಾಶಸ್ತ್ಯ ಕೊಡಬೇಕು. ಸುಲಭವಾಗಿ ರೈತರು ಬೆಳೆಗಳನ್ನು ತೆಗೆದುಕೊಂಡು ಬರುವುದಕ್ಕೆ ಅನುಕೂಲವಿರುವುದು ; ಹೇಗಾದರೂ ಕಷ್ಟಮಾಡಿ ಫುಡ್‌ಪ್ರೊಡಕ್ಷನ್ ಜಾಸ್ತಿ ಮಾಡುತ್ತಾರೆ. ಅದರಿಂದ ಸಾಧಾರಣ ಜನಗಳಿಗೆ ಅನುಕೂಲವಾಗುತ್ತದೆ. ಈ ವಿಧದಿಂದ ಮೈನರ್ ಇರ್ರಿಗೇಶನ್ನಿಗೆ ಪ್ರಾಶಸ್ತ್ಯ ಜಾಸ್ತಿ ಮಾಡಬೇಕೆಂದು ನಾನಾದರೂ ಹೇಳುತ್ತಾ ಇದ್ದೇನೆ. ಈ ಪ್ರಾಶಸ್ತ್ಯ ಕೊಡುವ ಕಾಲದಲ್ಲಿ ಹೊಟ್ಟೆ ತುಂಬಿದ್ದವರಿಗೇ ತಿರುಗ ಊಟ ಬಡಿಸುವುದರಲ್ಲಿ ಅರ್ಥವಿಲ್ಲ. ಎಲ್ಲಿ ಸ್ಕೇರ್ಸಿಟಿ ಕಂಡಿಶನ್ನುಗಳು ಜಾಸ್ತಿ ಇವೆ, ಎಲ್ಲಿ ಫ್ಯಾಮಿನ್ ಬೆಲ್ಟ್ ಇದೆ, ಅಂಥ ಕಡೆಗಳಲ್ಲಿ ಮೊದಲು ಸಹಾಯ ಕೊಟ್ಟು ಅಂಥವರನ್ನೂ ಇತರರ ಸಾಮಾನ್ಯ ಸ್ಥಿತಿಗೆ ತರಲು ಪ್ರಯತ್ನ ಪಡಬೇಕು. ದೇವರು ನದಿ, ಹೊಳೆ ಮುಂತಾದ ಯಾವ ತರಹ ಅನುಕೂಲವನ್ನೂ ಕೊಡದಿದ್ದರೆ, ಬಾವಿಗಳನ್ನು ಜಾಸ್ತಿಯಾಗಿ ತೆಗೆಯುವುದಕ್ಕೆ ಅವಕಾಶಕೊಟ್ಟು ಲಿಫ್ಟ್ ಇರ್ರಿಗೇಶನ್ ಅನುಕೂಲ ಮಾಡಿಕೊಡಬೇಕು.

ದೊಡ್ಡದಾಗಿ ಮೂರು ಸಾವಿರ ರೂಪಾಯಿ ಕೊಟ್ಟುಬಿಟ್ಟು ಎಲ್ಲಾ ಅನುಕೂಲ ನಿಜವಾಗಿ ಆಗುತ್ತದೆಂದರೆ, ಕೆಲವು ಕಡೆ ನಮ್ಮ ಊರಿನೊಳಗೆ ಮೂರು ಸಾವಿರ ರೂಪಾಯಿಗೂ ಬಾವಿ ಆಗುವುದಿಲ್ಲ. ಮೂರು ಸಾವಿರ ರೂಪಾಯಿ ಸಾಲ ತೆಗೆದುಕೊಳ್ಳುವ ರೈತರಲ್ಲಿ ಸಾಲ ಇಲ್ಲದೆ ಇರುವವರು ಯಾರೂ ಸಿಗುವುದಿಲ್ಲ. ಎಲ್ಲರೂ ಸಾಲಗಾರರಾಗಿರುತ್ತಾರೆ. ಆದ್ದರಿಂದ ಸರಕಾರ ಯಾರಿಗೆ ಬೇಕಾದರೂ ದುಡ್ಡು ಕೊಡಬೇಕಾಗುತ್ತದೆ. ಹಾಗೆ ಕೊಟ್ಟರೆ ದಿವಾಳಿ ಆಗುವ ಪ್ರಶ್ನೆ ಬರುತದೆ ಎಂದು ಹೇಳಬಹುದು. ಅವರಿಗೆ ಹಣ ಕೊಟ್ಟು ಅಂಥ ದಿವಾಳಿಯಾಗಬೇಕು ಅಂತ ಹೇಳುವುದಿಲ್ಲ. ಅವರಿಗೆ ಯಾವ ತರಹ ಅನುಕೂಲ ಮಾಡಬೇಕು ಎಂಬುದನ್ನು ಯೋಚಿಸಬೇಕು. 4-5 ಜನ ಸೇರಿಸಿ ಅವರಿಗೆ ಏನಾದರೂ ಸರಕಾರದವರು ಬಾವಿ ತೆಗೆಸಿಕೊಡಬಹುದು. ಒಬ್ಬರಿಗೆ ಇನೊಬರು ಜಾಯಿಂಟಾಗಿ ಬಾವಿ ತೆಗೆಯುವುದಕ್ಕೆ ಸಹಾಯಮಾಡಬೇಕು. ಹೀಗೆಮಾಡಿ ಅವರನ್ನು ಮುಂದಕ್ಕೆ ತರಬೇಕಾಗಿದೆಯೇ ಹೊರತು ಬೇರೆ ಮಾರ್ಗವಿಲ್ಲ. ಅದು ಹೇಗಾಗಿದೆಯೆಂದರೆ ಮದುವೆಯಾದ ಹೊರತು ಹುಚ್ಚು ಬಿಡುವ ಹಾಗಿಲ್ಲ ಹುಚ್ಚು ಬಿಟ್ಟ ಹೊರತು ಮದುವೆಯಾಗುವ ಹಾಗಿಲ್ಲ. ಅವರು ಬಾವಿ ತೆಗೆಯುವವರೆಗೆ ಬೆಳೆ ಇಡುವ ಹಾಗಿಲ್ಲ; ಬೆಳೆ ಇಟ್ಟಹೊರತು ಅವರು ಅಭಿವೃದ್ಧಿಯಾಗುವ ಹಾಗಿಲ್ಲ. ಇದಕ್ಕೆ ಏನಾದರೂ ಒಂದು ಉಪಾಯ ಮಾಡಬೇಕೆಂದು ಸರಕಾರಕ್ಕೆ ಹೇಳುತ್ತಾ ಇದ್ದೇನೆ.

1964 65ರಲ್ಲಿ ಫುಡ್ ಪ್ರೊಡಕ್ಷನ್ ಜಾಸ್ತಿಯಾಗುತದೆ, 2 67 ಲಕ್ಷ ಟನ್ ಇಂಕ್ರೀಸ್ ಆಗುತ್ತದೆ ಅಂತ ಹೇಳುತ್ತಾ ಇದ್ದಾರೆ. ಇದು ನಿಜವಾಗಿ ವಿಷುಅಲ್ ಥಿಂಕಿಂಗ್. ದೇವರು ಹಾಗೇ ಅನುಕೂಲ ಮಾಡಿಕೊಡಲಿ ಎಂದು ಸರಕಾರದ ಜೊತೆಗೆ ದೇವರಲ್ಲಿ ನಾನು ಮೊರೆ ಇಡುತ್ತೇನೆ.

ಕೋಕೋನಟ್ ಪ್ಲಾಂಟೇಶನ್ ವಿಚಾರವಲ್ಲಿ ಹೇಳಿದ್ದಾರೆ. ಕೋಕೋನಟ್ ಪ್ಲಾಂಟೇಶನ್ನಿಗೆ ಹೊಸದಾಗಿ ಸೀಡ್‌ಲಿಂಗ್ಸ್ ಇಡುವುದು ಸರಿ ಹಳೆಯ ತೋಟಗಳನ್ನು ರಿಜುವನೇಶನ್ ಮಾಡುವ ಸ್ಕೀಮೂ ಇದೆ. ಆಲ್-ಇಂಡಿಯ ಕೋಕೋನಟ್ ಬೋರ್ಡಿನವರು ಎಷ್ಟೋ ಸಜೆಶನ್ನುಗಳನ್ನು ಕೊಟ್ಟಿದ್ದಾರೆ. ನಮ್ಮ ಸರಕಾರದವರು ಕೆಲವು ರೂಲುಗಳನ್ನು ಫ್ರೇಮ್ ಮಾಡದೆ, 2-3 ವರ್ಷದಿಂದ ಹಾಗೆಯೇ ಇಟ್ಟುಕೊಂಡು, ಫರ್ಟಿಲೈಸರ್ ಲೋನಾಗಲಿ, ಇನ್ಯಾವತರಹ ಲೋನಾಗಲಿ ಕೊಟ್ಟು ಸಹಾಯ ಮಾಡದೆ ಇದ್ದರೆ. ಇಂಥ ದೊಡ್ಡ ಸ್ಕೀಮಿನಲ್ಲಿ ರೂಲ್ ಫ್ರೇಮ್ ಮಾಡುವುದರಲ್ಲಿ ಇಷ್ಟು ಲೆತಾರ್ಜಿಕ್ ಇದ್ದು ಬರುವ ಹಣವೆಲ್ಲಾ ಹಾಳಾಗಿ ಹೋಗುತ್ತಾ ಇದೆ. ಇದಕ್ಕೆ ನಿಗಾ ಕೊಡಬೇಕು ಎಂದು ಹೇಳುತ್ತೇನೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಸಾಯಿಲ್ ಕನ್‌ಸರ್ವೇಶನ್ ವಿಚಾರದಲ್ಲಿ ಬೇರೆ ಪ್ರಿಂಟ್ ಆಗುತ್ತಾ ಇದೆ. ಯಾವ ಕಡೆಯಲ್ಲಿಯೂ ಇದನ್ನು ತೆಗೆದುಕೊಂಡಿಲ್ಲ. ಇದ್ದದ್ದರಲ್ಲಿ ಮೈಸೂರು ಡಿಸ್ಟ್ರಿಕ್ಟಿಗೆ ಯಾವ ತರಹವಾದರೂ ಮನಸ್ಸು ಕೊಡಿರಿ ಎಂದು ಕೇಳಿಕೊಳ್ಳುತ್ತೇನೆ.

ಇನ್ನು ರೂರಲ್ ವಾಟರ್ ಸಪ್ಲೈ ವಿಚಾರದಲ್ಲಿ ಎಷ್ಟೋ ಪ್ರೋಗ್ರಾಂ ಸೇರಿದೆ. ಈ ಸಭೆಯಲ್ಲಿ ಆ ಬಗ್ಗೆ ನಾನು ಪ್ರಶ್ನೆಗಳನ್ನು ಕೇಳಿದ್ದೇನೆ. ಒಂದೊಂದು ಊರಿಗೂ ಒಂದೊಂದು ವೆಲ್ ಕೊಟ್ಟು ಬಿಡುತ್ತೇವೆಂದು ಇವರು ಪ್ರಾಮಿಸ್ ಮಾಡಿದರು. ನನ್ನ ತಾಲ್ಲೂಕಿನಲ್ಲಿ ಎಷ್ಟೊ ಊರುಗಳಿಗೆ ಒಂದು ಬಾವಿಯೂ ಇಲ್ಲ; ಬಾವಿ ಇಲ್ಲದ ಊರುಗಳಿವೆ. ದಯಮಾಡಿ ಸರಕಾರದವರು ಅದಕ್ಕೆ ನಿಗಾ ಕೊಡಬೇಕೆಂದು ಹೇಳುತ್ತಿದ್ದೇನೆ.

ಹೆಲ್ತ್ ಸರ್ವೀಸಸ್ ವಿಚಾರದಲ್ಲಿ ಎಕ್ಸ್‌ಪೆಂಡಿಚರ್ ಏನೋ ಜಾಸ್ತಿಯಾಗುತ್ತಾ ಇದೆ. ಎಕ್ಸ್‌ಪೆಂಡಿಚರ್ ಜಾಸ್ತಿಯಾದ ತಕ್ಷಣ ಅನುಕೂಲಗಳು ಸಿಗುತ್ತವೆಂದಲ್ಲ ಎಕ್ಸ್‌ಪೆಂಡಿಚರ್ ವಿಷಯದಲ್ಲಿ ಮಾತನಾಡುವುದಕ್ಕೆ ಕೊಟ್ಟಿರುವ ಟೈಮು ಸಾಕಾಗುವುದಿಲ್ಲ. ಈಗಲೇ ನಾನು ಸ್ಪೀಕರ್‌ರವರನ್ನು ಅಡ್ವಾನ್ಸ್ ಆಗಿ ಕೇಳುತ್ತೇನೆ—ಈ ಡಿಮ್ಯಾಂಡಿನ ಮೇಲೆ ಮಾತನಾಡುವುದಕ್ಕೆ ನನಗೆ ಸ್ವಲ್ಪ ಅವಕಾಶಮಾಡಿ ಕೊಡಬೇಕೆಂದು.

ಈ ರೂರಲ್ ಡೆವಲಪ್‌ಮೆಂಟ್ ರೋಡುಗಳ ವಿಚಾರದಲ್ಲಿ ಹೇಳಬೇಕೆಂದರೆ ಬೇಕಾದಷ್ಟು ದುಡ್ಡು ಖರ್ಚು ಮಾಡಿದ್ದೀರ, ನಿಜ. ಆದರೆ ಖರ್ಚು ಮಾಡಿರುವ ದುಡ್ಡು ಅನ್ಯಾಯವಾಗಿ, ವೇಸ್ಟ್ ಆಗಿ ಹೋಗುತ್ತಾ ಇದೆ. ಮೆಂಟೆನೆನ್ಸ್ ಇಲ್ಲದೆ, ಹಿಂದೆ ಅಲ್ಲಿ ರೋಡಿತ್ತು ಎಂದು ಹೇಳುವುದಕ್ಕೆ ಆಗುವ ಹಾಗಿಲ್ಲ, ರೋಡುಗಳು ಅಷ್ಟು ಹಾಳಾಗಿ ಹೋಗಿವೆ. ಮೆಂಟೆನೆನ್ಸ್ ವಿಚಾರದಲ್ಲಿ ಏನಾದರೂ ಸ್ವಲ್ಪ ನಿಗಾ ಕೊಡಬೇಕು.

ಕೊನೆಯದಾಗಿ ಹೇಳಬೇಕೆಂದರೆ ನಮ್ಮ ಎಜುಕೇಶನ್ ಡಿಪಾರ್ಟ್‌ಮೆಂಟ ವಿಚಾರದಲ್ಲಿ ಎಲ್ಲರೂ ಅನೇಕ ತರಹದಲ್ಲಿ ಹೇಳಿದ್ದಾರೆ ಇದರ ವಿಚಾರ. ನಾನಾದರೂ ಹೇಳಬೇಕಾದರೆ, ಅದು ಒಂದು ಹುಚ್ಚಾಸ್ಪತ್ರೆ ಅನ್ನಿಸುತ್ತದೆ. ಎಜುಕೇಶನ್ ಡಿಪಾರ್ಟ್‌ಮೆಂಟ್ ಏಕೆ ಹೀಗೆ ಆಗಿಹೋಯಿತು? ಹೇಗೆ ಈ ಆಸ್ಪತ್ರೆ ಸರಿಮಾಡುವುದು ಎಂದು ನನಗೆ ಅರ್ಥವಾಗುತ್ತಿಲ್ಲ. ನನ್ನದು ಒಂದು ಹಂಬಲ್ ಸಜೆಶನ್ ಇದೆ. ಅದನ್ನು ಸರಕಾರದವರು ವಿಚಾರ ಮಾಡಬೇಕೋ ಏನೋ ಎಂದು ಹೇಳುತ್ತಾ ಇದ್ದೇನೆ. ಮೆಡಿಕಲ್ ಡಿಪಾರ್ಟ್‌ಮೆಂಟೇ ಹೇಗೆನೋ ಮೆಡಿಕಲ್ ಕಾಲೇಜಿಗೆ ಸೀಟುಗಳನ್ನು ಕೊಡುವುದೆ ಅಲ್ಲದೆ, ಸರ್ವ ವಿಧದಲ್ಲಿಯೂ ಅದರ ವಿಷಯಗಳನ್ನು ನೋಡಿಕೊಳ್ಳುತ್ತಾ ಇದ್ದಾರೆ. ಆ ಇಲಾಖೆಗೇ ಈ ಕಾಲೇಜುಗಳನ್ನು ವರ್ಗಾಯಿಸಬಹುದು. ಅದೇ ರೀತಿ ಟೆಕ್ನಿಕಲ್ ಎಜುಕೇಶನ್ ಮತ್ತು ಇಂಜನಿಯರಿಂಗ್ ಕಾಲೇಜುಗಳನ್ನು ಪಿ. ಡಬ್ಲ್ಯು. ಡಿ.ಗೆ ವಹಿಸಬಹುದು. ಲಾ ಕಾಲೇಜುಗಳನ್ನು ರಾಮರಾಯರ ಲಾ ಡಿಪಾರ್ಟ್‌ಮೆಂಟಿಗೂ, ಕಾಮರ್ಸ್ ಕಾಲೇಜುಗಳನ್ನು ಇಂಡಸ್ಟ್ರೀಸ್ ಇಲಾಖೆಗೂ, ಎಲ್ಲಾ ಸೈನ್ಸ್, ಆರ್ಟ್ಸ್ ಕಾಲೇಜುಗಳನ್ನು ಯೂನಿವರ್ಸಿಟಿಗಳಿಗೆ ಕೊಡಬೇಕು. ಪ್ರೈಮರಿ ಎಜುಕೇಶನ್ನನ್ನು ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಹಂಚಿಬಿಟ್ಟಿತು ಎಂದರೆ ಇದು ಏನಾದರೂ ಚೆನ್ನಾಗಿ ನಡೆಯಬಹುದೇನೊ. ನಮ್ಮ ಎಜುಕೇಶನ್ ಮಿನಿಷ್ಟರ ಮೇಲೆ ಯಾವ ತರಹ ಕೋಪದಿಂದಾಗಲಿ, ಉದ್ದೇಶದಿಂದಾಗಲಿ ಹೇಳುತ್ತಾ ಇಲ್ಲ. ಬೇಕಾದರೆ ಅವರನ್ನು ಮಿನಿಷ್ಟರ್ ವಿತೌಟ್ ಪೋರ್ಟ್‌ಫೋಲಿಯೊ ಆಗಿ ಇಟ್ಟುಕೊಳ್ಳಬಹುದು. ಹೀಗೆ ಮಾಡಿಬಿಟ್ಟು ಎಜುಕೇಶನ್ ಡಿಪಾರ್ಟ್‌ಮೆಂಟ್ ಹಂಚಿಕೊಂಡರೆ ಆಯಾ ಇಲಾಖೆಯವರು ಅವರವರ ಜವಾಬ್ದಾರಿಯನ್ನು ಚೆನ್ನಾಗಿ ನಿರ್ವಹಿಸುತ್ತಾರೆ. ಲೇಬರ್ ಟ್ರೇನಿಂಗ್ ಕೊಡಬೇಕಾದರೆ ಲೇಬರ್ ಡಿಪಾರ್ಟ್‌ಮೆಂಟಿಗೆ ವಹಿಸಬೇಕು. ವ್ಯವಸಾಯದ ಟ್ರೇನಿಂಗ್ ಕೊಡಬೇಕಾದರೆ, ವ್ಯವಸಾಯದ ಇಲಾಖೆಗೇ ವಹಿಸಬೇಕು. ಆಯಾಯ ವಿಷಯಗಳನ್ನು ಸಂಬಂಧಪಟ್ಟ ಇಲಾಖೆಗೇ ವಹಿಸಿದರೆ, ಕೆಲಸ ಜವಾಬ್ದಾರಿಯಿಂದ, ಮುತುವರ್ಜಿಯಿಂದ ಚೆನ್ನಾಗಿ ನಡೆಯುತ್ತದೆ; ಎಂಬ ನಿಜವಾದ ಭಾವನೆ ಇದೆ. ಇದನ್ನು ದಯೆಮಾಡಿ ಸರಕಾರ ಯೋಚನೆಮಾಡಬೇಕು ಎಂದು ಹೇಳುತ್ತೇನೆ.

ಇನ್ನೂ ಹೇಳುವ ಕೆಲವು ವಿಷಯಗಳಿವೆ. ಡಿಮ್ಯಾಂಡು ಬಂದಾಗ ಅವುಗಳನ್ನು ಹೇಳುತ್ತೇನೆ. ದಯೆಮಾಡಿ ಅವಾಗ ಅವಕಾಶ ಕೊಡಬೇಕೆಂದು ಕೇಳಿಕೊಂಡು, ಇಷ್ಟು ಅವಕಾಶ ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್ (ತಾಳೀಕೋಟೆ).—ಸಭಾಪತಿಗಳೆ, ಇವತ್ತಿನ ದಿವಸ ಮಾನ್ಯ ಆರ್ಥಿಕ ಮಂತ್ರಿಗಳು ನಮ್ಮ ಮುಂದೆ ಇಟ್ಟಿರುವ ಈ ಆಯವ್ಯಯ ಬಜೆಟ್ಟನ್ನು ಅನುಮೋದಿಸುತ್ತಾ ನಾಲ್ಕು ಮಾತುಗಳನ್ನು ಸರಕಾರದ ಎದುರಿಗೆ ತರಲು ಬಯಸುತ್ತೇನೆ.

ಮುಖ್ಯವಾಗಿ ನಮ್ಮ ದೇಶದಲ್ಲಿ 80 ಪರ್ಸೆಂಟು ಅಗ್ರಿಕಲ್ಚರಿಸ್ಟುಗಳು ಇರುತ್ತಾರೆ. ನಾವು ನಮ್ಮ ದೇಶವನ್ನು ಸುಧಾರಿಸಬೇಕಾದರೆ ಮುಖ್ಯವಾಗಿ ಅಗ್ರಿಕಲ್ಚರನ್ನು ಸುಧಾರಿಸಬೇಕಾಗುತ್ತದೆ. ಅದರಿಂದ ಜನರ ಆರ್ಥಿಕ ಮಟ್ಟ ಹೆಚ್ಚಾಗುತ್ತದೆ. ಅದರ ಸಲುವಾಗಿ ಒಕ್ಕಲುತನದ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕಾದ್ದು ನಮ್ಮೆಲ್ಲರ ಮತ್ತು ಸರಕಾರದ ಕರ್ತವ್ಯವಾಗಿದೆ. ಸರಕಾರದವರು ಈಗಾಗಲೇ ನೀರಾವರಿ ಸಲುವಾಗಿ ಆಗಲಿ ಒಡ್ಡುಗಳ ಸಲುವಾಗಿ ಆಗಲಿ, ಬುರ್‌ಡೋಜರುಗಳನ್ನು ಕೊಂಡುಕೊಳ್ಳುವ ಸಲುವಾಗಿ ಆಗಲಿ ಮೆನ್ಯೂರ್‌ನ್ನು ಉಪಯೋಗಿಸುವುದರಲ್ಲಿ ಆಗಲಿ ಸಾಕಾದಷ್ಟು ಸಹಾಯವನ್ನು ಮಾಡುತ್ತಾ ಬಂದಿದ್ದಾರೆ. ಆದರೂ ಇನ್ನೂ ಕೆಲವು ತೊಂದರೆಗಳು ನಮ್ಮ ರೈತರಿಗೆ ಬರಲಿಕ್ಕೆ ಹತ್ತಿವೆ, ಅದರ ಬಗ್ಗೆ ಕೆಲವೊಂದು ವಿಷಯಗಳನ್ನು ತಮ್ಮ ನಜರಿಗೆ ತರಲು ಬಯಸುತ್ತೇನೆ. ಇವತ್ತಿನ ದಿವಸ ಬಂಡಿಂಗ್‌ನ್ನು ಹಾಕಿಸುವ ವ್ಯವಸ್ಥೆಯನ್ನು ಮಾಡಿದ್ದೀರಿ, ಬಂಡಿಂಗ್ ಕಾಸ್ಟ್ ಒಂದಕ್ಕೆ ಸಾಧಾರಣ 50 ರಿಂದ 60 ರೂಪಾಯಿಗಳವರೆಗೂ ಬರುತ್ತದೆ. ಬಿಜಾಪುರ ಅಂತಹ ಜಿಲ್ಲೆ ಗಳಲ್ಲಿ ಜಮೀನಿನ ಕಿಮ್ಮತ್ತು ಸಾಧಾರಣ 20 ಎಕರೆ ಜಮೀನಿದ್ದರೆ 600 ರೂಪಾಯಿ ಆಗುತ್ತದೆ. ಬಂಡಿಂಗ್ ಖರ್ಚು ಎಕರೆಗೆ 50, 60 ರೂಪಾಯಿ ಆದರೆ ಅಂದರೆ ಅದು ಸಾಧಾರಣ ಸಾವಿರದ ಇನ್ನೂರು ರೂಪಾಯಿಗಳವರೆಗೂ ಬರುತ್ತದೆ. ಅಂಥಹ ಸಂದರ್ಭದಲ್ಲಿ ರೈತ ಜಮೀನನ್ನು ಮಾರಿಕೊಂಡು ಒಡ್ಡು ಹಾಕಿಸಿಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ. ಇದನ್ನು ಕೂಲಂಕಷವಾಗಿ ವಿಚಾರ ಮಾಡ ಬೇಕೆಂದು ನಾನು ಈ ಸಮಯದಲ್ಲಿ ಸರಕಾರದವರನ್ನು ವಿನಂತಿಸಿಕೊಳ್ಳುತ್ತೇನೆ. ಬಂಡಿಂಗ್‌ದಲ್ಲಿಯ ಎಸ್ಟ್ಯಾಬ್ಲಿಷ್‌ಮೆಂಟ್ ಚಾರ್ಜಸ್ ಅಂತ ಏನು ಇರುತ್ತದೆ ಅದನ್ನು ಸರಕಾರ ತಾನೆ ವಹಿಸಿಕೊಳ್ಳ ಬೇಕೆಂದು ನಾನು ಸರಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗ ಟ್ರ್ಯಾಕ್ಟರುಗಳನ್ನು ಹೈರ್ ಪರ್‌ಚೇಸ್ ಬೇಸಿಸ್ಸ್‌ಮೇಲೆ ಕೊಡುತ್ತಾರೆ. ಹೋದ ವರ್ಷ 25 ಟ್ರ್ಯಾಕ್ಟರುಗಳನ್ನು ಹೈರ್ ಪರ್ಚೇಸ್ ಮೇಲೆ ಹಂಚಿದೆವು ಎಂದು ಹೇಳುತ್ತಾರೆ, ನಮ್ಮ ಕಡೆಗೆ ಒಂದೂ ಕೂಡ ಕೊಟ್ಟಿಲ್ಲ, ಅದ ರಿಂದ ಎಲ್ಲಾ ಕಡೆಗೂ ಸರಿಯಾಗಿ ಹಂಚುವ ವ್ಯವಸ್ಥೆ ಮಾಡಬೇಕೆಂದು ಸರಕಾರದಲ್ಲಿ ನಾನು ಬಿನ್ನೈಸುತ್ತೇನೆ.

ಈಗ ನಮ್ಮಲ್ಲಿ ಮುಧೋಳ ಭಾಗದಲ್ಲಿ ಸ್ಪ್ರಿಪ್ ಇರಿಗೇಶನ್ ಸ್ಕೀಂ ಅಂತ ಶುರು ಆಗಿದೆ, ಮೂರು ಡಿವಿಜನ್‌ಗಳಲ್ಲಿ ಪ್ರಾರಂಭ ಮಾಡಿದ್ದಾರೆ, ಆದಕ್ಕೆ ಸಿಬ್ಬಂದಿ ಇಲ್ಲ ಅದಕ್ಕೆ ಬೇಗನೆ ಸಿಬ್ಬಂದಿಯನ್ನು ಒದಗಿಸುವ ಏರ್ಪಾಡನ್ನು ಮಾಡಬೇಕೆಂದು ನಾನು ಸರಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಮತ್ತು ಅಲ್ಲಿ ಒಂದು ಟ್ರೇನಿಂಗ್ ಸೆಂಟರ ಇದೆ ಅದು ಏಪ್ರಲ್‌ನಲ್ಲಿ ಶುರು ಆಗಬೇಕಾಗಿದೆ ಇವತ್ತಿನ ತನಕ ಅದಕ್ಕೆ ಸಿಬ್ಬಂದಿ ಬಂದಿಲ್ಲ. ಅಲ್ಲಿಗೂ ಸಹ ಸಿಬ್ಬಂದಿ ಒದಗಿಸಬೇಕು.

ಎರಡನೆಯದು ಏನೆಂದರೆ ನೀರಾವರಿ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬೇಕಾಗಿದೆ. ಆಲಮಟ್ಟಿ ಮತ್ತು ನಾರಾಯಣಪುರದ ಬಗ್ಗೆ ಒಬ್ಬ ಸದಸ್ಯರು ಈಗ ಕೆಲವೊಂದು ಮಾತುಗಳನ್ನು ಹೇಳಿದರು, ನನಗೆ ಅವರು ಹೇಳಿದ್ದು ಅಷ್ಟು ಸಮಂಜಸ ಎಂದು ಅನಿಸುವುದಿಲ್ಲ. ಏಕೆಂದರೆ ಕೇಂದ್ರ ಸರಕಾರದವರು ವಿಚಾರ ಮಾಡಿ ನಮ್ಮ ರಾಜ್ಯ ಸರಕಾರದವರಿಗೆ 600 ಟಿ.ಎಂ.ಸಿ.ಎಫ್.ಟಿ. ನೀರು ಕೊಟ್ಟಿದ್ದಾರೆ. ಪ್ರತಿಯೊಂದು ಹನಿಯನ್ನೂ ಸಹಿತ ಇವತ್ತಿನ ದಿವಸ ಉಪಯೋಗ ಮಾಡಿಕೊಳ್ಳ ಬೇಕೆಂಬ ವಿಚಾರ ನಮ್ಮಲ್ಲಿ ಇದೆ. ನಾವಾದರೂ ಹೇಳುವುದು ಇಷ್ಟೆ, ಆಲಮಟ್ಟಿಯಲ್ಲಿ ಆಗಬೇಕೇ, ನಾರಾಯಣಪುರದಲ್ಲಿ ಆಗಬೇಕೇ ಎಂದು ಹೇಳಿ ಜಿಲ್ಲಾವಾರಾಗಿ ಅಥವಾ ಒಂದು ಭಾಗದ ದೃಷ್ಟಿ ಯಿಂದ ನಾನು ಮಾತನಾಡುವುದಿಲ್ಲ, ಇಡೀ ಸಂಸ್ಥಾನದ ದೃಷ್ಟಿ ಇಟ್ಟುಕೊಂಡು ಮಾತನಾಡುವಂತಹ ಪರಿಸ್ಥಿತಿ ಇವತ್ತಿನ ದಿವಸ ನಮ್ಮಲ್ಲಿ ಬರಬೇಕಾಗಿದೆ. ಆಲಮಟ್ಟಿಯಲ್ಲಿ ಆಗುತ್ತದೆ ಎಂದು ಆಗಲೇ ಮಾನ್ಯಮಂತ್ರಿಗಳು ಹೇಳಿದರು, ಆಲಮಟ್ಟಿಯಲ್ಲಿ ಒಂದು ಡ್ಯಾಂ ಕಟ್ಟಿಸುವುದರಿಂದ ಗುಲ್ಬರ್ಗ ಡಿಸ್ಟ್ರಿಕ್ಟ್ ಗಾಗಲಿ, ರಾಯಚೂರು ಡಿಸ್ಟ್ರಿಕ್ಟ್‌ಗಾಗಲಿ ಯಾವ ತರಹದ ಹಾನಿಯೂ ಆಗುವುದಿಲ್ಲ. ಇವತ್ತಿನ ದಿವಸ ಬಿಜಾಪುರದಲ್ಲಿ ಎರಡೂವರೆ ಲಕ್ಷ ಎಕರೆ ನೀರಾವರಿಯಾಗುತ್ತದೆ. ಅದನ್ನು ಕಡಮೆ ಮಾಡ ಬಾರದು ಎಂದು ಹೇಳಿ ನಾನು ಸರಕಾರದಲ್ಲಿ ಒತ್ತಿ ಹೇಳುತ್ತೇನೆ.

ಇನ್ನು ಸ್ಟೇಟ್ ಟ್ರಾನ್ಸ್‌ಪೋರ್ಟಿನ ವಿಚಾರದಲ್ಲಿ ಕೆಲವೊಂದು ವಿಷಯಗಳನ್ನು ಹೇಳಬೇಕಾ ಗಿದೆ. ಬೊಂಬಾಯಿ ಏರಿಯಾದಿಂದ ಇಲ್ಲಿಗೆ ಕೆಲವೊಂದು ಭಾಗಗಳು ಬಂದಿವೆ, ಅಲ್ಲಿರತಕ್ಕ 4 ಡಿವಿಜನ್ ಗಳ ಏಳು ತಿಂಗಳುಗಳ ಉತ್ಪನ್ನ ನೋಡಿದರೆ ಸಾಧಾರಣ 50 ಲಕ್ಷದವರೆಗೂ ಬರುತ್ತದೆ, ಬಿಜಾಪುರ ಡಿಸ್ಟ್ರಿಕ್ಟ್‌ನಲ್ಲಿ 17 ಲಕ್ಷ, ಬೆಳಗಾಂನಲ್ಲಿ 15 ಲಕ್ಷ, ಗುಲ್ಬರ್ಗದಲ್ಲಿ 6 ಲಕ್ಷ, ಹುಬ್ಬಳ್ಳಿಯಲ್ಲಿ 12 ಲಕ್ಷ ಹೀಗೆ ಉತ್ಪನ್ನ ಬರುತ್ತಿದೆ ಇನ್ನು ಉಳಿದ ನಾಲ್ಕು ಡಿವಿಜನ್ನುಗಳನ್ನು ನೋಡಿದರೆ ಬೆಂಗಳೂರು ಡಿವಿಜನ್‌ನಲ್ಲಿ ಒಂದೂವರೆ ಲಕ್ಷ ರೂಪಾಯಿ ಬರುತ್ತಿದೆ, ಹಾಸನ ಡಿವಿಜನ್‌ನಲ್ಲಿ —2 (ಮೈನಸ್) ಲಕ್ಷ ಇದೆ, ಮೈಸೂರು ಡಿವಿಜನ್‌ನಲ್ಲಿ —ಮೂರುವರೆ ಲಕ್ಷ (ಮೈನಸ್) ಇದೆ ಬಿ. ಟಿ. ಎಸ್. ನಲ್ಲಿ 21 ಲಕ್ಷ ಹೀಗೆ ಉತ್ಪನ್ನ ಇದೆ. ಈ ರೀತಿ ಆಗುವುದಕೆ ಕಾರಣವೇನು ಎಂಬುದನ್ನು ಮಾನ್ಯ ಮಂತ್ರಿ ಗಳು ತಿಳಿಸಬೇಕೆಂದು ಹೇಳುತ್ತೇನೆ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಒಂದು ಕಾರ್ಯ

(ಶ್ರೀ ಜಿ. ಎನ್. ಪಾಟೀಲ್)

ಕ್ರಮವನ್ನು ಕಂಡುಕೊಂಡು ಅದನ್ನು ಸುಧಾರಿಸಬೇಕೆಂದು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. 1962—63ರಲ್ಲಿ ನೆಟ್ ಪ್ರಾಫಿಟ್ 52.76 ಇದೆ ಎಂದು ಹೇಳಿದ್ದಾರೆ. ಅವರು ಹಾಕಿದ ಬಂಡವಾಳ ದಲ್ಲಿ ಎಂದರೆ 10 ಕೋಟಿ 97 ಲಕ್ಷದಲ್ಲಿ ಶೇಕಡ 5 ರಷ್ಟು ಲಾಭ ಸಿಕ್ಕಿದರೆ ಬೋನಸ್ ಕೊಡಬೇಕೆಂದು ಅವರಲ್ಲಿ ಒಂದು ನಿಯಮ ಇದೆ. ಆದರೆ ಇವತ್ತಿನವರೆಗೂ ಬೋನಸ್ ಕೊಟ್ಟಿಲ್ಲ ಎಂದು ಹೇಳುತ್ತಾರೆ. 52ಲಕ್ಷ ರೂಪಾಯಿ ಉತ್ಪನ್ನ ಬಂದದ್ದು ಖರೇನೇ ಸುಳ್ಳೇ ಎಂಬ ಸಂಶಯ ಬಂದಿದೆ, ಅದನ್ನು ಕ್ಲಾರಿಫೈ ಮಾಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ನಾಲ್ಕುಮಾತುಗಳನ್ನು ಹೇಳಲು ಅನುಮತಿಯನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಿ. ಎನ್. ಸುಬ್ಬಮ್ಮ (ಚಿಕ್ಕಮಗಳೂರು).—ಮಾನ್ಯ ಸಭಾಪತಿಯವರೇ, ಈ ಸಭೆಯ ಮುಂದೆ ನಮ್ಮ ಸರಕಾರದವರು ಇಟ್ಟಿರತಕ್ಕ ಈ ಆಯವ್ಯಯದ ಪಟ್ಟಿಯನ್ನು ನಾನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಾ ಇದ್ದೇನೆ. ಸ್ವಾಮಿ, ದೇಶದ ಹಣಕಾಸಿನ ಸ್ಥಿತಿ ಅಷ್ಟು ಸಮರ್ಪಕವಾಗಿ ಇಲ್ಲದೇ ಹೋದರೂ ನಮ್ಮ ಹಣಕಾಸಿನ ಮಂತ್ರಿಯವರು ಗತಿಸಿದ ನೌಕರರ ಹೆಂಡತಿ ಅವರಿಗೆ ವೇತನ, ವೃದ್ಧಾಪ್ಯ ವೇತನ ಮತ್ತು ಕಡಿಮೆ ಸಂಬಳದ ನೌಕರರಿಗೆ ಸಹಾಯ ಮಾಡತಕ್ಕದ್ದಕ್ಕೆ ಈ ಆಯವ್ಯಯ ಪಟ್ಟಿಯಲ್ಲಿ ಹಣವನ್ನು ಒದಗಿಸದಿದ್ದರೂ ಸಹ ಅವರಿಗೆ ಸಹಾಯ ಮಾಡಬೇಕೆಂಬ ಮನೋಭಾವ ಹೊಂದಿರತಕ್ಕ ಈ ಆಯವ್ಯಯ ಪಟ್ಟಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಮತ್ತು ದೇಶದಲ್ಲಿ ಯಾವುದೂ ಹೊಸ ತೆರಿಗೆಗಳನ್ನು ಸಹ ನಿರೂಪಿಸದೇ ಇರುವುದರಿಂದ ಪರಿಸ್ಥಿತಿ ಕಠಿಣವಾಗಿರತಕ್ಕ ಸಮಯದಲ್ಲಿ ದೇಶದ ಜನತೆಗೆ ಅದು ಒಂದು ಮನಸ್ಸಿಗೆ ನೆಮ್ಮದಿಯನ್ನು ಕೊಡತಕ್ಕದ್ದಾಗಿದೆ.

ದೇಶದ ತುರ್ತು ಪರಿಸ್ಥಿತಿಯ ಬಗ್ಗೆ ನಮ್ಮ ಪ್ರಾಂತ ಸರಕಾರದವರು ತೋರಿಸಿರತಕ್ಕ ಆಸಕ್ತಿ ಬಹಳ ವಿಶೇಷವಾದುದು ಅದು ನಮ್ಮ ಹಿಂದೂಸ್ಥಾನದ ದೃಷ್ಟಿಯಿಂದ ಆ ರೀತಿ ಆಸಕ್ತಿಯನ್ನು ತೋರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಅದಕ್ಕಾಗಿ ನಾವು ಸರಕಾರದವರನ್ನು ಪ್ರಶಂಸೆ ಮಾಡತಕ್ಕದ್ದು ಬಹಳ ಅವಶ್ಯಕವಾಗಿದೆ.

ದೇಶದಲ್ಲಿ ಕಾಲೇಜುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಎನ್. ಸಿ. ಸಿ. ಟ್ರೈನಿಂಗ್ ಕೊಟ್ಟು ದೇಶದ ರಕ್ಷಣಾ ಕಾರ್ಯಗಳಲ್ಲಿ ಹೆಚ್ಚಿನ ಭಾಗವಹಿಸುವುದಕ್ಕೆ ಅವಕಾಶ ಮತ್ತು ಅವರಿಗೆ ಉಪಹಾರವನ್ನೂ ಸಹ ಒದಗಿಸಿದ್ದಾರೆ ಮತ್ತು ಸೈನ್ಯದಲ್ಲಿ ಕೆಲಸ ಮಾಡತಕ್ಕವರಿಗೆ ಜಮೀನು ಅವರ ಮಕ್ಕಳಿಗೆ ವಿದ್ಯಾರ್ಥಿವೇತನ ಕೊಡಬೇಕೆಂದು ಯೋಚನೆ ಮಾಡಿ ಎನ್. ಸಿ. ಸಿ. ಗೆ 27 29 ಲಕ್ಷ ರೂಪಾಯಿಗಳು ಇದ್ದುದನ್ನು 67.48 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿರುವುದು ಬಹಳ ಪ್ರಶಂಸನೀಯ. ಹಾಗೆಯೇ ದೇಶದ ರಕ್ಷಣೆ ಮತ್ತು ಯೋಧರನ್ನು ನಿರ್ಮಾಣ ಮಾಡುವ ಕಾರ್ಯದಲ್ಲಿ ನಮ್ಮ ಮೈಸೂರು ಸರಕಾರದವರು ಮುಂದೆ ಹೆಜ್ಜೆಯನ್ನು ಇಟ್ಟಿದ್ದಾರೆ, ಬಿಜಾಪುರದಲ್ಲಿ ಸೈನಿಕ ಶಾಲೆಯನ್ನು ಏರ್ಪಾಡು ಮಾಡಿ ದೇಶದ ಯುವಕರು ಆರೋಗ್ಯವಂತರೂ ಶಿಸ್ತುಳ್ಳವರೂ ಆಗಿ ದೇಶದ ಸೇವೆಯನ್ನು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿರುವುದು ಬಹಳ ಒಳ್ಳೆಯ ಕಾರ್ಯವಾಗಿದೆ. ಮತ್ತು ಅದರಂತೆಯೇ ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಕಡೆಗಳಲ್ಲಿ ಇನ್ನೊಂದು ಸೈನಿಕ ಶಾಲೆಯನ್ನು ತೆರೆದು ಹೆಚ್ಚಿನ ವಿದ್ಯಾರ್ಥಿಗಳಿಗೆ ಸೈನಿಕ ಶಿಕ್ಷಣವನ್ನು ಕೊಟ್ಟರೆ ದೇಶದ ದೃಷ್ಟಿಯಿಂದ ಒಳ್ಳೆಯದಾಗುತ್ತದೆ ಎಂಬ ಭಾವನೆ ಇದೆ. ಪಾಕೀಸ್ತಾನದಿಂದ ಹೊರದೂಡಲ್ಪಟ್ಟು ನಮ್ಮ ದೇಶಕ್ಕೆ ಬರುತ್ತಾ ಇರತಕ್ಕ ಜನಗಳಿಗೆ ಆಶ್ರಯಕೊಡಬೇಕೆಂದು ಕೇಂದ್ರ ಸರಕಾರದವರು ಮೈಸೂರು ಸರಕಾರದವರನ್ನು ಕೇಳಿಕೊಂಡಿದ್ದಾರೆ. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾವಿರಾರು ಎಕರೆ ಜಮೀನು ಇದೆ. ನಿರಾಶ್ರಿತರಿಗೆ ಅಲ್ಲಿ ಆಶ್ರಯ ಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

10-30 A.M.

ವ್ಯವಸಾಯದ ವಿಚಾರ ತೆಗೆದುಕೊಂಡರೆ ಜನರಿಗೆ ಸಾಕಾದಷ್ಟು ಆಹಾರ ಪದಾರ್ಥಗಳು ಒದಗಬೇಕೆಂಬ ಉದ್ದೇಶದಿಂದ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳನ್ನು ಪ್ರಾರಂಭಿಸಿದ್ದಾರೆ, ಮತ್ತು ಪ್ರಾರಂಭಿಸಬೇಕೆಂದಿದ್ದಾರೆ. ದೊಡ್ಡ ಕಾಮಗಾರಿಯಾದ ತುಂಗಭದ್ರ ಪ್ರಾಜೆಕ್ಟ್ ಪೂರ್ಣವಾಗಿದೆ. ಆದರೆ ಅದರ ದೆಸೆಯಿಂದ ಎಷ್ಟು ಭೂಮಿ ಸಾಗುವಳಿಯಾಗುತ್ತಿದೆ, ಎಷ್ಟು ಆಹಾರ ಧಾನ್ಯ ಬೆಳೆಯಲಾಗುತ್ತಿದೆ ಎಂದು ಯೋಚನೆಮಾಡುವುದು ಬಹಳ ಪ್ರಾಮುಖ್ಯವಾದುದು. ಎಷ್ಟು ಎಕರೆ ನೀರಾವರಿಯಾಗಬೇಕಾಗಿತ್ತು, ಈಗ ಎಷ್ಟಾಗಿದೆ, ಆಗಿರುವುದು ಸಾಕೆ ಎಂದು ನೋಡಿದರೆ, ಬೆಳೆ ಎಷ್ಟು ಹೆಚ್ಚಾಗಿದೆ ಎಂದು ಯೋಚನೆಮಾಡಿದರೆ ಬರೀ ಕಾಗದದಲ್ಲಿ ಬರುವುದನ್ನು ನೋಡಿ ತೃಪ್ತಿಪಟ್ಟುಕೊಳ್ಳಬೇಕೇ ಹೊರತು ನಿಜವಾಗಿ ನೋಡಿದರೆ ಹೆಮ್ಮೆ ಪಡುವಷ್ಟು ಉತ್ಪತ್ತಿಯಾಗಲಿ

ಕೆಲಸವಾಗಲು ಆಗಿರುವುದಿಲ್ಲ. ನಮ್ಮ ದೇಶದಲ್ಲಿ ಕೈಕೊಳ್ಳಬೇಕೆಂದಿರುವ ಕಾಮಗಾರಿಗಳನ್ನು ತೆಗೆದುಕೊಳ್ಳಲು ನಮ್ಮ ಉತ್ಪತ್ತಿಯು ಖಂಡಿತ ಸಾಲುವುದಿಲ್ಲ. ಆದುದರಿಂದ ಇದಕ್ಕಾಗಿ ಸರ್ಕಾರ ಕೇಂದ್ರಸರ್ಕಾರದ ಪೂರ್ಣ ನೆರವನ್ನು ತೆಗೆದುಕೊಂಡರೆ ಮಾತ್ರ ಸಾಧ್ಯ; ಇಲ್ಲದಿದ್ದರೆ ಬಿಜಾಪುರ, ರಾಯಚೂರು ಮುಂತಾದ ಕ್ಷಾಮ ಪ್ರದೇಶಗಳಲ್ಲಿ ಬಜೆಟ್ಟಿನಲ್ಲಿ ನಮೂದಿಸಿರುವ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಖಂಡಿತ ಅವಕಾಶವಾಗುವುಲ್ಲ. ಹಾಗೆಯೇ ಸಣ್ಣ ನೀರಾವರಿ ಕಾಮಗಾರಿಗಳನ್ನು ಮೊದಲು ಮಾಡುತ್ತೇವೆ, ಅದಕ್ಕೆ ಕೇಂದ್ರದಿಂದ ಬೇಕಾದಷ್ಟು ಹಣ ಬರುತ್ತದೆ ಎಂದು ಹೇಳುತ್ತಾರೆ. ಆದರೆ ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಪಟ್ಟ ಒಂದು ಸಣ್ಣ ಕಾಮಗಾರಿಯನ್ನು ಮೂರು ಬಜೆಟ್ ಆದರೂ ಇನ್ನೂ ತೆಗೆದು ಕೊಂಡಿಲ್ಲ, ಹೀಗಾಗಿ ನೀರಾವರಿ ಸೌಲಭ್ಯವಿಲ್ಲದೆ ತೊಂದರೆಯಾಗಿದೆ. ಸರ್ಕಾರ ಇಂಥ ಸಣ್ಣ ಕಾಮಗಾರಿಗಳಿಗೆ ಅಂದಾಜು ಮಾಡಿ ಪ್ರೋತ್ಸಾಹ ಕೊಡದಿದ್ದರೆ ಯಾವ ರೈತನ ಪರಿಸ್ಥಿತಿ ಖಂಡಿತ ಉತ್ತಮವಾಗುವುದಿಲ್ಲ. ಹಾಗೆಯೇ ಈಗ ದೇಶದಲ್ಲಿ ಜನತೆಗೆ ನಮ್ಮ ಸರ್ಕಾರ ಏನು ಮಾಡಿದೆ ಎಂದು ನೋಡಿದರೆ ಲೋಕೋಪಯೋಗಿ ಇಲಾಖೆ ಪೂರೈಸುವ ಇಲಾಖೆ. ಹಿಂದೆ ಇಡೀ ಮೈಸೂರು ದೇಶಕ್ಕೆ ಒಬ್ಬ ಚೀಫ್ ಎಂಜಿನಿಯರಿದ್ದರು, ಎಲ್ಲಾ ಕಾಮಗಾರಿಗಳನ್ನೂ ನೋಡಿಕೊಳ್ಳುತ್ತಿದ್ದರು. ಈಗ 3-4 ಜನ ಚೀಫ್ ಎಂಜಿನಿಯರುಗಳು, ಸೂಪರಿಂಟೆಂಡಿಂಗ್ ಎಂಜಿನಿಯರುಗಳು ಇದ್ದಾರೆ. ಆದರೆ ನಿರುದ್ಯೋಗಿಗಳಿಗೆ ಕೆಲಸ ದೊರೆಯುತ್ತಿದೆಯೇ ವಿನಾ ಇವತ್ತಿನವರೆಗೆ ನಿರ್ದಿಷ್ಟವಾಗಿ ಏನು ಕೆಲಸವಾಗಿದೆ, ಅದರಿಂದ ಯಾವ ಹೊಸ ಕಾಮಗಾರಿಯಾಗಿದೆ ಎಂದು ನೋಡಿದರೆ ಏನೂ ಕಾಣುತ್ತಿಲ್ಲ. ಇದನ್ನು ಯೋಚನೆಮಾಡಬೇಕು. ಇದಲ್ಲದ ಬಜೆಟ್ಟಿನಲ್ಲಿ ಸೇತುವೆ ನಿರ್ಮಾಣ, ಕಟ್ಟಡ, ಇರಿಗೇಷನ್ ಕೆಲಸ, ರಸ್ತೆ ಮುಂತಾದುವುಗಳಿಗಾಗಿ ಯಾವ ಯಾವ ಜಿಲ್ಲೆಗೆ ಎಷ್ಟು ಹಣ ಒದಗಿಸಲಾಗಿದೆ ಎಂದು ನೋಡಿದರೆ ಒಂದೊಂದು ಜಿಲ್ಲೆಗೆ ಒಂದೊಂದು ಕೆಲಸ ಸಹ ಇರುವಂತೆ ಕಾಣಲಿಲ್ಲ. ಹೀಗಾದರೆ ಇಡೀ ಜಿಲ್ಲೆಯ ಜನರಿಗೆ ಏನು ಸಹಾಯವಾಗುತ್ತದೆ ಎಂಬುದನ್ನು ತಿಳಿಯಬೇಕು. 1957 ರಿಂದ ಬಜೆಟ್ಟಿನಲ್ಲಿ ಹಣ ಒದಗಿಸಿದರೂ ಕೆಲಸವಾಗಿಲ್ಲದಿರುವ ನಿದರ್ಶನವಿದೆ. ಸರ್ಕಾರ ದಕ್ಷತೆಯಿಂದ ಕೆಲಸಮಾಡಬೇಕು. ಪ್ರಾಮಾಣಿಕರಾಗಿ ಕೆಲಸಮಾಡಬೇಕು. 1957ರಲ್ಲಿ ಮಂಜೂರುಮಾಡಿ ಕೆಲಸವನ್ನು ಅಲ್ಲಿಗೇ ಕೈಬಿಟ್ಟರೆ ಏನೆಂದು ಹೇಳಬೇಕು ? ಬೇರೆ ಕಡೆ ಕೆಲಸ ಮಾಡಿಸುವುಕ್ಕೆ ಹಣವಿದೆ, ನಮಗೆ ಬೇಕಾದ ಕಡೆ ಮಾಡಿಸಲು ಹಣವಿಲ್ಲ ಎಂದು ಹೇಳುವುದು ಸರಿಯಲ್ಲ. ಹೀಗಾದರೆ ಜನರಿಗೆ ತಪ್ಪು ಅಭಿಪ್ರಾಯ ಬರಲು ಅವಕಾಶವಾಗುತ್ತದೆ. ಕಂಟ್ರ್ಯಾಕ್ಟರುಗಳಲ್ಲಿ ಒಂದನೆ ದರ್ಜೆ, ಎರಡನೆ ದರ್ಜೆ ಮತ್ತು ಮೂರನೆ ದರ್ಜೆ ಎಂದು ವಿಂಗಡಿಸಿದ್ದಾರೆ. ಶೇಕಡ 45 ರಷ್ಟು ದೊಡ್ಡ ಕಂಟ್ರ್ಯಾಕ್ಟರಿಗೆ ಶೇಕಡ 15 ರಷ್ಟು ಎರಡನೆ ದರ್ಜೆ ಕಂಟ್ರ್ಯಾಕ್ಟರಿಗೆ ಕೊಟ್ಟು ನೂರಾರು ಜನರಿಗೆ ಅನುಕೂಲವಾಗುವುದನ್ನು ತಪ್ಪಿಸಿದ್ದೀರಿ. ಹಣವಿಲ್ಲ ಎಂದು ಹೇಳುವಾಗ ಶೇಕಡ 45 ಕೊಡಲು ಹಣವೆಲ್ಲಿದೆ ? ಹಿಂದುಳಿದ ಜಿಲ್ಲೆಗಳಲ್ಲಿ ಯಾವ ರೀತಿ ಅನುಕೂಲ ಒದಗಿಸಲು ಸಾಧ್ಯ ? ಇದನ್ನು ಯೋಚನೆಮಾಡಬೇಕು. ಹಾಗೆಯೇ ಚಿಕ್ಕಮಗಳೂರು ಬೇಸಿಕ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗೆ 3 ಲಕ್ಷ 75 ಸಾವಿರ ರೂಪಾಯಿಗಳ ಸೆಂಟ್ರಲ್ ಗ್ರ್ಯಾಂಟ್ ಮಂಜೂರಾಗಿದ್ದರೂ ಅದರ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಹೀಗೆ ಆಗಬೇಕಾದ ಕೆಲಸ ಮಾಡದೆ ಕೆಲಸ ನಡೆದಿರುವ ಕಡೆಯೇ ಮಾಡುತ್ತಾ ಹೋದರೆ ಸರ್ಕಾರದ ಮೇಲೇನು ಪರಿಣಾಮವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ.

ಇನ್ನು ಹರಿಜನರ ಸಮಸ್ಯೆ. ಅದಕ್ಕೆ ಸರ್ಕಾರ ಎಷ್ಟೇ ಶ್ರಮಪಟ್ಟರೂ ಅವರ ಪರಿಸ್ಥಿತಿ ಉತ್ತಮವಾಗಿಲ್ಲ. ವ್ಯವಸಾಯ ಮಾಡುವುದಕ್ಕೆ ಜಮೀನು, ವಿದ್ಯಾಭ್ಯಾಸಕ್ಕೆ ಅನುಕೂಲ ಮುಂತಾದುವನ್ನೆಲ್ಲಾ ಸರ್ಕಾರ ಕೊಡುತ್ತಿದೆ. ಆದರೆ ಅವರಲ್ಲಿರುವ ಜಾಡಮಾಲಿಗಳ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಅವರು ಹರಿಜನರಲ್ಲ, ಹಿಂದುಳಿದ ವರ್ಗಕ್ಕೆ ಸೇರಿದ್ದಾರೆ ಅವರು ಎಷ್ಟೋ ಸರ್ವಿಸ್ ಮಾಡಿರುತ್ತಾರೆ. ಆದರೂ ಅವರು ನಿವೃತ್ತರಾದಮೇಲೆ ಪ್ರಾವಿಡೆಂಟ್ ಫಂಡ್ ಆಗಲಿ ಅಥವ ಏನಾದರೂ ಸೌಕರ್ಯವಾಗಲಿ ಅವರಿಗೆ ಕೊಡಬೇಕೆಂದು ಪುರಸಭೆ ನಿರ್ಣಯಮಾಡಿ ಕಳುಹಿಸಿದರೂ ಸರ್ಕಾರ ಅದಕ್ಕೆ ಗಮನಕೊಟ್ಟಿಲ್ಲ. ಪ್ರಾಣಿಗಳಿಗಿಂತ ನಿಕೃಷ್ಟರಾಗಿರುವ ಅವರಿಗೆ ಹೆಚ್ಚು ಸಹಾಯಮಾಡಲು ಗಮನ ಕೊಡಬೇಕು.

ನಮ್ಮ ಮಿತ್ರರು ಎಷ್ಟೋ ಜನ ಮೈಸೂರು ಎಂದು ಹೇಳಬಾರದು, ಕರ್ಣಾಟಕ ಎಂದು ಹೇಳಬೇಕು, ಚಿಕ್ಕಮಗಳೂರು, ಧಾರವಾಡ, ಬಿಜಾಪುರ ಎಂದು ಪ್ರತ್ಯೇಕ ಭಾವನೆ ತೋರಿಸಬಾರದು ಎಂದು ಹೇಳುತ್ತಿದ್ದರು. ನಮಗೂ ದೇಶಾಭಿಮಾನವಿದೆ. ಆದರೆ ಏಕೆ ಹಾಗೆ ಹೇಳಬೇಕಾಗುತ್ತದೆ ಎಂದರೆ, ಯಾವ ಜಿಲ್ಲೆಗೆ ಏನು ಅನುಕೂಲವಾಗಬೇಕು ಎಂದು ನಿಗಾ ಇಟ್ಟು ಅದನ್ನು ಮಾಡಿ ಕೊಡುತ್ತಿದ್ದರೆ ಹಾಗೆ ಹೇಳಬೇಕಾಗಿರಲಿಲ್ಲ, ಆ ಪ್ರಶ್ನೆಗೇ ಅವಕಾಶವಿರುತ್ತಿರಲಿಲ್ಲ. 1956ನೆಯ ಇಸವಿಯಿಂದ ದೇಶ ವಿಶಾಲವಾಯಿತು. ಅಲ್ಲಿಂದ ಇಲ್ಲಿಯವರೆಗೆ ಅಧಿಕಾರಿಗಳ ಸೀನಿಯಾರಿಟಿ ಪ್ರಶ್ನೆ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ತೀರ್ಮಾನವಾಗಿಲ್ಲ. 3-4 ಪಟ್ಟಿಗಳಾದರೂ ಇನ್ನೂ ನಿರ್ಣಯವಾಗಿಲ್ಲ. ನ್ಯಾಯಾಂಗ ಇಲಾಖೆ ಬಹಳ ಪ್ರಸಿದ್ಧವಾಗಿದೆ, ಆ ಇಲಾಖೆ ಮಂತ್ರಿಗಳು ದಕ್ಷರೆಂಬ ನಂಬಿಕೆ ಇದೆ. ಆದರೆ ಜುಡಿಷಿಯಲ್ ಇಲಾಖೆಯ ಸೀನಿಯಾರಿಟಿ ಪಟ್ಟಿ ಇನ್ನೂ ಆಗಿಲ್ಲ. ದೇಶದ ಜನರಿಗೆ ನ್ಯಾಯ ದೊರಕಿಸುತ್ತೇವೆಂದು ಹೇಳುವಾಗ ಹೀಗಾದರೆ ನ್ಯಾಯ ಹೇಗೆ ಉಳಿಯುವುದು ? ಅನೇಕ ಇಲಾಖೆಗಳಲ್ಲಿ ಸಿದ್ಧವಾಗಿಲ್ಲ. ಆದುದರಿಂದ ನೌಕರರಲ್ಲಿ ಒಂದು ಕ್ಲಿಷ್ಟ ಮನೋಭಾವನೆ ಉಂಟಾಗಿದೆ. ಸಾರ್ವಜನಿಕ ಕಾರ್ಯ ಮಾಡಲು ಅಷ್ಟಾಗಿ ಮನಸ್ಸಿಲ್ಲ, ಸೀನಿಯಾರಿಟಿ ಬಗ್ಗೆ ಯಾರನ್ನು ನೋಡಬೇಕು ಎಂಬುದರ ಕಡೆಗೆ ಅವರ ಗಮನ ಹೆಚ್ಚಾಗಿದೆ. ಹಳೆಯ ಮೈಸೂರು ಮತ್ತು ಹೊಸ ಮೈಸೂರು ಎಂಬ ಭಾವನೆ ಬಾರದಿರಬೇಕಾದರೆ ನಿಷ್ಪಕ್ಷಪಾತವಾಗಿ ವರ್ತಿಸುವುದು ಅಗತ್ಯ. ಬಡ್ಜೆಟ್ಟನ್ನು ನೋಡಿದರೆ ಯಾವ ರೀತಿ ಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಮಲೆನಾಡಿನ ವಿಷಯದಲ್ಲಿ ಎರಡು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಮಲೆನಾಡು ಬಹಳ ಹಿಂದುಳಿದ ಪ್ರದೇಶ. ಮೈಸೂರು ದೇಶ ಬಹಳ ವಿಸ್ತಾರವಾದ ಮಲೆನಾಡು ಪ್ರದೇಶಗಳಿಂದ ಕೂಡಿದೆ. ಅದು ನಶಿಸಿ ಹೋಗದಂತೆ ಕಾಪಾಡಬೇಕು. ಇಲ್ಲಿ ಬಹಳ ಪ್ರಾಮುಖ್ಯವಾದ ನದಿಗಳೂ ಹರಿಯುತ್ತವೆ. ಆದರೆ ಇಲ್ಲಿ ಸರಿಯಾದ ಸಾರಿಗೆ ಸಂಪರ್ಕಗಳಿಲ್ಲದೆ ಇಲ್ಲಿನ ಜನ ಕೂಲಿ ಕೆಲಸ ಮಾಡಲೂ ಹೋಗುವುದಕ್ಕೆ ಆಗುತ್ತಿಲ್ಲ. ಇಲ್ಲಿ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಬೇಕಾದರೆ ಕೂಲಿ ಜನಕ್ಕೆ ಹಾಗೂ ಇತರರಿಗೆ ಸಾರಿಗೆ ಸಂಪರ್ಕವಿಲ್ಲದೆ ಬಹಳ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸಬೇಕೆಂದು ಈ ಕ್ಷೇತ್ರದ ಸದಸ್ಯರಾಗಿ ಸರಕಾರದ ಗಮನಕ್ಕೆ ಪದೇ ಪದೇ ತರುತ್ತಿದ್ದರೂ ಇದರ ಬಗ್ಗೆ ತಕ್ಕ ಕ್ರಮವನ್ನೇನೂ ತಗೆದುಕೊಂಡಹಾಗೆ ಕಾಣುತ್ತಿಲ್ಲ. ಬೇಕಾದರೆ ಸರಕಾರವೇ ಒಳಹೊಕ್ಕು ನೋಡಬಹುದು. ಸಾರಿಗೆ ಸಂಪರ್ಕ ಮಲೆನಾಡಿನಲ್ಲಿ ಇಲ್ಲದೇ ಹೋದರೆ ಅಲ್ಲಿನ ಪ್ರಕೃತಿ ಸಂಪತ್ತು ಹೇಗೆತಾನೇ ಉಪಯೋಗಿಸಿಕೊಳ್ಳಲು ಸಾಧ್ಯ. ಹೆಚ್ಚಿನ ಆಹಾರ ಬೆಳೆಯಬೇಕು ಎಂದು ಹೇಳುತ್ತಿದ್ದಾರೆ, ಇದಕ್ಕಾಗಿ ನಮ್ಮಲ್ಲಿ ಒಳ್ಳೆಯ ಅರಣ್ಯ ಸಂಪತ್ತು ಬೇಕು, ಕರ್ಣಾಟಕದ ಸಂಪತ್ತು ಬೆಳೆಯಬೇಕು, ಆದರೆ ಹಾಗೆ ಉಪಯೋಗಿಸಿಕೊಳ್ಳಲು ಸರಕಾರ ತಕ್ಕ ಕಾರ್ಯಕ್ರಮ ಕೈಗೊಳ್ಳದೇ ಮಲೆನಾಡನ್ನು ನೂರಕ್ಕೆ ನೂರರಷ್ಟು ನಿಕೃಷ್ಟ ಮಾಡುತ್ತಿದ್ದಾರೆ. ಹಾಗೆ ಮಾಡದೆ ಇನ್ನು ಮುಂದಾದರೂ ಮಲೆನಾಡಿನ ಕಡೆಗೆ ಹೆಚ್ಚಿಗೆ ನಿಗಾ ಕೊಡಬೇಕೆಂದು ಇಲ್ಲಿ ಹೇಳುತ್ತಿದ್ದೇನೆ.

ಇನ್ನು ಬಹಳ ಪ್ರಾಮುಖ್ಯವಾದ ವಿದ್ಯಾಭ್ಯಾಸದ ಬಗ್ಗೆ ನನ್ನ ಸ್ನೇಹಿತರನೇಕರು ಈಗಾಗಲೇ ಮಾತನಾಡಿದ್ದಾರೆ. ಕಾಲೇಜುಗಳಲ್ಲಿ ಸುಮಾರು 10-15 ಲೆಕ್ಚರರುಗಳು ಬಹಳ ವರ್ಷಗಳಿಂದ ಟೆಂಪರರಿಯಾಗಿ ಕೆಲಸ ಮಾಡುತ್ತಿದ್ದಾರೆ. ಇವರನ್ನು ಇನ್ನೂ ಖಾಯಂ ಮಾಡಿಲ್ಲ. ಇದರಿಂದ ಏನಾಗಿದೆ ಎಂದರೆ ಹೊರಗಡೆಯಿಂದ ಬಂದವರಿಗೆ ಹೆಚ್ಚಿನ ಸಂಬಳ ಇಲ್ಲಿರುವವರಿಗೆ ಕಡಿಮೆ ಸಂಬಳ ಎಂದಾಗಿ ಇಲ್ಲಿ ಕೆಲಸ ಮಾಡುವವರಿಗೆ ಬಹಳ ಅಸಮಾಧಾನಕರವಾಗಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಮೂರು ಯೋಜನೆಗಳಾದ ಮೇಲೆ ಎಷ್ಟೋ ಹೈಸ್ಕೂಲುಗಳಾದವು. ಒಂದಕ್ಕೆರಡರಷ್ಟು ಹೈಸ್ಕೂಲುಗಳೇನೋ ಆದವು. ಆದರೆ ಸರಕಾರ ಅವರುಗಳಿಗೆ ಕೊಡುವ ಗ್ರಾಂಟನ್ನೂ ಸರಿಯಾಗಿ ಕೊಡದೇ ಹೋದರೆ ಅವರುಗಳು ಹೈಸ್ಕೂಲುಗಳನ್ನು ಹೇಗೆ ತಾನೇ ನಡೆಸಬಹುದು ಮತ್ತು ಮಕ್ಕಳಿಗೆ ಅನುಕೂಲ ಮಾಡಿ ಪಾಠ ಹೇಗೆ ಕಲಿಸಬೇಕು ! ನಮ್ಮ ಹಳ್ಳಿ ಜನಕ್ಕೆ ಅನುಕೂಲವಾಗುವಂತೆ 5-10 ಹೈಸ್ಕೂಲುಗಳನ್ನು ಮಾಡಿದ್ದರೂ ಅವುಗಳ ಕಡೆಗೆ ಸರಕಾರ ಸಾಕಷ್ಟು ಗಮನ ಕೊಡುತ್ತಿಲ್ಲ. ಹೈಸ್ಕೂಲುಗಳ ವಿಷಯದಲ್ಲಿ ಇನ್ನೂ ಹೆಚ್ಚಿನ ಗಮನವನ್ನು ಕೊಡಬೇಕು.

ಇನ್ನು ಮಲ್ಟಿಪರ್ಪಸ್ ಹೈಸ್ಕೂಲು ಎಂದು ನಮ್ಮ ಚಿಕ್ಕಮಗಳೂರಿನಲ್ಲಿ ಒಂದು ಹೈಸ್ಕೂಲು ಇದೆ. ಇದಕ್ಕಾಗಿ ಸುಮಾರು 3-4 ಲಕ್ಷದಷ್ಟು ಬೆಲೆ ಬಾಳುವ ಸಾಮಾನುಗಳು, ಲೇತ್‌ಗಳು, ಹೊಲಿಗೆ ಮೆಷಿನ್ನುಗಳು ಉಪಯೋಗವಾಗದೆ ತುಕ್ಕು ಹಿಡಿದು ಹಾಳಾಗಿ ಹೋಗುತ್ತಿವೆ. ಇವು ನಮ್ಮ ಚಿಕ್ಕಮಗಳೂರು ಜಿಲ್ಲೆಗೆ ಉಪಯೋಗವಾಗದೇ ಇದ್ದರೆ ಅದನ್ನು ಬೇರೆ ಕಡೆಗಳಿಗಾದರೂ ಕಳುಹಿಸಿ ಉಪಯೋಗ ಮಾಡಿಕೊಳ್ಳಬಹುದು.

ಇನ್ನು ಸರಕಾರದವರು ಕಲವು ಶಾಲೆಗಳಲ್ಲಿ ಮಕ್ಕಳಿಗಾಗಿ ಉಪಹಾರವನ್ನು ಕೊಡುತ್ತಿದ್ದಾರೆ. ನಮ್ಮಲ್ಲಿ ಈಗ ಅನೇಕ ಪ್ರೈಮರಿ ಶಾಲೆಗಳು ಆಗಿವೆ. ಎರಡು ಮೂರು ಫರ್ಲಾಂಗುಗಳಿಗೆ ಒಂದು ಸ್ಕೂಲನಂತಾಗಿದೆ. ಇಂತಹ ಶಾಲೆಗಳಲ್ಲಿರುವ ಮಕ್ಕಳಿಗೂ ಉಪಹಾರವನ್ನು ಒದಗಿಸಿಕೊಡಬೇಕು. ಶಾಲೆಯಲ್ಲಿ ಅಡಿಗೆ ಮಾಡುವುದಕ್ಕೆ ಸಮಯ ಹೋಗುತ್ತದೆ, ಪಾಠ ಹೇಳಲಿಕ್ಕೆ ಅವಕಾಶ ಸಿಗುತ್ತಿಲ್ಲ. ಇದನ್ನು ಸರಕಾರ ಸ್ವಲ್ಪ ಹೆಚ್ಚಿನ ರೀತಿಯಿಂದ ನೋಡಿ ಇಲಾಖೆಯವರು ಸುಧಾರಣೆ

ಮಾಡಬೇಕಾಗಿದೆ. ಈ ವಿಷಯದಲ್ಲಿ ಸರಕಾರ ಹೆಚ್ಚಿನ ನಿಗಾ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಸರಕಾರ 11ನೆಯ ವರ್ಗದ ವಿಚಾರದಲ್ಲಿ ಈ ಕಡೆ ಇದ್ದಾರೆಂದು ಮತ್ತು ಇದನ್ನು ಕೈಬಿಡುತ್ತಾರೆಂದು ಕೇಳುತ್ತೇನೆ. ಇದಕ್ಕಾಗಿ ಸರಕಾರದವರು ಏನು ಮಾಡುತ್ತಾರೆನ್ನುವುದನ್ನು ತಿಳಿಸಬೇಕೆಂದು ಕೇಳುತ್ತೇನೆ. ಇಷ್ಟು ಮಾತನಾಡಲು ಅಧ್ಯಕ್ಷರು ಅವಕಾಶ ಕೊಟ್ಟಿದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ಬಿ. ಬೊಮ್ಮಣ್ಣ (ಅರಸೀಕೆರೆ).—ಸ್ವಾಮೀ, ಮಾನ್ಯ ಆರ್ಥಿಕ ಸಚಿವರು 64–65ನೇ ಸಾಲಿನ ಆಯವ್ಯಯದ ಅಂದಾಜುಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನನಗೆ ಇದು ಮೂರನೇ ಪುಸ್ತಕ. ಒಂದು, ಎರಡನೇ ಪುಸ್ತಕದಲ್ಲಿ ಏನಿತ್ತೋ ಅದರಂತೆ ಈ ಮೂರನೇ ಪುಸ್ತಕವೂ ಇದೆ, ಆದರೆ ಇದರಲ್ಲಿ ಒಂದೆರಡು ಮೂರು ಪೇಜುಗಳು ಜಾಸ್ತಿಯಾಗಿವೆ ಅಷ್ಟೆ. ಇದರಲ್ಲಿ ಹೊಸ ವಿಷಯವೇನೂ ಕಾಣುವುದಿಲ್ಲ. ಇನ್ನೊಂದು ಇದರಲ್ಲಿ ಏನು ಹೇಳಿದ್ದಾರೆಂದರೆ ಇದು ಸರ್ಪ್ಲಸ್ಸು ಬಡ್ಜೆಟ್ಟು ಎಂದ ಹೇಳಿಕೊಂಡಿದ್ದಾರೆ. ಏಕೆಂದರೆ ಇದರಲ್ಲಿ ಬಾಕಿ ವೃದ್ಧಾಪ್ಯ ವೇತನ ಹಾಗೂ ಡಿ. ಎ. ಕೊಡುವುದರಲ್ಲಿ ಹೇಳಿರುವ ಅಂಕೆಗಳು ಇದರಲ್ಲಿಲ್ಲ ಎಂದು ಮಾನ್ಯ ಅರ್ಥ ಮಂತ್ರಿಗಳು ಹೇಳಿರುವ ಭಾಷಣದಲ್ಲಿದೆ. ನನಗೇನೋ ಇದು ಸರ್ಪ್ಲಸ್ಸು ಬಡ್ಜೆಟ್ಟು ಎಂದು ಹೇಳುವುದಕ್ಕೆ ಸಮಾಧಾನವಿಲ್ಲ. ಇಲ್ಲಿ ಲ್ಯಾಂಡು ರೆವೆನ್ಯೂ ಸರ್‌ಛಾರ್ಜು ಬಿಲ್ಲು ಮಾಡುತ್ತೇವೆ ಅದನ್ನು ಜಾರಿಗೆ ತರುವುದರಿಂದ ಆದಾಯ ಸುಮಾರು ನಮಗೆ 260–270 ಲಕ್ಷದಷ್ಟು ಕಡಿಮೆ ಬೀಳುವುದನ್ನು ಯಾವ ರೀತಿ ಜಮಾ ಮಾಡುತ್ತಾರೋ ಏನೋ ನಮಗೊಂದೂ ಯೋಚನೆ ಮಾಡಿದರೆ ಗೊತ್ತಾಗುತ್ತಿಲ್ಲ. ರೆವಿನ್ಯೂ ಮಂತ್ರಿಗಳೇನೋ ರೀಸೆಟಲ್‌ಮೆಂಟು ೧೧ ದಿನ ವರ್ಷದ ವೇಳೆಗೆ ಬರುತ್ತದೆ. ಅದರಂತೆ ಕೂಡ ತ್ತಾರೆಂದು ಹೇಳಿದರು. ಆದರೆ ಇದು ಹೇಗೆ ಕಾರ್ಯಗತವಾಗುತ್ತೋ ನನಗೆ ತಿಳಿಯದಾಗಿದೆ. ಹಾಗೆ ಮಾಡಿದರೂ ಖೋತ ಬರುತ್ತದೆ ಎಂದು ನನ್ನ ಅಭಿಪ್ರಾಯ.

ಸರಕಾರ ಪ್ರತಿ ಸಲವೂ ಬೆಳೆಗಳ ಉತ್ಪನ್ನಗಳ ವಿಷಯಗಳನ್ನು ಮತ್ತು ಅದರ ಅಂಕೆಅಂಶಗಳನ್ನು ಕೊಡುತ್ತಿದ್ದರು. ಆದರೆ ಈ ಸಾರಿ ಆ ರೀತಿಯ ಬೆಳೆಗಳ ಉತ್ಪನ್ನಗಳನ್ನು ಒದಗಿಸುವುದಕ್ಕೆ ಪ್ರಯತ್ನ ಪಟ್ಟಿಲ್ಲ. ಇದಕ್ಕೆ ಕಾರಣವೇನೋ ನನಗೆ ಗೊತ್ತಾಗಲಿಲ್ಲ. ಇನ್ನೊಂದು ವಿಷಯ ಏನು ಮಾಡಿದ್ದಾರೆಂದರೆ ಮುಖ್ಯವಾದ ಆಹಾರ ಧಾನ್ಯಗಳ ಬೆಳೆಗಳ ಅಂಕೆ ಅಂಶಗಳನ್ನು ಎರಡು ವರ್ಷಗಳಿಂದಲೂ ಕೊಡುತ್ತಿದ್ದರು. ಈ ವರ್ಷ ಇದರೊಳಗೆ ಎಕರೆಗಳನ್ನೇ ಹಾಕಿಲ್ಲ. ಅದನ್ನು ಹೋಲಿಸಿ ನೋಡಿದ್ದರೆ ಇಷ್ಟು ಎಕರೆಗೆ ಇಷ್ಟು ಉತ್ಪತ್ತಿ ಎಂದು ಗೊತ್ತಾಗುತ್ತಿತ್ತು. ಇದನ್ನೂ ಸರಕಾರ ಕೈಬಿಟ್ಟಿದ್ದಾರೆಂದು ನನ್ನ ಭಾವನೆ.

(ಅಧ್ಯಕ್ಷರು ಸ್ಥಾನವನ್ನಲಂಕರಿಸಿದರು)

ಇನ್ನು ಟ್ಯಾಕ್ಸು ರೂಪದಲ್ಲಿ ಹಣವನ್ನೇನೋ ವಸೂಲು ಮಾಡುತ್ತಾರೆ. ಅದಕ್ಕಾಗಿ ಯೋಜನೆಗಳನ್ನ ಮಾಡಿ ಖರ್ಚಿನ ಲೆಕ್ಕಾಚಾರ ಹಾಕುತ್ತಾರೆ. ಯೋಜನೆಗಳ ಹೆಸರಿನಲ್ಲಿ ಅಲ್ಲಿಗೆ ಬೇಕಾಗುವ ಸಿಬ್ಬಂದಿಯನ್ನು ಜಾಸ್ತಿ ಮಾಡಿಕೊಳ್ಳುತ್ತಿದ್ದಾರೆಯೇ ಹೊರತು ಮುಖ್ಯವಾದ ಯಾವ ಯೋಜನೆಗಳಲ್ಲೂ ಅದಕ್ಕೆ ತಕ್ಕಷ್ಟು ಪ್ರತಿಫಲಗಳು ಬರುತ್ತಿವೆಯೇ ಎಂದು ನಿರೀಕ್ಷೆ ಮಾಡುತ್ತಿಲ್ಲ. ಹೀಗೆ ಸಿಬ್ಬಂದಿಯನ್ನೇ ಹೆಚ್ಚಿಸಿಕೊಂಡು ಹೋದರೆ ಮುಂದೆ ನಮ್ಮ ದೇಶದ ಸ್ಥಿತಿ ಏನಾಗುತ್ತೋ ಗೊತ್ತಿಲ್ಲ. ಸರಕಾರ ಬಡ್ಜೆಟ್ಟನ್ನು ತಯಾರು ಮಾಡುವಾಗ 50–60 ವರ್ಷಗಳಿಂದ ಏನು ಮಾಡುತ್ತಿದ್ದರು ಎನ್ನುವುದನ್ನು ಯೋಚನೆ ಮಾಡಿಕೊಂಡು ಮಾಡಬೇಕು. ಬರುವ ದುಡ್ಡು ಎಲ್ಲಿಂದ ಬರುತ್ತದೆ, ಏನು ದುಡ್ಡು ಖರ್ಚು ಮಾಡಿದರೂ ಅದರ ಲೆಕ್ಕ ಪತ್ರಗಳನ್ನು ನೋಡಿದರೆ ನನಗೆ ಸಮಾಧಾನವಾಗುತ್ತಿಲ್ಲ. ಇದನ್ನು ಹೋಲಿಸಬೇಕಾದರೆ ಹಸು ಮತ್ತು ಹಸುವಿನ ಮಾಲೀಕನಿಗೆ ಹೋಲಿಸಬಹುದು. ಹಸು ಬೀದಿಯಲ್ಲಿ ಹೋಗಿ ಮೇಯ್ದುಕೊಂಡು ವಾಪಸು ಮನೆಗೆ ಬಂದು ತನ್ನ ಮಾಲೀಕ ಒಂದು ಹಿಡಿ ಹುಲ್ಲು ಹಾಕುತ್ತಾನೆ ಎಂದು ಬರುತ್ತೆ. ಅದರಂತೆ ಏನೋ ಸ್ವಲ್ಪ ಹುಲ್ಲನ್ನು ಹಾಕಿ ಹಾಲನ್ನು ಕರೆದುಕೊಳ್ಳುತ್ತಾನೆ. ಮೊದಲಿಗೆ ಸ್ವಲ್ಪ ಹಾಲನ್ನು ಕರುವಿಗೆ ಬಿಟ್ಟು ಉಳಿಕೆ ಹಾಲನ್ನು ಕರೆದುಕೊಂಡು ಉಪಯೋಗಿಸುತ್ತಾನೆ. ಇನ್ನೊಂದು ದಿನ ಹಸು ಮನೆಗೆ ಬಂದಾಗ ಅದು ಹೊರಗಡೆ ಬಹಳ ಚೆನ್ನಾಗಿ ಮೇದುಕೊಂಡ ಬಂದಿದ್ದುದರಿಂದ ಅವತ್ತು ಕೂಡ ಮಾಲೀಕ ಹಾಲನ್ನು ಕರೆದು ಹೆಚ್ಚಾಗಿ ಸಿಗುತ್ತದೆ ಎಂದು ಕರುವಿಗೂ ಬಿಡದಂತೆ ಕರೆಯುತ್ತಾನೆ. ಇದನ್ನು ಹಸು ತಿಳಿದುಕೊಂಡು ತನ್ನ ಕರುವಿಗೆ ಹಾಲನ್ನು ಮಾಲೀಕ ಕೊಡುತ್ತಿಲ್ಲ ಎಂದು ತಾನೇ ಹಿಂಗಿಸಿಕೊಂಡು ಮಾಲೀಕ ಕರೆದು ಹೋದ ಮೇಲೆ ಕರುವಿಗೆ ಹಾಲನ್ನುಣಿಸುತ್ತದೆ. ಹೀಗೆ ಹಸು ಬೇಕಾದಷ್ಟು ಹಾಲು ಇದ್ದರೂ ತನಗೆ ಕೊಡುತ್ತಿಲ್ಲ ಬರೀ ಕರುವಿಗೇ ಕೊಡುತ್ತದೆ ಎಂದು ಇನ್ನೊಂದು ದಿನ ಚೆನ್ನಾಗಿ ಹಸು ಮೇಯ್ದು ಮನೆಗೆ ಬಂದಾಗ ಹಾಲುಕರೆಯುವುದಕ್ಕೆ ಬದಲು ಅದರ ಕೆಚ್ಚಲನ್ನು ಕತ್ತರಿಸುತ್ತಾನೆ ಇನ್ನೂ ಹೆಚ್ಚಿನ ಹಾಲು ಸಿಗ

(ಶ್ರೀ ಪಿ. ಬಿ. ಬೊಮ್ಮಣ್ಣ)

ಬಹುದೆಂದು, ಹೀಗೆ ಊಹಿಸಿಕೊಂಡು ಇಲ್ಲಿಯೂ ಆಯವ್ಯಯದ ಪಟ್ಟಿ ತಯಾರಿಸುತ್ತಿದ್ದಾರೆಂದು ನನಗೆ ತೋರುತ್ತದೆ.

ಇನ್ನು ರೆವೆನ್ಯೂ ಇಲಾಖೆ ಬಗ್ಗೆ ಹೇಳುವುದಾದರೆ ಹಿಂದೆ ಜಮೀನಿಲ್ಲದವರಿಗೆ ಭೂಮಿ ಕೊಡಬೇಕೆಂದ ಅದಕ್ಕಾಗಿ ಕಾನೂನು ಮಾಡಿದ್ದರೂ ಅದು ದುರುಪಯೋಗವಾಗುತ್ತದೆ ಎಂದು ಎಲ್ಲಿ ಜಮೀನಿದೆಯೋ ಅದನ್ನು ದರಖಾಸ್ತಿನ ಮೇಲೆ ಕೊಡಬೇಕೆಂದು ಸ್ಪೆಂದಿವನಗಳಿಂದ ಜಮೀನು ಬಿಡಿಸಿಕೊಡುತ್ತಿದ್ದರು. ಹಿಂದೆ ಆ ರೀತಿಯಾಗಿ ಜಮೀನನ್ನು ಬಿಡಿಸಿಕೊಟ್ಟಿರುವ ಸಂದರ್ಭಗಳೂ ಇವೆ. ಹಿಂದೆ ಇದರ ಬಗ್ಗೆ ಜನರಲ್ಲಿ ಒಂದು ಅಭಿಪ್ರಾಯ ಇತ್ತು. ಒಂದು ಎಕರೆಯಷ್ಟು ಜಮೀನನ್ನು ವಿಲೇ ಮಾಡಿದರೆ ಅದರ ಮೇಲೆ ತಕರಾರುಗಳನ್ನು ಮಾಡಿದರೆ ನಮಗೆ ಸಿಗುತ್ತದೆ ಎನ್ನುವ ಅಭಿಪ್ರಾಯ ಇತ್ತು. ಈಗ ಜಮೀನುದಾರನಿಗೆ ನ್ಯಾಯ ದೊರಕಿಸಿಕೊಡಬೇಕೆಂದೋ ಏನೋ ಜಮೀನಿಲ್ಲದವರಿಗೆ ಭೂಮಿ ಕೊಡಬೇಕೆಂದಿದ್ದರೂ ಜಮೀನು ಇದ್ದವರೇ ಬೇರೆಯವರ ಹೆಸರಿನಲ್ಲಿ ಅರ್ಜಿ ಹಾಕಿ ಭೂಮಿಯನ್ನು ಪಡೆಯುತ್ತಿದ್ದಾರೆ. ಇದರಿಂದ ಜಮೀನಿಲ್ಲದವರಿಗೆ ತಕ್ಕಷ್ಟು ಪ್ರತಿಫಲ ದೊರೆಯುತ್ತಿಲ್ಲ. ಇನ್ನು ಟಿ.ಟಿ. ರಿಕಾರ್ಡಗಳೆಂದು ಹಿಂದೆಯೇ ಮಾಡುತ್ತಿದ್ದರು. ಅದರಂತೆ 61 ನೇ ಇಸವಿಗೆ ಹಿಂದೆ ಯಾರೂ ಭೂಮಿಯನ್ನು ಆರು ವರ್ಷಗಳ ಕಾಲ ಸಾಗು ಮಾಡುತ್ತಿದ್ದರೋ ಅವರುಗಳು ಪುನಃ ಜಮೀನು ಪಡೆಯಬೇಕಾದರೆ ಒಂದು ತರಹದ ಫೈನು ಎಂದು ಹಾಕುತ್ತಾರೆ ಆ ನಂತರ ಅದನ್ನು ಕೊಟ್ಟು ತೆಗೆದುಕೊಳ್ಳುತ್ತಿದ್ದರು. ಹಿಂದೆ ಜುಲ್ಮಾನೆ ಕೊಡುವುದೇ ಬಹಳ ತಪ್ಪು ಎನ್ನುವ ಮನೋಭಾವನೆ ಇತ್ತು. ಇತ್ತೀಚೆಗೆ ಇದನ್ನು ದುರುಪಯೋಗಮಾಡುತ್ತಿದ್ದಾರೆ. ಬೇಕಾದಷ್ಟು ಜುಲ್ಮಾನೆ ಹಾಕಲಿ ಅದನ್ನು ಕೊಟ್ಟುಬಿಡೋಣ ಎಂದು. ಆದರೆ ಟಿ.ಟಿ. ಮಾಡುವ ಉದ್ದೇಶವೇ ಸಾರ್ಥಕವಾದಂತಾಗುವುದಿಲ್ಲ. ಜುಲ್ಮಾನೆಗೆ ಭಯ ಎನ್ನುವುದೇ ಇಲ್ಲ.

ಹೀಗೆ ಮಾಡಿ ಜುಲ್ಮಾನೆ ಹಾಕಿಸಿಕೊಂಡು ಅವರು ಜಮೀನನ್ನು ಪಡೆಯುತ್ತಿದ್ದಾರೆ. ಎಲ್ಲರಿಗೂ ಗೊತ್ತಿರುವ ಹಾಗೆ ಕೆರೆಯ ಅಂಗಳ ಮತ್ತು ಫಾರೆಸ್ಟ್ ಜಮೀನುಗಳನ್ನು ವ್ಯವಸಾಯಕ್ಕೆ ಕೊಡಬಾರದೆಂದಿದ್ದರೂ, ಆ ಬಗ್ಗೆ ರೆಕಾರ್ಡನ್ನು ಮಾಡಲೇ ಕೂಡದೆಂದು ಹೇಳಿದರೂ ಕೆಲವರು ರೆವಿನ್ಯೂ ಇಲಾಖೆಯಲ್ಲಿ ಷರೀಕ ಗಿದ್ದುಕೊಂಡು ಕೆಲವರಿಂದ 2 ರೂಪಾಯಿ ಸ್ಟ್ಯಾಂಪ್ ಹಾಕಿದ ಅರ್ಜಿಗಳನ್ನು ಮಂತ್ರಿಗಳಿಗೆ ಕೊಡಿಸಿ, ಆ ಅರ್ಜಿ ಇಲ್ಲಿಂದ ಕೆಳಗಿನ ಅಧಿಕಾರಿಗಳಿಗೆ ವಿಚಾರಣೆಯ ಬಗ್ಗೆ ರವಾನೆಯಾದಾಗ ಸ್ಥಳದಲ್ಲಿರತಕ್ಕ ಅಧಿಕಾರಿಗಳು ಒಂದಾಗಿ, ರೆವಿನ್ಯೂ ಇನ್‌ಸ್ಪೆಕ್ಟರನ್ನು ಸ್ಥಳಕ್ಕೆ ಕಳುಹಿಸಿ ರೆಕಾರ್ಡನ್ನು ಬಿಲ್ಡಪ್ ಮಾಡಿ ಅದನ್ನು ಡಿ.ಸಿ. ಕಳುಹಿಸುವಂತೆ ಮಾಡಿ ಆ ಜಮೀನನ್ನು ಮಂಜೂರು ಮಾಡಿಸುತ್ತಾರೆ. ಕೆಲವಕ್ಕೆ ಪಿ.ಡಬ್ಲ್ಯು. ಅವರಿಂದ ಶಿಫಾರ್ಸ್ ಮಾಡಿ ಮಾಡಿ ಮಾಡುತ್ತಾರೆ. ಆದರೆ ಅದರೆ ಅನೇಕ ಸಂದರ್ಭಗಳಲ್ಲಿ ಇದು ಮಂಜೂರಾಗದೆ ಹೋಗಿ ತಕರಾರಾಗಿ ಅನೇಕ ರೈತರು ವಿಶೇಷವಾಗಿ ದುಡ್ಡನ್ನು ಹಾಳುಮಾಡಿಕೊಂಡಿದ್ದಾರೆ. ಒಂದಾವರ್ತಿ ಸರ್ಕಾರದವರು ಕೆರೆಯ ಅಂಗಳಗಳನ್ನು ಸಾಗುವಳಿಗೆ ಕೊಡಬಾರದೆಂದು ಕಾನೂನು ಮಾಡಿದ ಮೇಲೆ ಯಾರು ಅದಕ್ಕೆ ವ್ಯತಿರಿಕ್ತವಾಗಿ ರೆಕಾರ್ಡನ್ನು ಬಿಲ್ಡಪ್ ಮಾಡುತ್ತಾರೋ ಅಂಥ ಅಧಿಕಾರಿಗಳ ಬಗ್ಗೆ ಇಲ್ಲಿಯವರೆಗೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ! ಒಂದಾವರ್ತಿ ಅಂಥ ಅಧಿಕಾರಿಗಳ ಬಗ್ಗೆ ಕ್ರೂರ ಶಿಸ್ತಿನ ಕ್ರಮವನ್ನು ಕೈಗೊಂಡಿದ್ದೇ ಆದರೆ ಮುಂದೆ ಇಂಥ ಅನರ್ಥಗಳಿಗೆ ಅವಕಾಶವೇ ಇರುವುದಿಲ್ಲ.

ಇನ್ನು ಅಮಲ್ದಾರರು ಮತ್ತು ಸಬ್‌ಡಿವಿಜನ್ ಅಧಿಕಾರಿಗಳು ಆಗಾಗ್ಗೆ ಗುಮಾಸ್ತರ ದಫ್ತರ್‌ಗಳನ್ನು ಚೆಕ್ ಮಾಡಬೇಕೆಂದಿದೆ. ಅವರು ನ್ಯಾಯವಾಗಿ ಚೆಕ್‌ಮಾಡವೇನೇ ಸುಮ್ಮನೆ ಅವರ ಪುಸ್ತಕದಲ್ಲಿ ದಫ್ತರ್ ಚೆಕ್ ಮಾಡಿದ್ದೇವೆಂದು ಬರೆದುಕೊಂಡು ಬಿಡುತ್ತಾರೆ. ಆದರೆ ಪೆಂಡಿಗ್ ಇರತಕ್ಕ ಅರ್ಜಿಗಳು ಆ ಗುಮಾಸ್ತರಲ್ಲಿ ಬೇಕಾದಷ್ಟಿರುತ್ತವೆ. ಲಂಚದ ಆಶೆಯಿಂದ ಅವರು ಹಾಗೆ ಪೆಂಡಿಂಗ್ ಹಾಕುತ್ತಾರೆ. ಅಧಿಕಾರಿಗಳು ಸರಿಯಾಗಿ ಅವರ ಕರ್ತವ್ಯವನ್ನು ನಡೆಸಿದರೆ ದೇಶದಲ್ಲಿ ಲಂಚರುಷವತ್ತುಗಳಿಗೆ ಅಷ್ಟಾಗಿ ಅವಕಾಶವೇ ಇರುವುದಿಲ್ಲ. ಇದರಿಂದ ರೈತರಿಗೂ ಅನುಕೂಲವಾಗುತ್ತದೆ. ಕೆಲಸಗಳೂ ಸುಗಮವಾಗಿ ನಡೆಯುತ್ತವೆ.

ಇನ್ನು ವಿದ್ಯಾ ಇಲಾಖೆಗೆ ಬೇಕಾದಷ್ಟು ಹಣವನ್ನು ಒದಗಿಸಿದ್ದಾರೆ. ಅದಕ್ಕೆ ತಕ್ಕ ಹಾಗೆ ಪ್ರತಿಯೊಂದು ಸ್ಕೂಲಿನಲ್ಲೂ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಹಾಗೂ ಪ್ರಾಥಮಿಕ ಶಾಲೆಗಳಿಂದ ಹಿಡಿದು ಹೈಸ್ಕೂಲುಗಳವರೆಗೂ ಈ ಸ್ಕೂಲುಗಳ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಆದರೆ ನಮ್ಮ ದೇಶದಲ್ಲಿ ವಿದ್ಯೆ ಜಾಸ್ತಿಯಾಗಿ ಬೆಳೆಯುತ್ತಿದೆಯೇ ಎಂಬದನ್ನು ಯಾರೂ ನೋಡಿದಂತೆ ಕಂಡುಬರುತ್ತಿಲ್ಲ. ಈ ದಿನ ಈ ವಿದ್ಯಾ ಸಂಸ್ಥೆಗಳ ಹೆಸರಿನಲ್ಲಿ ಅನೇಕರು ಇದನ್ನೊಂದು ತಮ್ಮ ಜೀವನೋಪಾಯದ ಕಸುಬನ್ನಾಗಿ ಅವಲಂಬಿಸಿದಂತಿದೆ. ಇಂಥ ಜನರು ಈ ದಿವಸ ಎಲ್ಲೆಲ್ಲಿಯೂ ಜಾಸ್ತಿಯಾಗುತ್ತಿದ್ದಾರೆ. ಅವರು ಒಂದು ವಿದ್ಯಾಸಂಸ್ಥೆಯನ್ನೇನು ನಡೆಸುತ್ತಿದ್ದೇವೆಂದು ಹೇಳುತ್ತಾ

ರೆಯೋ ಅಲ್ಲಿ ಯಾವ ಸ್ಕೂಲೂ ಇರುವುದಿಲ್ಲ; ಅಲ್ಲಿ ಮೇಷ್ಟ್ರುಗಳೂ ಇರುವುದಿಲ್ಲ. ಅಲ್ಲಿ ನಮ್ಮನೆ ಅವರ ಜೀವನಕ್ಕೆ ಇದೊಂದು ದಾರಿ ಅಷ್ಟೆ. ಈ ವಿಚಾರದಲ್ಲಿ ಈಗ ಒಂದು ಕಾನ್‌ವೆಂಟ್‌ಗೆ ಹೋಗತಕ್ಕ ವಿದ್ಯಾರ್ಥಿಯನ್ನೂ ನೋಡಲಿ—ಎಷ್ಟು ಚೆನ್ನಾಗಿ ಓದುವುದು ಇದೆಲ್ಲಾ ಇರುತ್ತದೆ. ಅದೇ ಇನ್ನಿತರೇ ಸ್ಕೂಲುಗಳ ವಿದ್ಯಾರ್ಥಿಗಳನ್ನು ತೆಗೆದು ಕೊಂಡರೆ ಅವರಿಗೆ ಮೊದಲಿಂದ ಓದಿಸಿದರೆ ಅವರು ಸರಾಗ ವಾಗಿ ಓದಬಲ್ಲರೇ ಹೊರತು ಅವರನ್ನು ಮಧ್ಯೆ ಎಲ್ಲಿಯಾದರೂ ಓದಿ ಎಂದರೆ ಅವರಿಗೆ ಅಕ್ಷರಗಳೇ ಹೊರಡುವುದಿಲ್ಲ. ಹೀಗಿದೆ ನಮ್ಮ ವಿದ್ಯಾಭ್ಯಾಸದ ವಿತರಣೆ.

ಇನ್ನು ರಾಷ್ಟ್ರೀಕರಣದ ವಿಚಾರಕ್ಕೆ ಬಂದರೆ-ಇದು 60 ವರ್ಷಕ್ಕೆ ಮಂತ್ರಿಗಳಿಗೆ ಮಕ್ಕಳಾದಂತಿದೆ. ಯಾವುದೋ ವಯಸ್ಸಿನ ಗಂಡಿಗೆ ಯಾವುದೋ ವಯಸ್ಸಿನ ಹೆಣ್ಣನ್ನು ಬೇಗ ಮಕ್ಕಳಾಗಲೀ ಎಂದು ಲಗ್ನಮಾಡಿದಂತಾಗಿದೆ ಈ ರಾಷ್ಟ್ರೀಕರಣದ ವಿಚಾರ. ಹೀಗೆ ಒಂದೆ ವಯೋಪರಿಮಿತಿಯಿಲ್ಲದವರಿಗೆ ಲಗ್ನಮಾಡಿದರೆ ಗಂಡೆಲ್ಲೋ ಇರುತ್ತೆ ಹೆಣ್ಣೆಲ್ಲೋ ಇರುತ್ತೆ. ಹಾಗಾಗಿದೆ ಇಲ್ಲಿ ಈ ರಾಷ್ಟ್ರೀಕರಣದ ವಿಚಾರ.

ಇನ್ನು ಕೊನೆಯದಾಗಿ ಪಾನನಿರೋಧದ ವಿಚಾರಕ್ಕೆ ಬಂದರೆ—ಇದು ಅಕ್ರಮ ಕಳ್ಳಭಟ್ಟೀ ತಯಾರಿಸತಕ್ಕವರಿಗೆ ಗಾಂಧಿಯವರೊಂದು ವರವನ್ನು ಕೊಟ್ಟು ಹೋದಹಾಗಿದೆ. ಹೀಗಾಗಿ ನಮ್ಮ ರಾಜ್ಯದಲ್ಲಿ ಈ ಪಾನನಿರೋಧ ಬಹಳ ಚೆನ್ನಾಗಿ ನಡೆಯುತ್ತಿದೆ. ಗಾಂಧಿಯ ಈ ಒಂದು ವರ ಇವರಿಗೆ ಬಹಳ ಚೆನ್ನಾಗಿ ಸಿದ್ಧಿಸಿದೆ. ಪೋಲೀಸಿನವರಿಗೂ ಮತ್ತು ಇಲಿಸಿಟ್ ಲಿಕ್ಕರ್ ತಯಾರಿಸತಕ್ಕವರಿಗೂ ಹೆಚ್ಚಾಗಿ ಸಂಪಾದನೆಯಾಗುತ್ತಿದೆ. ಈ ದಿವಸ ಸರ್ಕಾರದವರು ಎಷ್ಟು ಶಾಸ್ತ್ರೋಕ್ತವಾಗಿ ಈ ಲಿಕ್ಕರನ್ನು ತಯಾರಿಸುತ್ತಾರೋ ಅದಕ್ಕಿಂತಲೂ ಹೆಚ್ಚಿಗೆ ಶಾಸ್ತ್ರೋಕ್ತ ರೀತಿಯಲ್ಲಿ ಕಳ್ಳಭಟ್ಟಿಯನ್ನು ತಯಾರಿಸುವಷ್ಟು ಪ್ರವೀಣರಾಗಿದ್ದಾರೆ ನಮ್ಮ ಜನರು. ಈಗ ಇದರ ಪರೀಕ್ಷೆಗಾಗಿ ಕುಡಿಯಬೇಕೆಂಬ ಜನರು ಜಾಸ್ತಿಯಾಗುತ್ತಿದ್ದಾರೆ. ಅಂತೂ ಒಟ್ಟಿನಲ್ಲಿ ಈ ಪಾನನಿರೋಧದಿಂದ ಕೆಲವರು ಅಪ್ರತ್ಯಕ್ಷ ವಾಗಿ ಬಡವರಾಗಿದ್ದವರಿಗೆ ಇದರಿಂದ ಬಹಳ ಅನುಕೂಲವಾಯಿತು ಎಂದು ಇಷ್ಟನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).–ಅಧ್ಯಕ್ಷರೇ ಈಗ ನಮ್ಮ ಮುಂದಿರತಕ್ಕ 1964-65ನೇ ಆಯವ್ಯಯ ಪಟ್ಟಿಯನ್ನು ನಾನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದು ನಾನು ಅಪೇಕ್ಷೆಪಟ್ಟಿದ್ದೇನೆ.

ಮೊದಲನೆಯದಾಗಿ—ನಮ್ಮ ದೇಶದಲ್ಲಿ ನಾವು ಹೆಚ್ಚು ಆಹಾರವನ್ನು ಬೆಳೆಯಬೇಕು, ಹಾಗೆ ಆಹಾರವನ್ನು ಹೆಚ್ಚು ಬೆಳೆಯಲು ವ್ಯವಸಾಯಕ್ಕೆ ಹೆಚ್ಚಿನ ಲಕ್ಷ್ಯ ಕೊಡಬೇಕು ಎಂದು ನಾವೆಲ್ಲರೂ ಹೇಳುತ್ತಿದ್ದೇವೆ. ಈ ಬಾಬಿನಲ್ಲಿ ಮಾನ್ಯ ಮಂತ್ರಿಗಳು ಬಾವಿಗಳನ್ನು ತೋಡಿಸತಕ್ಕ ಬಗ್ಗೆ ಮತ್ತು ಪಂಪ್‌ಸೆಂಟ್‌ಗಳ ಬಗ್ಗೆ 3 ಸಾವಿರ ರೂಪಾಯಿಗಳ ಸಾಲವನ್ನು ಪ್ರತಿಯೊಬ್ಬ ರೈತನಿಗೂ ಕೊಡುತ್ತಿ ದ್ದಾರೆ. ಆದರೆ ನಮ್ಮಲ್ಲಿ ಈ ಇರಿಗೇಷನ್ ಪಂಪ್‌ಸೆಟ್‌ಗಳ ವಿಚಾರ ಹೇಳುವುದಾದರೆ – ಈಗಾಗಲೇ ಅಲ್ಲಿಗೆ 17-18 ಎಲೆಕ್ಟ್ರಿಕ್ ಪಂಪ್‌ಸೆಟ್ಟುಗಳು ಬಂದಿವೆ. ಅಲ್ಲಿ ಐ.ಪಿ. ಸೆಟ್ಸ್‌ಗಳನ್ನು ಕೊಡಬೇಕೆಂದು ಅನೇಕರು ಅರ್ಜಿಗಳನ್ನು ಹಾಕಿಕೊಂಡಿದ್ದಾರೆ. ಜನರಿಗೆ ಹೈರ್‌ಪರ್ಚೇಜ್ ಸಿಸ್ಟಂ ಮೇಲೆ ಅವುಗಳನ್ನು ಕೊಡುತ್ತೇವೆಂದು ಹೇಳುತ್ತಿದ್ದರು. ಈ ಬಗ್ಗೆ ನಮ್ಮ ಜಿಲ್ಲೆಗೆ 90 ಲಕ್ಷ ರೂಪಾಯಿಗಳನ್ನು ಒದಗಿಸ ಲಾಗುತ್ತದೆಂದು ಹೇಳಲಾಗಿತ್ತು. ಆದರೆ ಇಲ್ಲಿಯವರೆಗೆ ಒಬ್ಬರಿಗಾದರೂ ಈ ಐ.ಪಿ. ಸೆಟ್ಟುಗಳನ್ನು ಕೊಟ್ಟಿಲ್ಲ. ಕಾರಣವೇನೋ ತಿಳಿಯದು. ರಾಯಚೂರು ಜಿಲ್ಲೆಯನ್ನು ನೆಗ್ಲೆಕ್ಟ್ ಮಾಡಿದ್ದಾರೆ. ಇದು ತುಂಬಾ ವಿಷಾದಕರವಾದ ವಿಚಾರ. ಈ ಜಿಲ್ಲೆಗೆ ಆ ತುಂಗಾ ಇತ್ಯಾದಿ ಯಾವ ಜಲಾಶಯ ದಿಂದಲೂ ನೀರು ಬರುವುದಿಲ್ಲ. ಹೀಗಾಗಿ ಈ ಜಿಲ್ಲೆಯ ಜನರಿಗೆ ಯಾವ ಒಂದು ಇರಿಗೇಷನ್ ಫೆಸಿ ಲಿಟಿಯೂ ಇರುವುದಿಲ್ಲ. ಅನೇಕ ಜನರು ಈ ಐ.ಪಿ. ಸೆಟ್ಟುಗಳನ್ನು ನಂಬಿಕೊಂಡು ತಮ್ಮಲ್ಲಿದ್ದ ಎತ್ತುಗಳನ್ನೂ ಕೂಡ ಮಾರಾಟಮಾಡಿಬಿಟ್ಟಿದ್ದಾರೆ. ಅಲ್ಲಿ ಇಲಾಖೆಯವರನ್ನು ಕೇಳಿದರೆ ತಂತಿ ಇಲ್ಲ, ಕಂಬ ಇಲ್ಲ ಎಂದು ಹೇಳುತ್ತಿದ್ದಾರೆ. ನಮ್ಮಲ್ಲಿಯ ರೈತರು ಹೇಗೋ ಎಲೆಕ್ಟ್ರಿಕ್ ಮೋಟಾರುಗಳು ಸಿಗುತ್ತವೆಂದು ಹೇಳಿ ಆ ಡಿಸೇಲ್ ಎಂಜಿನ್‌ಗಳನ್ನೂ ಕೈಬಿಟ್ಟರು. ಹೀಗಾಗಿರುವಾಗ ಈ ದಿವಸ ಅಲ್ಲಿನ ರೈತರಿಗೆ ಈ ಪಂಪ್‌ಸೆಟ್‌ಗಳನ್ನು ಕೊಡದಿದ್ದರೆ ಅವರಿಗೆ ಪೂರಾ ಅನ್ಯಾಯವಾಗುತ್ತದೆ. ಸಧ್ಯಕ್ಕೆ ಅಲ್ಲಿಗೆ 100-150 ಪಂಪ್‌ಸೆಟ್‌ಗಳನ್ನಾದರೂ ಒದಗಿಸದಿದ್ದರೆ ಬಹಳ ತೊಂದರೆಯಾಗುತ್ತದೆ. ಸರ್ಕಾರದವರು ಕೂಡಲೆ ಅಲ್ಲಿಗೆ ಪಂಪ್‌ಸೆಟ್‌ಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮಲ್ಲಿ ಸಾಯಿಲ್ ಕನ್‌ಸರ್ವೇಷನ್ ಕೆಲಸ ನಡೆಯುತ್ತಿದೆ. ಈಗ ಸುಮಾರು ನಮ್ಮ ಜಿಲ್ಲೆಯಲ್ಲಿ 25 ಸಾವಿರ ಎಕರೆಗೆ ಕಾಂಟೂರ್‌ಬಂಡಿಗ್ ಆಗಬೇಕಾಗಿದೆ. ಈ ಬಗ್ಗೆ ನಾವು ಅಲ್ಲಿ ಒಂದು ರೆಸಲ್ಯೂಷನ್ನನ್ನೇ ಮಾಡಿದ್ದೇವೆ. ಕೆಲಸವನ್ನು ಬೇಗ ಪ್ರಾರಂಭ ಮಾಡಬೇಕೆಂದು ನಾವು ಹೇಳುತ್ತಿದ್ದೇವೆ. ಈಗಾಗಲೇ ನಮ್ಮ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲೂ ಮತ್ತು ಕೆಲವು ಗ್ರಾಮ ಗಳಲ್ಲೂ ಸ್ಕೇರ್ಸಿಟಿಯ ಚಿಹ್ನೆಗಳು ಕಾಣುತ್ತಿವೆ. ಅಲ್ಲಿ ಸದ್ಯದಲ್ಲೇ ಈ ಕಾಂಟೂರ್ ಬಂಡಿಗ್ ಕೆಲಸ

(ಶ್ರೀಮತಿ ಬಸವರಾಜೇಶ್ವರಿ)

ವಾದರೂ ಪ್ರಾರಂಭವಾಗುತ್ತದೆಂದು ನಾವು ಭಾವಿಸಿದ್ದೆವು. ಆದರೆ ಅಲ್ಲಿ ಇಡೀ ಜಿಲ್ಲಾಕ್ಕೆಲ್ಲಾ ಸರ್ವೆ ಮಾಡತಕ್ಕವರು 4-5 ಮಂದಿ ಮಾತ್ರ ಇದ್ದಾರೆ. ಈ ನಾಲ್ಕೈದು ಮಂದಿ ಜಿಲ್ಲೆಯಲ್ಲಿ ಎಲ್ಲಿ ಕೆಲಸ ಮಾಡಬೇಕು ? ಎಲ್ಲಿ ಇವರು ಸರ್ವೆ ಮಾಡಬೇಕು ? ಇಂಥಾ ಒಂದು ಪ್ರಶ್ನೆ ಬಂದಿದೆ. ಆದುದರಿಂದ ಈಗಲಾದರೂ ಅಗ್ರಿಕಲ್ಚರ್ ಇಲಾಖೆಗೆ ಈ ಸಾಯಿಲ್ ಕನ್‌ಸರ್ವೇಷನ್ನಿಗಾಗಿ ಹೆಚ್ಚಿಗೆ ಸ್ಟಾಫನ್ನು ಕೂಡಲೇ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನಾದರೂ ಸರ್ಕಾರದವರು ಈ ಇಲಾಖೆಗೆ ಹೆಚ್ಚಿನ ಲಕ್ಷ್ಯಕೊಡಬೇಕೆಂದು ಹೇಳುತ್ತೇನೆ. ಅಲ್ಲಿ ಕೆಲಸ ಬೇಗ ಆಗುವಂತೆ ಮಾಡಬೇಕು.

ಇನ್ನು ರೂರಲ್ ವಾಟರ್ ಸಪ್ಲೈ ಸ್ಕೀಮಿಗಾಗಿ ಸರ್ಕಾರದವರು ಎಲ್ಲಾ ಕಡೆಗಳಿಗೂ ಸಹಾಯ ನೀಡುತ್ತಾರೆಂಬುದಾಗಿ ಎಲ್ಲಕಡೆಗೂ ಪರಿಪತ್ರ ಬಂದಿತ್ತು. ಯಾರು ಶೇಕಡ 25 ರಷ್ಟು ಖರ್ಚನ್ನು ವಹಿಸಲು ಮುಂದೆ ಬರುತ್ತಾರೋ ಅಂಥವರಿಗೆಲ್ಲಾ ಈ ಪ್ರೊಟೆಕ್ಟೆಡ್ ಡ್ರಿಂಕಿಂಗ್ ವಾಟರ್ ಸಪ್ಲೈ ನಲ್ಲಿ ಸರ್ಕಾರದವರು ಶೇಕಡ 75 ರಷ್ಟನ್ನು ಕೊಡುತ್ತಾರೆಂಬ ವಿಚಾರ ನಮಗೆಲ್ಲಾ ತಿಳಿಯಿತು. ಇದಕ್ಕಾಗಿ ನಾವು ಬೇಕಾದ ಎಸ್ಟಿಮೇಟ್, ಪ್ಲಾನ್ ಇತ್ಯಾದಿಗಳನ್ನೆಲ್ಲಾ ಮಾಡಿಸಿದೆವು. ಈ ನೀರನ್ನು ಸರಬರಾಯಿ ಮಾಡಲು ನಾವು ಸರ್ಕಾರಕ್ಕೆ ಅರ್ಜಿ ಹಾಕಿಕೊಂಡೆವು. ಆದರೆ ಇದುವರೆಗಾದರೂ ಈ ವಿಚಾರದಲ್ಲಿ ಸರ್ಕಾರ ಏಕೆ ಮನಸ್ಸು ಮಾಡಲಿಲ್ಲವೋ ತಿಳಿಯದು. ನಮ್ಮ ಪ್ರಾಂತ್ಯದಲ್ಲೆಲ್ಲಾ ಇರ ತಕ್ಕದ್ದು ಬರೀ ಬ್ಲಾಕ್‌ಕಾಟನ್ ಸಾಯಿಲ್. ಸರಿಯಾಗಿ ಅಲ್ಲಿ ಕುಡಿಯುವ ನೀರೇ ಸಿಕ್ಕುವಹಾಗಿಲ್ಲ. ಅಲ್ಲಿಯ ಪರಿಸ್ಥಿತಿ ಹಾಗಿದೆ.

ಇದು ರೂರಲ್ ವಾಟರ್ ಸಪ್ಲೈ ವಿಷಯವಾಯಿತು.

11-00 A. M.

ಇನ್ನು ಕುಡಿಯುವ ನೀರಿನ ಬಾವಿಗಳ ವಿಷಯವಾಗಿ ಹೇಳುವುದಾದರೆ ಇದರಲ್ಲಿ ಕೆಲವು ಅನಾನುಕೂಲಗಳಿವೆ. ಎರಡು ಮೂರುಸಾರಿ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ ನಲ್ಲಿ ಈ ವಿಚಾರ ಬಂದಾಗ ಆದಷ್ಟು ಮಟ್ಟಿಗೆ ಎಲ್ಲಾ ಕಡೆಗಳನ್ನೂ ಬಾವಿಗಳನ್ನು ತೆಗೆಸುತ್ತೇವೆಂದು ಹೇಳಿದ್ದರು. ಆದರೆ ಹಿಂದೆ ಏನು ರೇಟುಗಳನ್ನು ಕೊಟ್ಟಿದ್ದಾರೋ ಅದನ್ನೇ ಕೊಡುತ್ತಾರೆಂದು ಬಂದು ನಮ್ಮಲ್ಲಿ ಕಾಂಟ್ರಾಕ್ಟರುಗಳು ಹೇಳುತ್ತಿದ್ದಾರೆ. ಕೂಲಿ ಕೆಲಸಗಾರರು ಆ ದರಕ್ಕೆ ಸಿಗುವುದಿಲ್ಲ ವೆಂದು ಹೇಳುತ್ತಿದ್ದಾರೆ. ಇವತ್ತಿನ ದಿವಸ ಕಲ್ಲು ಬಂಡೆ ಒಡೆದು ಭಾವಿಗಳನ್ನು ತೆಗೆಯಬೇಕಾಗಿದೆ. ಹಿಂದಿನ ರೇಟನ್ನು ಕೊಟ್ಟರೆ ಖಂಡಿತ ಬಾವಿಗಳು ನಿರ್ಮಾಣವಾಗುವುದಿಲ್ಲ. ಆ ಬಗ್ಗೆ ಈಗಿನ ರೇಟನ್ನು ಕೊಡುವುದು ಉತ್ತಮ. ಈ ಕೆಲಸ ತಾಲ್ಲೂಕ್ ಬೋರ್ಡುಗಳಿಂದ ಆಗದೆ ನಿಂತು ಹೋಯಿತು. ಒಟ್ಟಿನಲ್ಲಿ ಪ್ರಾಕ್ಟಿಕಲ್ಲಾಗಿ ಬಾವಿಗಳನ್ನು ತೆಗೆಯುವ ಕೆಲಸ ನಮ್ಮ ಜಿಲ್ಲೆಯಲ್ಲಿ ಸಮರ್ಪಕವಾಗಿ ನಡೆಯಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆ ಕಡೆಗೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕು.

ಇನ್ನು ಆರೋಗ್ಯದ ವಿಷಯ. ಈಗ ಪ್ರೈಮರಿ ಹೆಲ್ತ್ ಸೆಂಟರ್ಸ್, ಪ್ರೈಮರಿ ಹೆಲ್ತ್ ಯೂನಿಟ್ಟುಗಳು ಎಂಬುದಾಗಿ ನಮ್ಮ ಜಿಲ್ಲೆಯಲ್ಲಿ ತೆರೆದಿರುತ್ತಾರೆ. ಸುಮಾರು ಒಂದು-ಒಂದೂವರೆ ವರ್ಷಗಳಾದರೂ ಯಾವ ಸೆಂಟರಿನಲ್ಲಿಯೂ ಡಾಕ್ಟರುಗಳಿಲ್ಲ, ಕಾಂಪೌಂಡರುಗಳು ಸಹ ಇಲ್ಲ, ಹೀಗಾದರೆ ಹೆಲ್ತ್ ಯೂನಿಟ್ಟುಗಳಲ್ಲಿ ಹೇಗೆ ಕೆಲಸ ನಡೆಯುತ್ತದೆ ? ಪ್ರೈಮರಿ ಹೆಲ್ತ್ ಸೆಂಟರುಗಳನ್ನು ಮತ್ತು ಯೂನಿಟ್ಟು ಕಟ್ಟಡಗಳನ್ನು ಕಟ್ಟುವುದಕ್ಕಾಗಿ 7-8 ವರ್ಷಗಳ ಹಿಂದೆಯೇ 10-12 ಸಾವಿರ ರೂಪಾಯಿಗಳನ್ನು ಕಾಂಟ್ರಿಬ್ಯೂಷನ್ ರೂಪದಲ್ಲಿ ತೆಗೆದು ಕೊಂಡರು. ಆ ಬಗ್ಗೆ ಜಮೀನು ಕೂಡ ಸಿದ್ಧ ಮಾಡಿದರು. ಆದರೆ ಕಟ್ಟಡ ಕಟ್ಟುವುದಕ್ಕೆ ಸರ್ಕಾರದವರು ಮನಸ್ಸು ಮಾಡಿದ್ದಾರೆಯೋ ಎಂದರೆ ಅದೇನೂ ಕಾಣುವುದಿಲ್ಲ. ಕೆಲವು ಕಡೆಗಳಲ್ಲಿ ಬಹಳ ಜಾಗ್ರತೆಯಾಗಿ ಕಟ್ಟಡಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ಸುಮಾರು 1-1½ ವರ್ಷಗಳಿಂದಲೂ ಈ ಬಗ್ಗೆ ವಿಚಾರಮಾಡುತ್ತಿದ್ದರೂ ಇವತ್ತಿನ ವರೆಗೂ ಸರ್ಕಾರ ಈ ಬಗ್ಗೆ ಲಕ್ಷ್ಯ ಕೊಟ್ಟಿಲ್ಲ. ಹೆಲ್ತ್ ಸೆಂಟರುಗಳಿಗೆ ಕಟ್ಟಡಗಳನ್ನೇ ಕಟ್ಟದೆ ಡಾಕ್ಟರುಗಳಿಗೆ ವಸತಿ ಸೌಕರ್ಯವಿಲ್ಲದೆ ನಮ್ಮಲ್ಲಿ ಹೆಲ್ತ್ ಸೆಂಟರುಗಳನ್ನು ನಡೆಸುವುದು ಬಹಳ ಕಷ್ಟ ವಾಗಿದೆ. ಪ್ರತಿಯೊಂದು ಕಡೆಯಲ್ಲೂ ಅದರಲ್ಲೂ ಹಿಂದುಳಿದ ಪ್ರದೇಶಗಳಲ್ಲಿ ಕಟ್ಟಡಗಳ ನಿರ್ಮಾಣದ ಬಗ್ಗೆ ಸರ್ಕಾರದವರು ಇಷ್ಟೊಂದು ತಾತ್ಸಾರ ಮಾಡಿದರೆ ತುಂಬಾ ಕಷ್ಟವಾಗುತ್ತದೆ. ಡಾಕ್ಟರುಗಳು ಇರುವುದಕ್ಕೆ ತಕ್ಕ ದವಾಖಾನೆಗಳ ನಿರ್ಮಾಣ ಅಗತ್ಯ. ಅದಕ್ಕಾಗಿ ಸರ್ಕಾರದವರು ಈ ಬಾಬಿಗೆ ಹೆಚ್ಚು ಹಣವನ್ನು ಒದಗಿಸಬೇಕು. ನಾವು ಇನ್ನು ಎಷ್ಟು ಸಾರಿ, ಹೇಗೆ ಸರ್ಕಾರಕ್ಕೆ ಹೇಳಬೇಕೋ ಗೊತ್ತಿಲ್ಲ. ಸರ್ಕಾರದವರು ಈ ಪ್ರೈಮರಿ ಹೆಲ್ತ್ ಸೆಂಟರುಗಳಿಗೆ ಮತ್ತು ಹೆಲ್ತ್ ಯೂನಿಟ್ಟುಗಳಿಗೆ ಬೇಕಾದ ಕಟ್ಟಡಗಳನ್ನು ಕಟ್ಟಿಸಿ ಕೊಡಲಿ ಇಲ್ಲವೇ ಕಾಂಟ್ರಿಬ್ಯೂಷನ್ ರೂಪದಲ್ಲಿ

ಬಂದಂಥ ಹಣವನ್ನು ವಾಪಸ್ಸು ಕೊಡಲಿ. ಎರಡು ಮೂರು ವರ್ಷಗಳಿಂದಲೂ ನಮ್ಮ ಜಿಲ್ಲೆಯಲ್ಲಿ ಈ ಹೆಲ್ತ್ ಯೂನಿಟ್ಟುಗಳು ಇಲ್ಲದೆ, ಡಾಕ್ಟರುಗಳಿಗೆ ವಸತಿ ಸೌಕರ್ಯಕ್ಕೆ ಅನುಕೂಲ ಮಾಡದೇ ಇರುವುದರಿಂದ ಜನರಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಸರ್ಕಾರದವರು ಜಾಗ್ರತೆಯಾಗಿ ಈ ಬಗ್ಗೆ ಲಕ್ಷ್ಯ ಕೊಟ್ಟು ಕೊಡಲೇ ಹೆಲ್ತ್ ಯೂನಿಟ್‌ಗಳನ್ನು ಕಟ್ಟಿಸಿ; ಅದಕ್ಕೆ ಬೇಕಾದ ಡಾಕ್ಟರುಗಳನ್ನು ಮತ್ತು ತಕ್ಕ ಸಿಬ್ಬಂದಿಯನ್ನು ನೇಮಕಮಾಡುವ ವ್ಯವಸ್ಥೆ ಮಾಡ ಬೇಕೆಂದು ಸರ್ಕಾರದವರಲ್ಲಿ ಹೇಳಲಿಚ್ಛಿಸುತ್ತೇನೆ.

ಕಡೆಯದಾಗಿ ತುಂಗಭದ್ರಾ ಡೆವಲಪ್‌ಮೆಂಟ್ ವಿಚಾರವಾಗಿ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದಿದ್ದೇನೆ. ಇವತ್ತಿನ ದಿವಸ ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ತುಂಗಭದ್ರಾ ಮುಖ್ಯ ಜಲಾಶಯವನ್ನು ಕಟ್ಟುವುದಕ್ಕಾಗಿ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನು ಖರ್ಚು ಮಾಡಿದ್ದರೂ ಅದರಿಂದ ಸರಿಯಾಗಿ returns ಬರುತ್ತಿಲ್ಲವೆಂಬುದು ಇದೆ. ಜನರು ಸಾಕಷ್ಟು ನೀರನ್ನು ಉಪಯೋಗಿಸಲಿಕ್ಕಾಗುತ್ತಿಲ್ಲ ಮತ್ತು ಇರ್ರಿಗೇಷನ್ನಿಗೂ ಸಾಕಷ್ಟು ಅನುಕೂಲವಾಗಿಲ್ಲ ವೆಂಬುದಾಗಿ ಪ್ರತಿಯೊಬ್ಬರಲ್ಲೂ ಕಳವಳ ಉಂಟಾಗಿದೆ. ಅವುಗಳಲ್ಲಿ ಗಂಗಾವತಿ ಸ್ವಲ್ಪ ಮಟ್ಟಿಗೆ ಡೆವಲಪ್ ಆಗಿದೆ. ಇನ್ನು ಸಿಂಧನೂರ್ ವಿಷಯ ಹೇಳುವುದಾದರೆ It is like a desert and it is very thinly populated area ಆಗಿದೆ. ಅನೇಕ ಜನರು ಕುಡಿಯಲಿಕ್ಕೆ ನೀರು ಇಲ್ಲದೆ ಸತ್ತುಹೋದ ಪ್ರಸಂಗಗಳು ಒಂದಾನೊಂದು ಕಾಲದಲ್ಲಿ ಇಲ್ಲಿ ಸಂಭವಿಸಿದವು. ಇವತ್ತಿನ ದಿವಸ ಒಂದೇ ಸಮನೆ ಇದು ಡೆವಲಪ್ ಆಗುವುದಕ್ಕೆ ಬಹಳ ಅಸಾಧ್ಯವಾಗಿದೆ. ರೈತರಿಗೆ ತಮ್ಮ ಜಮೀ ನನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಸರ್ಕಾರದವರು ಒಂದು ಎಕರೆಗೆ 50 ರೂಪಾಯಿನಂತೆ ತಕಾವಿ ಸಾಲವನ್ನು ಕೊಡುತ್ತಾರೆ. ಕ್ಷಾಮಪೀಡಿತ ಪ್ರದೇಶಗಳಲ್ಲಿ ಈ ರೀತಿ ಕೊಟ್ಟರೆ ಆ ದುಡ್ಡ ನ್ನೆಲ್ಲಾ ತಿಂದುಹಾಕುತ್ತಾರೆ. ಸರ್ಕಾರದವರು ಸುಮಾರು ಎರಡು ಲಕ್ಷ ರೂಪಾಯಿಗಳನ್ನು ಜಮೀನು ಅಭಿವೃದ್ಧಿಗಾಗಿ ತಕಾವಿ ಸಾಲಕ್ಕಾಗಿ ಇಟ್ಟಿದ್ದರೂ ಎಷ್ಟೋ ಸಂದರ್ಭಗಳಲ್ಲಿ ರೈತರ ವಾದ ವಿವಾದಗಳಿಂದ ಅನೇಕ ಕಡೆಗಳಲ್ಲಿ ಜಮೀನುಗಳ ಅಭಿವೃದ್ಧಿ ಕಾರ್ಯವಾಗಲಿಲ್ಲ. ಹಣದ ರೂಪದಲ್ಲಿ ತಕಾವಿ ಸಾಲ ಕೊಡಬಾರದು. ರೈತರಿಗೆ ಪರಿಹಾರ ಕೊಡುವ ಬಗ್ಗೆ ಸರ್ಕಾರದವರು ತೀವ್ರವಾಗಿ ಲಕ್ಷ್ಯ ಕೊಡಬೇಕು. ಹಿಂದೆ ಜಮೀನು ಮುಳುಗಡೆಯಾದವರಿಗೆ ಯಾವ ರೀತಿ ಪರಿಹಾರ ಕೊಟ್ಟರೋ ಅದೇ ರೀತಿ ಕೊಡಬೇಕು. ರೈತರುಗಳಿಂದ ತಮ್ಮ ಜಮೀನಿಗೆ ಸಾಕಷ್ಟು ರೆಮಿಷನ್ ಕೊಡಬೇಕೆಂಬ ಕೂಗು ನಮ್ಮ ಮುಂದೆ ಬರುತ್ತಲೇ ಇದೆ ಇನ್ನು ಖಾಯಂ ಪರಿಹಾರ ಒದಗಿಸುವ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇವತ್ತಿನ ದಿವಸ ಜಮೀನುಗಳಿಗೆ ಸಾಕಷ್ಟು ನೀರು ಬಾರದೇ ಇರುವುದ ರಿಂದ ಸರ್ಕಾರದವರು ಈಗ ಕೊಡುತ್ತಿರುವ ಎಕರೆಗೆ 50 ರೂಪಾಯಿಗಳ ಪರಿಹಾರವನ್ನು 300 ರೂಪಾಯಿಗಳಿಗಾದರೂ ಏರಿಸಿ. ಭೂಮಿ ಲೆವಲ್ ಮಾಡಿಕೊಡಿ. ಇದರಿಂದ ಸರ್ಕಾರಕ್ಕೆ ಬರುವ ಹಣ ಸುಸೂತ್ರವಾಗಿ ಬರುತ್ತದೆ. ಜಮೀನು ಅಭಿವೃದ್ಧಿಯ ಬಗ್ಗೆ ಸರ್ಕಾರದವರು ಹೆಚ್ಚು ಲಕ್ಷ್ಯ ಕೊಡಬೇಕು. ಯಾವರೀತಿ ಜಮೀನು ಅಭಿವೃದ್ಧಿಯಾಗುತ್ತಿದೆಯೋ ಅದೇರೀತಿ ಭೂಮಿಯನ್ನು ಲೆವಲ್ ಮಾಡಿಸಬೇಕು. ರೈತರು ತಮ್ಮ ಜಮೀನನ್ನು ಅಭಿವೃದ್ಧಿ ಮಾಡಬೇಕಾದರೆ ಅದರ ಜವಾಬ್ದಾರಿ ಸರ್ಕಾರಕ್ಕೂ ಇದೆ. ಇನ್ನು ಸಿಂಧನೂರ್ ಮಾನ್ವಿ ಮತ್ತು ಗಂಗಾವತಿ ತಾಲ್ಲೂಕ್ ಗಳಲ್ಲಿರತಕ್ಕ ಸಾವಿರಾರು ಎಕರೆ ಜಮೀನುಗಳನ್ನು ಲೆವಲ್ ಮಾಡುವುದಕ್ಕಾಗಿ ಸಣ್ಣ ಸಣ್ಣ ಟ್ರಾಕ್ಟರು ಗಳನ್ನು ಒದಗಿಸಬೇಕಾಗಿದೆ. ಅಲ್ಲಿ ಎತ್ತುಗಳಿಂದ, ಟ್ರಾಕ್ಟರುಗಳನ್ನು ಉಪಯೋಗಿಸಿ, ಸೇಂಗಾ ಬೆಳೆ ಬೆಳೆಯುತ್ತಿದ್ದಾರೆ. ಇದನ್ನು ಇನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಬೇಕಾಗಿದೆ. ಪ್ರತಿಯೊಂದು ಟ್ರಾಕ್ಟರ್‌ನಿಂದ ಸುಮಾರು 300-400 ಎಕರೆ ಜಮೀನುಗಳನ್ನು ಲೆವಲ್ ಮಾಡಿಕೊಳ್ಳಬಹುದು ಮತ್ತು ಚೆನ್ನಾಗಿ ಅದರಲ್ಲಿ ವ್ಯವಸಾಯ ಮಾಡಬಹುದು. ಈ ಮೂರು ತಾಲ್ಲೂಕುಗಳಿಗೂ ಪ್ರತಿಯೊಂದಕ್ಕೂ 10 ಟ್ರಾಕ್ಟರುಗಳನ್ನು ಭೂಮಿ ಲೆವಲ್ ಮಾಡುವುದಕ್ಕೋಸ್ಕರ ಕೇಳಿದ್ದಾರೆ ಅದನ್ನು ಜಾಗ್ರತೆ ಮಂಜೂರು ಮಾಡಬೇಕೆಂದು ಕೇಳುತ್ತೇನೆ.

ಇನ್ನು ನಮ್ಮಲ್ಲಿ ತೋಟಗಳನ್ನು ಬೆಳೆಸುವುದಕ್ಕಾಗಿ ಒಳ್ಳೆಯ localised area for gardens ಇದೆ. ಆ ತೋಟಗಳಲ್ಲಿ ಬೆಳೆಯತಕ್ಕ ಹಣ್ಣು ಹಂಪಲುಗಳಿಗೇ ಸರಿಯಾದ ಮಾರ್ಕೆಟ್ ಇಲ್ಲ. ಇವಕ್ಕೆ ಸರಿಯಾದ ಪ್ರೋತ್ಸಾಹ ಕೊಟ್ಟರೆ ರೈತನ ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆ. ಒಳ್ಳೆಯ ತರಕಾರಿ ಗಳು, ಆಲೂಗಡ್ಡೆ ಮತ್ತು ಮೆಣಸಿನಕಾಯಿ ಮುಂತಾದುವು ಬೆಳೆಯುವುದಕ್ಕೆ ನಮ್ಮ ಪ್ರದೇಶ ಹೆಸರುವಾಸಿಯಾಗಿದೆ. ಆದ್ದರಿಂದ ಇಲ್ಲಿ ಫಾರಿನ್ ಮಾರ್ಕೆಟ್ ಒದಗಿಸಿ ಕೊಟ್ಟರೆ ಅಲ್ಲಿನ ರೈತರಿಗೆ ತುಂಬಾ ಸಹಾಯವಾಗುತ್ತದೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri N. O. SAMAJI (Belgaum II).—(Spoke in Marathi.)

ಶ್ರೀ ಬಿ. ಜೆ. ಲಿಂಗೇ ಗೌಡ (ಚನ್ನಪಟ್ಟಣ).—ಮಾನ್ಯ ಸಭಾಪತಿಗಳೇ, 1964—65ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ನಾನ ಕೆಲವು ಮಾತುಗಳನ್ನು ಹೇಳಬೇಕು ಎಂದು ನಿಂತಿದ್ದೇನೆ. ಹಣಕಾಸಿನ ಮಂತ್ರಿಗಳು ನಮ್ಮ ಮುಂದೆ ಇಟ್ಟಿರುವ ಆಯವ್ಯಯದಲ್ಲಿ ಏನು ಅಂಶ ಗಳಿವೆ ಎಂಬುದನ್ನು ವಿಮರ್ಶಿಸುವುದಕ್ಕೆ ಶಕ್ತಿ ನನಗೆ ಇದೆ ಎಂದು ತಿಳಿದುಕೊಂಡು ಮಾತನಾಡಲು ನಾನು ಈ ದಿವಸ ಎದ್ದು ನಿಂತುಕೊಂಡಿಲ್ಲ. ಈಗ ಮೂರು ನಾಲ್ಕು ದಿವಸಗಳಿಂದ ಈ ಸಭೆಯಲ್ಲಿ ನಡೆದ ಬಜೆಟ್ ಭಾಷಣಗಳನ್ನು ಕೇಳಿದೆ. ಇಲ್ಲಿ ಮಾತನಾಡುವಾಗ ಯಾವುದನ್ನು ಹೇಳಬಹುದು ಎನ್ನುವುದನ್ನೂ ಆಲೋಚನೆ ಮಾಡಿಕೊಂಡೆ. ಕೆಲವು ಸಂದರ್ಭಗಳಲ್ಲಿ ನಾವು ಪಕ್ಷದಲ್ಲಿ ಏನ ಮಾತ ನಾಡುತ್ತೇವೆಯೋ ಹಾಗೆಯೇ ಇಲ್ಲಿಯೂ ಮಾತನಾಡಬಹುದೇ ಎಂದು ಯೋಚನೆ ಮಾಡಿದೆ. ಸಂತೆ ಅಥವಾ ಪಬ್ಲಿಕ್ ಮೀಟಿಂಗುಗಳಲ್ಲಿ ಹೇಗೆ ಮಾತನಾಡುತ್ತೇವೆಯೋ ಹಾಗೆಯೇ ಇಲ್ಲಿಯೂ ಮಾತನಾಡಬಹುದೇ ಎಂದೂ ಆಲೋಚನೆ ಮಾಡಿದೆ. ಅಂಥದಕ್ಕೆಲ್ಲ ಇಲ್ಲಿ ಅವಕಾಶವಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಒಳ್ಳೆಯ ರಾಜಕಾರಣಗಳು, ಮಂತ್ರಿಗಳೂ ಮತ್ತು ಮುಖ್ಯ ಮಂತ್ರಿಗಳೂ ಆಗಿದ್ದವರು, ಒಂದೇ ಪಕ್ಷದಲ್ಲಿದ್ದವರು, ಇಂತಹ ದೊಡ್ಡವರೇ ಕೆಲವು ವಿಷಯಗಳನ್ನು ಮಾತನಾಡಿದ ಮೇಲೆ ನನಗೂ ಇಲ್ಲಿ ಮಾತನಾಡಬಹುದು ಎನ್ನುವ ಧೈರ್ಯ ಬಂದು ಈ ದಿವಸ ತಮ್ಮ ಮುಖಾಂತರ ಈ ಸಭೆಯನ್ನುದ್ದೇಶಿಸಿ ಮಾತನಾಡಬೇಕು ಎಂದು ನಾನು ನಿಂತಿದ್ದೇನೆ. ಒಬ್ಬ ಮಾನ್ಯ ಸದಸ್ಯರು ಮಾತನಾಡುವಾಗ ಹೇಳಿದರು: ಪುಡಾರಿಗಳ ಕಾಟ ಮತ್ತು ಈ ಸರ್ಕಾರ ದವರು ಸಹಕರಿಸುವುದು ಕ್ವಾಸಿ ಜುಡಿಷಿಯಲ್ ಪ್ರೊಸೀಡಿಂಗ್ಸ್‌ನಲ್ಲಿ ಕೈ ಹಾಕುವುದು ಇತ್ಯಾದಿ ವಿಷಯ ಗಳನ್ನೆಲ್ಲ ಪ್ರಸ್ತಾಪ ಮಾಡಿದುದನ್ನು ಕೇಳಿ ನನಗೆ ನಿಜವಾಗಿಯೂ ಬಹಳ ಆಶ್ಚರ್ಯವಾಯಿತು. ಏಕೆಂದರೆ ಇಂಥ ವಿಷಯಗಳನ್ನು ಮಾತನಾಡಬೇಕಾದರೆ ಅವರು ಅನುಭವದಿಂದ ಆ ರೀತಿ ಮಾತನಾಡಿ ದ್ದಾರೆಂದು ಹೇಳಬಹುದಾಗಿದೆ. ಆ ಅನುಭವ, ಅವರಿಂದ ಹೆಚ್ಚಾಗಿ ನನಗೆ ಆಗಿದೆ. ಅವರು ಶ್ರೀಮಾನ್ ಜತ್ತಿಯವರ ಮಂತ್ರಿಮಂಡಲದಲ್ಲಿ ಇದ್ದಾಗ್ಗೆ, ರೆವೆನ್ಯೂ ಮಂತ್ರಿಗಳಾಗಿ ಚನ್ನಪಟ್ಟಣ ತಾಲ್ಲೂಕಿಗೆ ಬಂದಿದ್ದರು. ಇವರು ಮಂತ್ರಿಗಳಾಗುವುದಕ್ಕೆ ಮೊದಲು ಸ್ವಲ್ಪ ಕಾಲ ನಮ್ಮ ಕಾಂಗ್ರೆಸ್ ಪಕ್ಷದವರು. ಇವರಿಗೆ ವಿರಾಮವನ್ನು ಕೊಟ್ಟಿದ್ದರು, ಆ ವಿರಾಮ ಕಾಲದಲ್ಲಿ ಅವರು ಲಾಯರ್ ಕೆಲಸವನ್ನು ಮಾಡುತ್ತಿದ್ದರು. ಚನ್ನಪಟ್ಟಣ ತಾಲ್ಲೂಕಿನಲ್ಲಿ ಒಂದು ಜಮೀನು ವ್ಯವಹಾರಕ್ಕೆ ಸಂಬಂಧಪಟ್ಟಂತೆ ಒಂದು ಪಾರ್ಟಿಯವರು ಅವರನ್ನು ಲಾಯರಾಗಿ ಇಟ್ಟುಕೊಂಡಿದ್ದರು. ಇದಾದ ಸ್ವಲ್ಪ ಕಾಲದಲ್ಲಿ ಅವರಿಗೆ ಮತ್ತೆ ಮಂತ್ರಿ ಪದವಿ ಬಂತು. ಶ್ರೀಮಾನ್ ಜತ್ತಿಯವರ ಕೃಪಾಕಟಾಕ್ಷ ದಿಂದ, ಎಂದು ಹೇಳಿದರೆ ತಪ್ಪಾಗಲಾರದು.

[MR. SPEAKER in the Chair.]

11-30 A.M.

ಆ ಸಂದರ್ಭವನ್ನು ಅವರು ಉಪಯೋಗ ಮಾಡಿಕೊಂಡರು. ಅಲ್ಲಿನ ತಹಶೀಲ್ದಾರರ ಕೋರ್ಟಿನಲ್ಲಿ ಒಂದು ಕೇಸು ನಡೆಯುತ್ತಿತ್ತು. ನಾನು ಮೊದಲೇ ಹೇಳಿದಹಾಗೆ ಹೈಕೋರ್ಟಿನಲ್ಲಿ ಆ ಪಾರ್ಟಿಯ ಪರವಾಗಿ ಇವರು ವಾದ ಮಾಡಿದರು. ತಹಶೀಲ್ದಾರರ ಹತ್ತಿರ ಬಂದು ಆ ಕೇಸನ್ನು ಅವರ ಪರವಾಗಿ ನಡೆಯುವಂತೆ ಪ್ರಯತ್ನ ನಡೆಯಿತು. ಆಗ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಜತ್ತಿಯವರಿಗೆ ಈ ವಿಚಾರದಲ್ಲಿ ನಾನು ಒಂದು ಕಾಗದ ಬರೆದು ಒಂದು ಪಾರ್ಟಿಯ ಪರವಾಗಿ ವಕಾಲತ್ತು ವಹಿಸಿ ಕೊಂಡಿದವರು ಇಂಥಾ ಪ್ರಯತ್ನ ಮಾಡುತ್ತಿದ್ದಾರೆಂದೇ ಬರೆದು ಅದರ ಕಾಪಿಯನ್ನು ಅವರಿಗೂ ಕಳುಹಿಸಿದ್ದೆ. ಆದುದರಿಂದ ನಾನು ಹೇಳುವುದಿಷ್ಟೆ: ಅಂತಹವರು ಸಣ್ಣಪುಟ್ಟ ವಿಷಯಗಳನ್ನು ಈ ಮಾನ್ಯ ಸಭೆಯಲ್ಲಿ ಮಾತನಾಡಿ ಕಾಂಗ್ರೆಸ್ ಸರಕಾರದವರು ಬಹಳ ಅನ್ಯಾಯ ಮಾಡುತ್ತಿದ್ದಾರೆಂದು, ಪಕ್ಷದ ಸದಸ್ಯರಾಗಿ ಇಲ್ಲಿ ಹೇಳಿ ದೇಶದಲ್ಲಿ ಕಳವಳನ್ನುಂಟುಮಾಡುವುದು ಉಚಿತವಲ್ಲಾ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಇದು ಅನೂಚಾನವಾಗಿ ಹಿಂದಿನಿಂದಲೂ ಬಂದ ಪದ್ಧತಿ ಎಂದು ಅವರು ಹೇಳುತ್ತಿದ್ದಾರೆ.

Sri GANGADHAR NAMOSHI (Gulbarga).—I rise to apoint of order: whether the Hon'ble Member has got a right to raise a party affair while speaking on the budget proposals?

ಶ್ರೀ ಬಿ. ಜೆ. ಲಿಂಗೇಗೌಡ.—ಪಾರ್ಟಿ ಪಾಲಿಟಿಕ್ಸ್ ನಾನು ಹೇಳಿಲ್ಲ. ಪಕ್ಷದಲ್ಲಿ ಮಾತನಾಡುವು ದನ್ನು ಇಲ್ಲಿ ಹೇಳುತ್ತಿದ್ದರು ಅದಕ್ಕೆ ಉತ್ತರ ಕೊಡುತ್ತಿದ್ದೇನೆ. ಇನ್ನೇನೂ ಹೆಚ್ಚಿಗೆ ಹೇಳುತ್ತಿಲ್ಲ.

MR. SPEAKER.—A point of order has been raised. I do not know whether the Member raised it seriously. I have every reason to think that he did not intend to raise a point of order seriously; because I do not think he will find any rule or precedent in support of what he is saying. When allegations are made and counter-allegations are made, there is no point of order. But as I remarked already, the question whether such remarks are relevant to the budget debate is a point which the House may consider as well. The little time that we have would not be put to the best use if we spend time in making allegations and counter-allegations. But allegations having been made, perhaps they deserve a little attention keeping in view the debate before the House.

ಶ್ರೀ ಬಿ. ಜೆ. ಲಿಂಗೇಗೌಡ.—ಅಧ್ಯಕ್ಷರ ಅಪ್ಪಣೆಯನ್ನು ಮೀರುವುದಕ್ಕೆ ನಾನು ಇಷ್ಟಪಡುವುದಿಲ್ಲ. ಅವರು ಕೂಡ ಅಧಿಕಾರದಲ್ಲಿದ್ದಾಗ ಅವರಿಗೆ ಬೇಡವಾಗಿದ್ದ ಅಧಿಕಾರಿಗಳನ್ನು ಬೇರೆ ಕಡೆ ವರ್ಗ ಮಾಡಿ...............

MR. SPEAKER.—How is the Member concerned with it during the budget debate? He made the allegation and the Hon'ble Member has replied to it. Let him pass on to the budget

ಶ್ರೀ ಬಿ. ಜೆ. ಲಿಂಗೇಗೌಡ.—ಈಗ ನಮ್ಮ ಅರ್ಥ ಮಂತ್ರಿಗಳು ಆಯವ್ಯಯ ಅಂದಾಜು ಪಟ್ಟಿಯನ್ನು ನಮ್ಮ ಮುಂದೆ ಒಪ್ಪಿಗೆಗಾಗಿ ಇಟ್ಟಿದ್ದಾರೆ ನಾನು ಈ ಆಯವ್ಯಯದ ಅಂದಾಜನ್ನು ಸ್ವಾಗತಿಸುತ್ತೇನೆ. ಅವರು ಬಹಳ ಬುದ್ಧಿವಂತಿಕೆಯಿಂದ ಈಗ ರೈತನ ಸ್ಥಿತಿ ಎಷ್ಟುಮಟ್ಟಿಗಿದೆಯೆಂಬುದನ್ನು ಗಮನಿಸಿ ಅತನಿಗೆ ಹೆಚ್ಚಿನ ತೆರಿಗೆಯ ಭಾರವನ್ನು ಹೊರಿಸಬಾರದೆಂದು ಒಂದು ತತ್ವವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಅಂದಾಜು ಪಟ್ಟಿಯನ್ನು ತಯಾರಿಸಿದ್ದಾರೆ. ನಮ್ಮ ಕಾಂಗ್ರೆಸ್ ಸರಕಾರ ಸಾಧಿಸಿರುವ ಅನೇಕ ಕೆಲಸಗಳನ್ನು ನಮ್ಮ ಮಾನ್ಯ ಶ್ರೀ ಜತ್ತಿಯವರು ಮತ್ತು ನಮ್ಮ ಮಂತ್ರಿ ಮಂಡಲದವರು ಈಗಾಗಲೇ ವಿಶದವಾಗಿ ತಿಳಿಸಿದ್ದಾರೆ. ಆದರೆ ಸರಕಾರದವರು ಹಾಕಿಕೊಟ್ಟಿರುವ ನೀತಿಯನ್ನು ಅಧಿಕಾರ ವರ್ಗದವರು ಕಾರ್ಯಗತ ಮಾಡಬೇಕಾದ ಸಂದರ್ಭಗಳಲ್ಲಿ ಕೆಲವು ನ್ಯೂನತೆಗಳು ಅನೇಕರಿಗೆ ಕಂಡು ಬಂದಿವೆ. ಅವುಗಳನ್ನು ಸರಿಪಡಿಸುವುದು ನಮ್ಮ ಮಂತ್ರಿ ಮಂಡಲದ ಕರ್ತವ್ಯವೆಂದು ನನ್ನ ಭಾವನೆ.

ಈಗ ಸಹಕಾರ ಸಂಘಗಳ ವಿಚಾರದಲ್ಲಿ ಒಂದು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸರಕಾರದವರು ರೈತನ ಹಿತದೃಷ್ಟಿಯಿಂದ, ರೈತನಿಗೆ ಅವನು ಬೆಳೆದ ಪದಾರ್ಥಗಳಿಗೆ ಒಳ್ಳೆಯ ಬೆಲೆ ಸಿಕ್ಕಲಿ ಎಂದು ಸಹಕಾರ ಸಂಘಗಳ ಮೂಲಕ ಅವಕಾಶವನ್ನು ಕಲ್ಪಿಸಿ ಹಣ ಸಹಾಯವನ್ನು ಮಾಡಿದರು. ಆದರೆ ಆ ತತ್ವವನ್ನು ಜಾರಿ ಮಾಡುವುದರಲ್ಲಿ ಅಧಿಕಾರಿಗಳು ಸರಿಯಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಈ ಮಾನ್ಯ ಸಭೆಯಲ್ಲಿ ನಾನು ಈಗಾಗಲೇ ಅನೇಕ ಸಾರಿ ಇದನ್ನು ಹೇಳಿದ್ದೇನೆ. ನಮ್ಮ ಚನ್ನಪಟ್ಟಣ ತಾಲ್ಲೂಕಿನಲ್ಲಿ ಬೆಳೆದ ಭತ್ತವನ್ನು ಅಲ್ಲಿ ನಮ್ಮ ಸಹಕಾರ ಸಂಘದವರು ಒಂದು ಕಾಳನ್ನೂ ಕೊಂಡುಕೊಳ್ಳದೆ ಮೈಸೂರಿಗೆ ಹೋಗಿ ಭತ್ತವನ್ನು ಖರೀದಿ ಮಾಡಿ, ಚನ್ನಪಟ್ಟಣ ತಾಲ್ಲೂಕಿನ ರೈತರಿಗೆ ಎಷ್ಟು ಹೆಚ್ಚು ಹಣ ಸಿಕ್ಕಬೇಕಾಗಿತ್ತೋ ಅಷ್ಟು ಸಿಕ್ಕಲು ಸಹಾಯ ಮಾಡಲಿಲ್ಲ. ಇದನ್ನು ಸರಕಾರದ ಗಮನಕ್ಕೆ ತಂದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಇದುವರೆಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಈ ರೀತಿ ಮಾಡಿದರೆ ರೈತರಿಗೆ ಏನೂ ಸಹಾಯವಾಗುವುದಿಲ್ಲ. ರೈತರಿಗೆ ಯಾವಾಗಲೂ ಅವರು ಖರ್ಚು ಮಾಡುವಷ್ಟಾದರೂ ಅವರು ಬೆಳೆದ ಬೆಳೆಗೆ ಹಣ ದೊರಕಲೇಬೇಕು. ಇಲ್ಲವಿದ್ದರೆ ರೈತರು ಆಹಾರ ಧಾನ್ಯವನ್ನು ಬೆಳೆಯುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ಇದಕ್ಕೆ ಸರಿಯಾದ ಸುವ್ಯವಸ್ಥಿತವಾದ ಏರ್ಪಾಡನ್ನು ಮಾಡಬೇಕೆಂದು ಸರಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನೀರಾವರಿ ಕೆಲಸಕಾರ್ಯಗಳಲ್ಲಿ ಮೈನರ್ ನೀರಾವರಿ ಕೆಲಸಗಳನ್ನು ನಮ್ಮ ಉಪಮಂತ್ರಿಗಳಾದ ಶ್ರೀಮಾನ್ ಆಲೂರು ಹನುಮಂತಪ್ಪನವರು ಆಗಾಗ ಪತ್ರಿಕೆಗಳಲ್ಲಿ ಪ್ರಚಾರ ನಡೆಸುತ್ತಿರುವ ರೀತಿಯಲ್ಲಿ ಕೆಲಸಕಾರ್ಯಗಳನ್ನು ನಡೆಸುತ್ತಿಲ್ಲವೆಂದು ಹೇಳಬೇಕಾಗಿದೆ ಅವರು ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ, ಇಷ್ಟು ಕೋಟಿ ರೂಪಾಯಿಗಳು ಅಲ್ಲಿಂದ ಬಂತು, ಇಲ್ಲಿಂದ ಬಂತು ಎಂದು ಹೇಳುತ್ತಿದ್ದಾರೆ. ಆದರೆ ಕಾರ್ಯತಃ ನೋಡಿದರೆ ನಿಜವಾಗಿಯೂ ಸಣ್ಣ ನೀರಾವರಿ ಕೆಲಸಗಳು ಎಷ್ಟು ಶೀಘ್ರವಾಗಿ ನಡೆಯಬೇಕೋ ಅಷ್ಟು ಶೀಘ್ರತೆಯಿಂದ ನಡೆಯುತ್ತಿಲ್ಲ. ಮತ್ತೊಂದು ವಿಷಯವೇನೆಂದರೆ ಒಂದುವೇಳೆ ಹಣವನ್ನು ಸರಕಾರ ಒದಗಿಸಿದರೂ ಕೂಡ ಕೆಲಸ

(ಶ್ರೀ ಬಿ. ಜೆ. ಲಿಂಗೇಗೌಡ)

ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಅನೇಕ ಅಡ್ಡಿ ಆತಂಕಗಳಿವೆ. ಯಾವುದಾದರೂ ಒಂದು ಕೆರೆಯನ್ನು ಕಟ್ಟಬೇಕಾದರೆ ಅದಕ್ಕೆ ಬೇಕಾದ ಜಮೀನನ್ನು ಸರಕಾರ ವಶಪಡಿಸಿಕೊಳ್ಳಬೇಕಾದರೆ ಬಹಳ ಕಷ್ಟವಾಗಿದೆ. ಈಗಿನ ಪದ್ಧತಿಯ ಪ್ರಕಾರ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ವರ್ಷಾನುಗಟ್ಟಲೆ ಆಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಒಂದು ಕೆರೆ ಕಾಮಗಾರಿ ಪ್ರಾರಂಭ ಮಾಡಿ ನಾಲ್ಕೈದು ವರ್ಷವಾಯಿತು. ಸುಮಾರು ಮೂರುವರೆ ನಾಲ್ಕು ಲಕ್ಷ ರೂಪಾಯಿ ಹಣ ಖರ್ಚು ಮಾಡಿದ್ದೀರಿ. ಆದರೆ ಜಮೀನು ವಶದಲ್ಲಿ ಇಲ್ಲ ಎಂಬ ಕಾರಣಕ್ಕಾಗಿ ಕೆಲಸ ನಿಲ್ಲಿಸಿದ್ದೀರಿ. ಹೀಗೆ ಆಗಬಾರದು. ನೀರಾವರಿ ಕಾಮಗಾರಿ ತೆಗೆದುಕೊಳ್ಳಬೇಕಾದರೆ ಮೊದಲು ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಆಗಲೇ ಬೇಕು. ಇಲ್ಲದಿದ್ದರೆ ಕೆಲಸ ಕಾರ್ಯಗಳು ನಡೆಯುವುದಿಲ್ಲ. ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಸೆಕ್ಷನ್ 17 ಉಪಯೋಗಿಸಲು ಅವಕಾಶ ಮಾಡಿಕೊಡಬೇಕು. ಈ ಮಾತನ್ನು ಪದೇ ಪದೇ ನಮ್ಮ ತಾಲ್ಲೂಕಿನ ಪರಿಸ್ಥಿತಿಯ ವಿಚಾರದಲ್ಲಿ ಹೇಳುತ್ತಲೇ ಇದ್ದೇವೆ. ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಭೂಮಿ ಬಹಳ ಕಡಿಮೆ ಇದೆ. ಕಣ್ವಾ ಪ್ರೊಜೆಕ್ಟ ಕಟ್ಟಿದ್ದರೂ ಕೂಡ ಜನತೆ ಸರಿಯಾಗಿ ಅದರ ಪ್ರಯೋಜನ ಪಡೆಯಲು ಸಾಧ್ಯವಾಗಿಲ್ಲ. ಶ್ರೀ ನಿಜಲಿಂಗಪ್ಪನವರು ನಿನ್ನೆಯ ದಿನ ಒಂದು ಆಶ್ವಾಸನೆ ಕೊಟ್ಟಿದ್ದಾರೆ. ಅರ್ಕಾವತಿ ಅಣೆಕಟ್ಟಿನಿಂದ ಒಂದು ಫೀಡರ್ ಚಾನೆಲ್ ಕೊಟ್ಟರೆ ಕಣ್ವಾ ಪ್ರೊಜೆಕ್ಟಿಗೆ ನೀರು ಬರುತ್ತದೆ, ಇದರಿಂದ ನಮ್ಮ ತಾಲ್ಲೂಕಿನ ಜನತೆಗೆ ಬಹು ಹೆಚ್ಚಿನ ಪ್ರಯೋಜನವಾಗುತ್ತದೆ. ವೇಳೆಯಾದದ್ದರಿಂದ ನನ್ನ ಮಾತು ಇಲ್ಲಿಗೆ ಮುಗಿಸುತ್ತೇನೆ ಮತ್ತು ಅಧ್ಯಕ್ಷರಿಗೆ ವಂದನೆಗಳು.

Sri KADIDAL MANJAPPA (Sringeri).—On a point of personal explanation, Sir. It seems the Hon. Member was pleased to state that I instructed a particular Tahsildar to do certain things on behalf of a client in whom I was interested. It is a deliberate falsehood; I will face any enquiry. I am surprised to hear that an Hon'ble Member of this House has stooped to make such a charge against me. I refute that charge.

ಶ್ರೀ ಬಿ. ಜೆ. ಲಿಂಗೇಗೌಡ.—ನಾನು ಈ ಮೊದಲೇ ತಿಳಿಸಿದ ಹಾಗೆ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಜತ್ತಿಯವರಿಗೆ ಒಂದು ಕಾಗದ ಬರೆದಿದ್ದೇನೆ. ಮತ್ತು ಅವರಿಗೂ ಬರೆದಿದ್ದೇನೆ ಆ ವಿಚಾರದಲ್ಲಿ ಯಾರಿಂದಲೂ ಉತ್ತರ ಬಂದಿಲ್ಲ. ಆದರೂ ನನ್ನ ಮನಸ್ಸಿಗೆ ಅದು ಸರಿಯಾಗಿ ಇದೆ ಎಂದು ತೋಚುತ್ತದೆ.

Mr. SPEAKER.—Allright: that matter will be closed there.

To-day we will be finishing this general discussion and from tomorrow onwards we will be taking up the Demands. According to Circular No.9 tomorrow the House is to consider certain Demands relating to the Hon'ble Chief Minister. The Chief Minister has not fully recoverd and he does not feel that it can be taken up tomorrow. I suppose the House agrees. After all, a small change in the date is not going to affect the business. We will have it on some other day. Tax on vehicles, Jails and Jails expenditure connected with national emergency 1962, *i.e.*, matters relating to the Minister for Food will be set down for tomorrow. The time given for sending amendments has also expired. I suppose the House agrees.

MEMBERS.—Yes, Sir.

Mr. SPEAKER.—Then, I really do not know what to do if every Member did not adhere to the time that is given to him. How am I to adjust it? I will have to be absolutely curt. Now Sri S. Rudrappa will speak. The Hon'lbe Member is not here. Sri. G. Rame Gowda will speak.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಪತಿಗಳೇ, ಈ ಸಾಲಿನ ಬಜೆಟ್ಟನ್ನು ಕೂಲಂಕಷವಾಗಿ ಓದಿ ನೋಡಿದ್ದೇನೆ. ಹೊಸ ತೆರಿಗೆ ಯಾವುದೂ ಇಲ್ಲ. ಆದರೆ ಸರಕಾರಕ್ಕೆ ಅನೇಕ ರೀತಿಯಿಂದ ಬರಬೇಕಾದ ಹಣವನ್ನು ಮಾನ್ಯ ಅರ್ಥಸಚಿವರು ಈ ವರ್ಷ ವಸೂ

ಲ್ಮಾಡುತ್ತಾರೆಂಬ ಭರವಸೆ ಇದೆ. ಯೋಜನೆಯ ವಿಚಾರದಲ್ಲಿ ಒಂದೆರಡು ವಿಷಯ ಒತ್ತಿ ಹೇಳಬೇಕಾಗಿದೆ. ಬಹಳ ಕಷ್ಟದಿಂದ ಯೋಜನೆಗಳನ್ನು ತಯಾರಿಸಿ ದೇಶದ ಮುಂದೆ ಇಡಲಾಗುತ್ತಿದೆ. ಆದರೆ ಅದನ್ನು ಪೂರ್ತಿಗೊಳಿಸುವ ಜವಾಬ್ದಾರಿ ಸರಕಾರ ವಹಿಸಿಲ್ಲ. ಆದ್ದರಿಂದ ಬಹಳ ಕಳಕಳಿಯಿಂದ ಒಂದು ಮಾತು ಸರಕಾರಕ್ಕೆ ಹೇಳುತ್ತೇನೆ. ಉದಾಹರಣೆ ಹೇಳುವುದಾದರೆ ವ್ಯವಸಾಯಕ್ಕೆ ನಾನಾ ರೀತಿಯಿಂದ ಸಹಾಯ ಮಾಡುತ್ತಿದ್ದಾರೆ. ನೀರಾವರಿ ಯೋಜನೆ ಮಾಡಿದ್ದಾರೆ, ಸಹಕಾರಿ ಸಂಘಗಳ ಸ್ಥಾಪನೆ ಮಾಡುತ್ತಿದ್ದಾರೆ, ಭೂಮಿ ಕೊಡುತ್ತಿದ್ದಾರೆ, ಸಾಲ ಕೊಡುತ್ತಿದ್ದಾರೆ. ಆದರೆ ಇದು ಎಷ್ಟರ ಮಟ್ಟಿಗೆ ರೈತರಿಗೆ ಪ್ರಯೋಜನವಾಗುತ್ತದೆ ಎಂಬುದನ್ನು ಸರಕಾರ ಗಮನಿಸಿಲ್ಲ. ಯೋಜನೆಗಳನ್ನು ತಯಾರ್ಮಾಡಿ ಅವು ನಿಷ್ಪ್ರಯೋಜನವಾದರೆ ದೇಶಕ್ಕೆ ಏನೂ ಪ್ರಯೋಜನವಾಗುವುದಿಲ್ಲ. ಇದನ್ನು ಸರಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಇನ್ನೊಂದು ವಿಚಾರ. ಮುನಿಸಿಪಾಲ್ಟಿಗಳಿಗೆ ಕೊಟ್ಟಿರತಕ್ಕಂಥ ಸಾಲ ಈ ವರ್ಷ ವಸೂಲ್ಮಾಡುತ್ತಾರೆಂದು ಕಾಣಿಸುತ್ತದೆ. ಹತ್ತಾರು ವರ್ಷ ವಸೂಲ್ಮಾಡದೇ ಇರುವುದಕ್ಕೆ ಕಾರಣವೇನು ? ತೆರಿಗೆಗಳ ಬಾಕಿ, ಸೇಲ್ಸ್ ಟ್ಯಾಕ್ಸ್ ಬಾಕಿ ವಸೂಲಿ ಏಕೆ ನಿಂತಿದೆ ? ಮಾರಾಟ ತೆರಿಗೆ ಬಾಕಿ ವಸೂಲ್ಮಾಡಿದ್ದರೆ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿತ್ತು. ವ್ಯವಸಾಯದ ವಿಚಾರದಲ್ಲಿ ಲಾಭದಾಯಕವಾಗುವಂತೆ ಯೋಜನೆ ಮಾಡಬೇಕು ಮತ್ತು ದೇಶದ ಮುಂದೆ ಇಡಲು ಮನಸ್ಸು ಮಾಡಬೇಕು. ಉತ್ಪತ್ತಿ ಹೆಚ್ಚಿಸುವುದಕ್ಕೆ ವ್ಯವಸಾಯದ ಜೊತೆಗೆ ಕೈಗಾರಿಕೆ ಸೇರಿಸಿ ಹಣ ಬರುವಹಾಗೆ ಮಾಡುವುದು ಒಳ್ಳೆಯದು. ನಮ್ಮ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯುತ್ತಿದ್ದಾರೆ. ಆಲೂಗಡ್ಡೆ ಬಗ್ಗೆ ಯಾವುದಾದರೂ ಒಂದು ಕೈಗಾರಿಕೆ ಪ್ರಾರಂಭಮಾಡಲು ಯೋಚನೆ ಮಾಡಿದ್ದೀರಾ ಎಂಬ ಪ್ರಶ್ನೆ ಕೇಳುತ್ತೇನೆ. ಒಂದು ಚಿಪ್ಸ ಫ್ಯಾಕ್ಟರಿ ನಮ್ಮ ದೇಶದಲ್ಲಿ ಮಾಡಲು ಹೆಚ್ಚು ಗಮನ ಕೊಟ್ಟಿಲ್ಲ. ಹಣ ಒದಗಿಸಿ ಇದಕ್ಕೆ ಪ್ರೋತ್ಸಾಹ ಮಾಡಿಲ್ಲಾ. ಯಾವಾಗ ನಾವು ಉತ್ಪನ್ನ ಮಾಡುತ್ತೇವೆ, ಆ ಉತ್ಪನ್ನಕ್ಕೆ ತಕ್ಕಂಥ ಹಣ, ಸಹಾಯ ದೊರೆಯುವಂತೆ ಮಾಡದೆ ಹೋದರೆ ಏನು ಉಪಯೋಗವಾಗುತ್ತದೆ ? ಎಂಟು ಕೋಟಿ ರೂಪಾಯಿ ಬೆಲೆಬಾಳುವಷ್ಟು ದ್ರಾಕ್ಷಿಯನ್ನು ನಮ್ಮಲ್ಲಿ ಉತ್ಪತ್ತಿ ಮಾಡುತ್ತಾರೆ. ಕಳೆದ ಐದಾರು ವರ್ಷಗಳಿಂದಲೂ ಸರಕಾರದ ಮುಂದೆ ಅನೇಕ ಸಲಹೆಗಳನ್ನು ಇಟ್ಟಿದ್ದೇವೆ. ಇವತ್ತಿಗೂ ಯಾವುದಾದರೂ ರೈತರಿಗೆ ಲಾಭ ಕೊಡತಕ್ಕಂಥ ಕೈಗಾರಿಕೆ ಸರಕಾರ ಮಾಡಿದೆಯೇ ? ಏಕೆ ಮಾಡಲಿಲ್ಲ ; ವೈನ್ ತಯಾರು ಮಾಡುವುದರ ಬಗ್ಗೆ ಸರಕಾರದ ರೀತಿಯೇನು ? ಕಾಂಗ್ರೆಸ್ ಸಂಸ್ಥೆಯ ತತ್ವ ರೈತನ ಅಭಿವೃದ್ಧಿಗೆ ಅಡ್ಡಿ ಬರುತ್ತದೆಯೇ ? ಅದು ಏನಾದರೂ ಅಡ್ಡಿ ಬರುವುದಾದರೆ, ಅದರ ಮಾರ್ಪಾಡು ಏಕೆ ಮಾಡಬಾರದು ? 5 ಕೋಟಿ ರೂಪಾಯಿ ಬೆಲೆ ಬಾಳುವ ದ್ರಾಕ್ಷಿಯನ್ನು 1 ಕೋಟಿ ರೂಪಾಯಿಗೆ ಪಟ್ಟಣಗಳಲ್ಲಿ ಮಾರುತ್ತಾ ಇದ್ದಾರೆ. ಇದರಿಂದ ಪ್ರಯೋಜನ ಪಡೆಯದೆ, ಬೆಳೆದ ದ್ರಾಕ್ಷಿ ಕೊಳೆತು ಹೋಗುವಂಥ ಸಂದರ್ಭ ನಮ್ಮ ಮುಂದಿದೆ ಏತಕ್ಕೆ ಇದು ಸರಕಾರಕ್ಕೆ ಕಾಣಿಸಲಿಲ್ಲ ? ಆರ್ಥಿಕ ಮಂತ್ರಿಗಳ ಬಡ್ಜೆಟ್ಟಿನಲ್ಲಿ ಇಂಥ ಕೈಗಾರಿಕೆಗಳಿಗೆ ಎಷ್ಟು ಹಣ ಇಟ್ಟಿದ್ದಾರೆಂಬುದನ್ನು ಅವರು ಉತ್ತರ ಹೇಳುವಾಗ ಹೇಳಲಿ ನಾನೂ ಈ ಬಡ್ಜೆಟ್ ಪುಸ್ತಕಗಳನ್ನು 2 ರೂಪಾಯಿ ಕೊಟ್ಟು ಮನೆಗೆ ಹೊರಿಸಿಕೊಂಡು ಹೋದೆ. ಈ ಬಡ್ಜೆಟ್ಟಿನಲ್ಲಿ ಏನಿದೆ ಅನ್ನುವುದು ನನಗೆ ಅರ್ಥವಾಗಲಿಲ್ಲ. ಎಲ್ಲರೂ ನನ್ನ ಹಾಗೆಯೇ ಹೊತ್ತುಕೊಂಡು ಹೋಗುತ್ತಾರೆ. ಇದು ಮಂಕು ಬೂದಿಯ ಕಥೆ ಹಾಗಿದೆ. ಬಾಕಿಯವರಿಗೂ ಅರ್ಥವಾಗಿಲ್ಲ. ಆದರೆ ತಿಳಿಯಲಿಲ್ಲವೆಂದು ಹೇಳಿ ಕೊಳ್ಳುವುದಕ್ಕೆ ಅವರಿಗೆ ನಾಚಿಕೆ. ನನಗೆ ನಾಚಿಕೆ ಇಲ್ಲ ; ಇದು ನನಗೆ ಖಂಡಿತವಾಗಿ ಅರ್ಥವಾಗಿಲ್ಲ. ಸುಲಭ ರೀತಿಯಲ್ಲಿ ಬಡ್ಜೆಟ್ಟನ್ನು ತಯಾರು ಮಾಡಬೇಕು. ಅರ್ಥ ಸಚಿವರು ಒಪ್ಪಿದರೆ, ನಮ್ಮ ಅಪೋಜಿಷನ್ ಪಾರ್ಟಿಯವರು ಒಂದು ಮಾಡಲ್ ಬಡ್ಜೆಟ್ಟನ್ನು ತಯಾರು ಮಾಡಿ ಕೊಡುತ್ತೇವೆ. ಅದರಂತೆ ಮುಂದೆ ಸರಳ ರೀತಿಯಲ್ಲಿ, ಎಲ್ಲರಿಗೂ ಬಡ್ಜೆಟ್ ಗೊತ್ತಾಗುವಂತೆ ಮಾಡಿದರೆ, ಬಹಳ ಖುಷಿಯಾಗಿರುತ್ತೇವೆ. ಈಗ ಅಂಥ ಒಂದು ಯೋಜನೆಯನ್ನು ನಮ್ಮ ವ್ಯವಸಾಯಗಾರರಿಗೆ ಕೊಟ್ಟರೆ, ಖಂಡಿತವಾಗಿ ಅವರಿಗೆ ಬಹಳ ಉಪಕಾರ ಮಾಡಿದ ಹಾಗಾಗುತ್ತದೆ, ದೇಶದ ಅಭಿವೃದ್ಧಿಯಾದ ಹಾಗಾಗುತ್ತದೆ.

ನೀರಾವರಿಗೆ ಕೋಟಿಗಟ್ಲೆ ಖರ್ಚು ಮಾಡುತ್ತೇವೆ. ನೀರಾವರಿ ಬಾರಿ ನೀರಾವರಿ ಒಂದು ದೊಡ್ಡ ಸಮಸ್ಯೆಯಾಗಿದೆ ಸುಮ್ಮನೆ ನಮ್ಮ ಮಂತ್ರಿಗಳು 500, 1,000, 1,500, 2,000, 3,000 ದವರೆಗೆ ಒಂದೊಂದು ಬಾವಿಗೆ ಕೊಡಲಾಗುತ್ತಿದೆ ಎಂದು ಹೇಳುತ್ತಾರೆ 500 ರೂಪಾಯಿ ಕೊಟ್ಟಿದ್ದರೆ, ರೂಪಾಯಿ ರೈತನಲ್ಲಿದೆ ಬಾವಿ ಇಲ್ಲ; 1,000 ರೂಪಾಯಿ ಕೊಟ್ಟಿದ ರೆ, ಗುದ್ದಲಿ ಪೂಜೆ ಯಾಗಿರುತ್ತದೆ. 1,500 ಕೊಟ್ಟಿದ್ದರೆ 5 ಅಡಿ ಬಾವಿ ಆಗಿರುತ್ತದೆ, 2 ಸಾವಿರ ರೂಪಾಯಿಗೆ, 10 ಅಡಿ ತೆಗೆದಿದ್ದಾರೆ ಸರಕಾರದ ದುಡ್ಡೂ ನಷ್ಟ ರೈತನ ಕಷ್ಟವೂ ವ್ಯರ್ಥ ರಾಜ್ಯದ ಬೆಳೆಯೂ ನಷ್ಟ. ಪ್ರಯೋಜನ ಖಂಡಿತವಾಗಿಯೂ ಆಗಿಲ್ಲ. ಖರ್ಚು ಮಾಡಿರತಕ್ಕಂಥಾದ್ದು ಕೋಟಿಗಟ್ಲೆ. ಆದರೆ ಅದು ಪ್ರತಿಫಲ ಕೊಡಲಿಲ್ಲ. ನಾನು ದೃಷ್ಟಾಂತ ಕೊಡುತ್ತೇನೆ. ನಮ್ಮ ಮಂತ್ರಿಗಳಿಗೆ ಹೆಚ್ಚು ವಿವರ ಇದರ ಬಗ್ಗೆ ಬೇಕಾದರೆ, ಅವಕಾಶ ಕೊಡಲಿ. ನಾನು ಅವರನ್ನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಖರ್ಚಾದ ದುಡ್ಡಿಗೆ ಪ್ರತಿಫಲ ದೊರಕಬೇಕು. ಏನಾದರೂ ಮಾರ್ಗ ಹುಡುಕಿ, ಪ್ರತಿಫಲ ಬರುವ

(ಶ್ರೀ ಜಿ. ರಾಮೇ ಗೌಡ)

ಹಾಗೆ ಮಾಡದೆ ಇದ್ದರೆ, ಕೋಟಿಗಟ್ಟಲೆ ಖರ್ಚುಮಾಡುತ್ತಿರುವ ನಮ್ಮ ಯೋಜನೆಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ಮೆಂಬರ್‌ಷಿಪ್ಪಿನ ಕಾಲಾವಧಿಯಲ್ಲಿ ಅರ್ಧ ಕಳೆದು ಹೋಯಿತು. ಆದರೆ ನಮ್ಮಿಂದ ಏನ ಪ್ರತಿಫಲ ಜನಗಳಿಗೆ ದೊರೆಯಿತು ಎಂದು ನನಗೆ ಗೊತ್ತಾಗಲಿಲ್ಲ. ನಮ್ಮಿಂದ ಹಣವೇನೋ ಖರ್ಚಾಯಿತು, ಪ್ರಯೋಜನ ಮಾತ್ರ ಏನೂ ಆಗಲಿಲ್ಲ. ಹೀಗಾದರೆ ಬಹಳ ಕಷ್ಟಪಟ್ಟು ರೈತರು ದುಡಿದರೂ ಉದ್ಧಾರವಾಗುವುದು ಹೇಗೆ? ಎರಡು ವರ್ಷದಿಂದಲೂ ಪವರ್ ಸ್ಟ್ರೈಕ್ ಆಗುತ್ತಾ ಇದೆ. ಪವರಿಗೆ ದುಡ್ಡು ಕೊಟ್ಟು ಅರ್ಜಿ ಹಾಕಿದರೂ ತಂತಿ ಇಲ್ಲ, ಕಂಬ ಇಲ್ಲ ಅಂತ, ಕೊಡುತ್ತಿಲ್ಲ. ಒಂದು ಕಡೆ ಬಾವಿಗಳಾಗಿಲ್ಲ. ಇನ್ನೊಂದು ಕಡೆ ಬಾವಿಗಳಿಗೆ ಪಂಪು ಇಲ್ಲ. ಪಂಪುಗಳಿದ್ದರೆ ಎಲೆಕ್ಟ್ರಿಸಿಟಿ ಇಲ್ಲ. ಯಾವುದರಲ್ಲಿ ನಮ್ಮ ವ್ಯವಸ್ಥೆ ಸರಿಯಾಗಿದೆ, ಸ್ವಪರಿಪೂರ್ಣವಾಗಿದೆ ಅನ್ನತಕ್ಕಂಥಾದ್ದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಇವತ್ತು ನಮ್ಮ ವ್ಯವಸಾಯ ಮಂತ್ರಿಗಳು ಉತ್ತರ ಹೇಳುವಾಗ, ಈ ಅಂಶವ ಬಗ್ಗೆ ಹೇಳಬೇಕು. ಅಥವಾ ನಮ್ಮ ಅರ್ಥಿಕ ಮಂತ್ರಿಗಳು ಜವಾಬು ಕೊಡುವುದಾದರೆ, ಬರೀ ಸಮಂಜಸವಾದ ಉತ್ತರ ಕೊಟ್ಟರೆ ಸಾಲದು ; ಫಲಕಾರಿಯಾಗತಕ್ಕಂಥ ಭರವಸೆಯನ್ನು ಕೊಡಬೇಕು ; ರೈತರಿಗೆ ಉಪಯೋಗವಾಗತಕ್ಕಂಥ ಉತ್ತರವನ್ನು ಕೊಡಬೇಕು.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ಈ ಸಲ ಹೊಸ ಅರೇಂಜ್‌ಮೆಂಟ್ ಮಾಡಿದೆ ಜನರಲ್ ರಿಪ್ಲೈ ನಾನು ಹೇಳುತ್ತೇನೆ. ಪ್ರತಿಯೊಬ್ಬ ಮಿನಿಸ್ಟರು ಅವರವರ ಡಿಮ್ಯಾಂಡ್ ಬಂದಾಗ ಉತ್ತರ ಕೊಡುತ್ತಾರೆ. ಅಗ್ರಿಕಲ್‌ಚರ್ ಮಿನಿಸ್ಟರು ಅಗ್ರಿಕಲ್‌ಚರ್ ಡಿಟೇಲ್ ಅವರು ಉತ್ತರ ಕೊಡುವ ದಿವಸ ಕೊಡುತ್ತಾರೆ.

ಶ್ರೀ ಜಿ. ರಾಮೇ ಗೌಡ.—ನಾನು ಈ ಒಂದು ಸಂಧರ್ಭದಲ್ಲಿ ಇಡತಕ್ಕಂಥ ಸೂಚನೆ ಏನೆಂದರೆ, ಈ ಯೋಜನೆಗೆ ಏನು ನೀವು ಖರ್ಚು ಮಾಡುತ್ತಿದ್ದೀರಿ, ಶೇಕಡ ೮೦ ಮಂದಿ ವ್ಯವಸಾಯಗಾರರಿರುವ ಈ ದೇಶದಲ್ಲಿ ಬೇಕಾದಷ್ಟು ಹಣ ಅವರಿಗೆ ಖರ್ಚು ಮಾಡುತ್ತೇವೆಂದು ಏನು ಹೇಳುತ್ತೀರ, ಅದು ಫಲಕಾರಿಯಾಗುವ ಹಾಗೆ ಮಾಡಬೇಕು. ನಮ್ಮ ಉದ್ದೇಶವನ್ನು ಸಾಧಿಸಬೇಕು ಮತ್ತು ಆ ಯೋಜನೆಗಳು ರೈತರಿಗೆ ಪ್ರಯೋಜನದಾಯಕವಾಗಬೇಕು. ಅದನ್ನು ಸಾಧಿಸಬೇಕು.

ಮರಾಮತ್ ಇಲಾಖೆಯಲ್ಲಿ ಕೂಡ ಬಹಳ ಅನುಕೂಲಗಳನ್ನು ಮಾಡಿದ್ದೇವೆಂದು ಹೇಳಿದ್ದೀರಿ ಅದರ ಬಗ್ಗೆ ಒಂದೇ ಒಂದು ವಿಷಯವನ್ನು ಹೇಳಿ ಮುಗಿಸುತ್ತೇನೆ. ಯಾವ ಒಂದು ಸ್ಪೆಸಿಫಿಕೇಷನ್ ಮಾಡಿರುತ್ತಾರೆಯೋ ಅದಕ್ಕೆ ಸರಕಾರ ಸಂಪೂರ್ಣವಾಗಿ ಅಂಟಿಕೊಳ್ಳಬೇಕು. ಹಾಗಿಲ್ಲದಿರುವುದರಿಂದ 33 ಪರ್‌ಸೆಂಟ್ ಹಣ ದುರುಪಯೋಗವಾಗುತ್ತಿದೆ ಆದ್ದರಿಂದ ಸರಕಾರದವರು ಸ್ಪೆಸಿಫಿಕೇಶನ್ ಮೇಲೆ ಉಸ್ತುವಾರಿ ಇಡಬೇಕು ಕಂಟ್ರಾಕ್ಟರುಗಳು ಯಾವುದೇ ಕೆಟ್ಟ ರೀತಿಯಲ್ಲಿ ಹಣ ಸಂಪಾದಿಸದಂತೆ, ಜನಗಳಿಗೆ ಅನ್ಯಾಯವಾಗದಂತೆ ನೀವು ಮನಸ್ಸಿಟ್ಟು ಮಾಡಿದರೆ, ನಮ್ಮ ರೈತರು ಕೊಡುವ ಹಣದಿಂದ ಅಭಿವೃದ್ಧಿ ಕಾರ್ಯಗಳು ಚೆನ್ನಾಗಿ ಆಗಿ, ದೇಶಕ್ಕೆ ಅನುಕೂಲವಾಗುತ್ತದೆ. ಸಂಬಂಧಪಟ್ಟ ಮಂತ್ರಿಗಳು ಹೆಚ್ಚು ಮನಸ್ಸು ಮಾಡಿ, ಸ್ಪೆಸಿಫಿಕೇಶನ್ನಿಗೆ ತಕ್ಕಂತೆ ಬಹಳ ಒಳ್ಳೆಯ ರೀತಿಯಲ್ಲಿ, ಸೆಂಟ್ ಪರ್ಸೆಂಟ್ ನಡೆದು ಕೊಳ್ಳುವಂತ ಕಾನೂನಿಗೆ ಬದ್ಧವಾಗುವಂತೆ ಮಾಡಿ ಅದನ್ನು ನಡೆಸಿ ಕೊಡುತ್ತಾರೆಂದು ನಂಬಿದ್ದೇನೆ.

Sri M. N. NAGHNOOR (Sampagaon II).—Sir, while welcoming the Budget estimates for the years 1964-6 , I congratulate the Finance Minister for the manner in which he has presented the Budget this year. He has endeavoured his best to put a stop on the wasteful and unplanned expenditure. If we make a close perusal of the Budget, except for Irrigation and Power, we find a steep short-fall in the expenditure of many Departments, *e.g.*, the Department of Agriculture upon which we look to produce more and build up a sound food position. It is very regretful that they have not reached the targets. They have tried to pay adequate attention to Minor Irrigation, and further for wells, etc. But, still the target which they have aimed at is not reached. Food production is one of the most important items.

Sri ALUR HANUMANTHAPPA (Deputy Minister for Minor Irrigation).—

We have already exceeded the target.

Sri M. N. NAGHNOOR.—I am glad, minor irrigation has been doing exceedingly good work The planned programme was of the order of Rs. 8 crores and they have been able to spend already 8½ crores of rupees. It is a happy feature. I know there is a very big programme for this As I learn that there is a programme of Rs. 15 crores to be spent on Minor Irrigation and I wish and request the Finance Minister to get adequate funds both from the State resources as well as from the Centre so that we may harness the water resouces of our State. We may recollect that in the year 1960, two Investigation Circles were establsihed to harness the water potential of Mysore State. Fortunately, projects have been got up and it is time to take up those projects as soon as possible

I am very happy that we have been doing exceedingly well in the matter of Irrigation pump sets. As aganist the target of 8000 I. P. sets as it is to be provided in the Third Five Year Plan, we have already been able to put 8 00 I. P. sets, and as regards rural electrification, as against a target of 70), we have been able to electrify about 5 2 villages. This is a very happy feature, no doubt.

12 NOON.

But we have in view of the fact that Sharavathi power is coming, we have to make a definite programme for distribution of power not only for the purpo es of industry but for rural electrification, I. P. sets and I request the Government to emulate the example of Madras Government wherein, they have taken the power lines straight to the rural areas irrespective of whether the village people apply for it or not. It is their first concern to take the power lines to all the villages and then encourage all the farmers to put up I. P sets and start rural industries and so on. So, I requset the Government to be liberal in the matter of providing rural electrification for I. P. sets and matters connected with that.

Sir, there is much to be said in the matter of the Agricultural Department. Food production is the most important activity in our country and we have not been able to do enough justice. For example, in the matter of supplying bulldozers and tractors to rural areas—it is a very sad story. We have at the Government level about 100 tractors and 55 bulldozers costing about 2 crores of rupees. It is very unfortunate that the farmers who want to make use of these bulldozers, if they apply for them, they are not sure that they are going to get. These farmers have a programme in their own way and they have to take these bulldozers during a particular season and use them. But the Government is not in a position to supply them in a particular area or district to a particular farmer in a particular period. So adequate attention has got to be paid to repair and put them in good condition. We have got a mechanical section which is not at all functioning satisfactorily. There are stores, machines bulldozers—but nobody knows how to set right or repair them. Therefore adequate attention has to be paid to this. Unless these tractors are repaired and set right, we cannot give

(SRI M. N. NAGHNOOR)

them on hire. There is another handicap in importing new machinery and so new tractors cannot be imported because we cannot afford any foreign exchange. Therefore we have to live on austerity and at the same time we have to pay more attention to these tractors.

Sir, in Mysore State, as we all know, Mysore has been the pioneer in industries. Mysore State has produced many consumer goods. We have almost become self-sufficient. But in the matter of manufacture of irrigation pump sets, we have not yet paid any attention. It is necessary, in view of the fact that we require large number of irrigation pump sets in our State, it is desirable that we start our own industries manufacturing I. P. sets just as they have done in the neighbouring States like Madras who are manufacturing and are supplying not only to our State, but to other States. When Mysore could boast of big concerns like Bhadravathi and other important concerns in the past, it is quite possible, if the Government can make up its mind.

Sir, there is another important point--another great handicap that this K. R. S. Research Station is experiencing. I will only say that in the Third Five Year Plan, we have programmed to develop Honnavar, Coondapur and Malpe ports. For this purpose, it is necessary that this Research Station should turn out quick work and prepare the necessary data to enable us to start these projects, because moneys are provided in the Third Plan and they have got to be utilised. So the requirments which are necessary to conduct researches as regards these ports--they must be expedited and all facilities must be given to this Rerearch Station.

Secondly, we have been planning and thinking since a long time that we should have fishing harbours. So far no progress in this behalf is made. We have heard that the Government of India has refuted the contention of the Mysore State that there is enough mineral ore in Bababudangiri area and Chitradurga District. It appears that they are not convinced of the fact that there is enough ore here. It is therefore necessary for the Government of Mysore to tell them emphatically with adequate facts and figures that there is enough ore and that its potential has to be harnessed at the earliest.

Sir, if I may say a last word in a couple of minutes, I want to speak about Krishna waters. Many of our friends have been emphasising the need to harness the Krishna waters. Krishna waters is the live-wire for the Mysore State. Unless we harness Krishna waters and unless we get the required share that Mysore is entitled, it is going to be a very dangerous position Sir. Sir, the Memorandum presented by the Mysore State tells that we require at least 754 TMCFT of water for future Water needs to feed the arid areas of the State. As we all know, right from Belgaum, Dharwar, Bijapur, Bellary, Gulbarga and Raichur, they are all arid areas which cannot do without adequate irrigation facilities. So, the fact that we intend to take up Upper Krishna project this requires at least 226 TMCFT. It is not a question of taking up the Almatti project or Narayanapur project. We have got

to impound the maximum quantity of water to irrigate 12 lakhs of acres of land. From the balance sheet of this book presented, we see that there is no water left for future irrigation at all. The Government of India has allotted 600 TMCFT of water. The committed projects till today are 92 TMCFT, projects that are now in operation is 280 TMCFT and the committed projects and works in progress comes to 62 TMCFT and 50 TMCFT for Industrial and Drinking Facilities the total comes to about 484 TMCFT. As against this, the allotment is 600 TMCFT; We cannot be complecent in these matters. It is high time that the Government, as it has already decided in the past, desire that the matter should be referred to appropriate bodies contemplated under the Inter-State Water Disputes Act. It is necessary that we should get our full share of 1250 TMCFT. Let us not think that we have not got enough resources nor have we got the capacity to implement these projects. What is the capacity of a State like Punjab, Assam, Orissa ? They have taken huge projects like the BHAKRA and many other important projects. It is also not that our irrigation percentage is already high. Our irrigation percentage is the lowest in our country and yet if we were to forego the rights to which we are entitled it will be putting the posterity into adverse circumstances and that for all times to come. It may be said that we may lose water, to irrigate 67 lakhs of acres for all times to come. The Krishna basin mainly forms part of the Mysore State and it is desirable that we must pay our earnest attention to get our *rightful* share and help the country with maximum irrigation potential. Thank You.

ಶ್ರೀ ಸಿರಸಪ್ಪ ಇಜಾರಿ (ಹರಪನಹಳ್ಳಿ).—ಅಧ್ಯಕ್ಷರೇ, ಆರ್ಥಿಕ ಮಂತ್ರಿಗಳು ಮಾಂಡಿಸಿದ 1964-65ನೇ ಸಾಲಿನ ಮುಂಗಡ ಪತ್ರವನ್ನು ಸ್ವಾಗತ ಮಾಡುತ್ತಾ ಕೆಲವು ವಿಷಯಗಳನ್ನು ತಮ್ಮ ಮೂಲಕವಾಗಿ ತಿಳಿಯಪಡಿಸುತ್ತೇನೆ. ಕೆಲವು ತಿಂಗಳ ಹಿಂದೆ ಆರ್ಥಿಕ ಮಂತ್ರಿಗಳು ಅವರ ಒಂದು ಭಾಷಣದಲ್ಲಿ ನಾವು ಸರ್ಕಾರಿ ನೌಕರರಿಗೆ ಸಂಬಳ ಕೊಡಲು ಕಷ್ಟವಾಗಬಹುದು ಎಂದು ಹೇಳಿದರು. ತಿರುಗಿ ಇನ್ನೊಂದು ಸಲ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಬಹಳ ಶಿಥಿಲವಾಗಿದೆ. ನಾವು ಬಹಳ ಹುಷಾರಿನಿಂದ ಹೋಗಬೇಕಾಗಿದೆ ಎಂದು ಹೇಳಿದರು. ರಾಜ್ಯಪಾಲರ ಭಾಷಣದಲ್ಲಿ ಬರುವ ವರ್ಷ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಬಹಳ ಕಷ್ಟದಾಯಕವಾಗಿದೆ ಎಂದು ಹೇಳಿದ್ದಾರೆ. ಅನಂತರದಲ್ಲಿ ಮೊನ್ನೆ ಒಂದು ಸ್ಟೇಟ್‌ಮೆಂಟ್ ಕೊಡುವಾಗ ಅರ್ಥ ಮಂತ್ರಿಗಳು ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಸರಿಯಾಗಿದೆ ಎಂದು ಹೇಳಿದರು. ಈ ಮುಂಗಡ ಪತ್ರದಲ್ಲಿ 7 ಲಕ್ಷ ರೂಪಾಯಿಗಳ ಉಳಿತಾಯವನ್ನು ತೋರಿಸಿದ್ದಾರೆ; ಬಹಳ ಕಷ್ಟಪಟ್ಟು ತೊಂದರೆ ತೆಗೆದುಕೊಂಡು ತಯಾರಿಸಿದ್ದಾರೆ. ಇಂಥ ಸಂದಿಗ್ಧ ಸ್ಥಿತಿಯಲ್ಲಿ ದೇಶದ ಆಯವ್ಯಯಗಳನ್ನು ಸರಿದೂಗಿಸುವುದಕ್ಕೆ ಬಹಳ ಕಷ್ಟಪಟ್ಟಿದ್ದಾರೆ. ನಿನ್ನೆ ಮೊನ್ನೆ ಒಂದೆರಡು ವಿಚಾರಗಳನ್ನು ಅವರು ಹೇಳುವಾಗ ತಾವು ಕೊಡಮಾಡಿದ ತುಟ್ಟಿಭತ್ಯ, ಪೆನ್‌ಷನ್, ವೃದ್ಧಾಪ್ಯವೇತನ ಮುಂತಾದವುಗಳಿಗೆ ಬೇಕಾದ ಹಣವನ್ನು ಬಡ್ಜೆಟ್ಟಿನಲ್ಲಿ ನಮೂದು ಮಾಡಿಲ್ಲ, ಒಂದೂಮುಕ್ಕಾಲು ಕೋಟಿ ಹೆಚ್ಚು ಖರ್ಚು ಅದರಿಂದ ಬರಬಹುದು, ಕೆಲವು ಬಾಬುಗಳಲ್ಲಿ ಹೆಚ್ಚು ಆದಾಯ ಬರಬಹುದು, ಅದರಿಂದ ಸರಿದೂಗಿಸಬಹುದು ಎಂದು ಕ್ಲಾರಿಫಿಕೇಷನ್ ಕೊಡುವಾಗ ಹೇಳಿದ್ದಾರೆ. ಮತ್ತೊಂದು ಕಡೆ ಕೇಂದ್ರ ಸರ್ಕಾರದಿಂದ ಸಾಲವನ್ನು ಪಡೆಯಬೇಕೆಂದು ಹೇಳಿದ್ದಾರೆ. ಇನ್ನೊಂದೆಡೆಯಲ್ಲಿ ಉಳಿತಾಯದಿಂದ ನಾವು ರೂಪಿಸಿಕೊಳ್ಳಬೇಕ ಎಂದು ಹೇಳಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅರ್ಧ ಕಾಲ ಮುಗಿದಿರುವಾಗ ಸಂಸ್ಥಾನದ ಯೋಜನೆಯನ್ನು ಪೂರ್ಣಮಾಡುವುದಕ್ಕೆ ಇನ್ನು ಸುಮಾರು 50-60 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಇಂಥ ಸ್ಥಿತಿಯಲ್ಲಿ ಮೇಲಿಂದಮೇಲೆ ನಾವು ಸಾಲ ಮಾಡುವುದು ಉತ್ತಮವೇ ಅದನ್ನು ತೀರಿಸುವ ಬಗೆ ಹೇಗೆ, ಅದಕ್ಕೆ ಅಂಟಿಕೊಳ್ಳಬಹುದಾದ ಬಡ್ಡಿ ತೀರಿಸುವುದು ಹೇಗೆ, ಈ ವಿಷಯ ಸರಿಯಾಗಿ ಸ್ವಲ್ಪ ಯೋಚನೆ ಮಾಡಿ ದೇಶದ ಸಾಂಪತ್ತಿಕ ಸ್ಥಿತಿ

(ಶ್ರೀ ಸಿರಸಪ್ಪ ಐಜಾರಿ)

ಯನ್ನು ಸುಧಾರಿಸುವುದಕ್ಕೆ ಯಾವ ಕಾರ್ಯಕ್ರಮ ಕೈಕೊಳ್ಳುವರು ಎಂದು ಸಚಿವರು ಉತ್ತರದಲ್ಲಿ ತಿಳಿಸಿದರೆ, ಸದಸ್ಯರಿಗೆ ಒಂದು ತೃಪ್ತಿ ನೀಡಿದಂತಾಗುತ್ತದೆ ಎಂದು ಭಾವಿಸಿದ್ದೇನೆ.

ಎರಡನೆಯದಾಗಿ, ಇಂದಿನಸ್ಥಿತಿಯಲ್ಲಿ ಸಂಪೂರ್ಣ ಹಿಂದೂಸ್ಥಾನದಲ್ಲಿ ವ್ಯವಸಾಯದ ಉತ್ಪತ್ತಿ ಹೆಚ್ಚ ಬೇಕೆಂದು ಎಲ್ಲರೂಹೇಳುತ್ತಾರೆ. ಅದಕ್ಕೆ ಬೇಕಾದ ಕೆಲಸಕಾರ್ಯ ಯುದ್ಧಕಾಲದಲ್ಲಿ ಕೆಲಸನಡೆಯುವಂತೆ ನಡೆಯಬೇಕೆಂದು ಎಲ್ಲಾ ಕಡೆ ಹೇಳುತ್ತಿದ್ದಾರೆ, ಅದನ್ನು ಕೇಳುತ್ತಿದ್ದೇವೆ. ಆದರೆ ಇದರಲ್ಲಿರುವ ಅಂಕಿ ಅಂಶ ನೋಡಿದರೆ ಆಹಾರದ ಉತ್ಪತ್ತಿ ಜಾಸ್ತಿಯಾಗಿರುವಂತೆ ಕಂಡುಬರುತ್ತದೆ. ಆದರೆ ಸಾಕಾದಷ್ಟು ಪ್ರಗತಿ ಸಾಧಿಸಿಲ್ಲ ಎಂದು ಹೇಳಿದರೆ ಬಹುಶಃ ತಪ್ಪಲ್ಲ ಅದಕ್ಕೆ ನೀರಾವರಿ ಯೋಜನೆಯಾಗಬೇಕು, ಸರಿಯಾದ ಗೊಬ್ಬರ, ಉತ್ತಮವಾದ ಬೀಜ ಹಂಚಿಕೆಯಾಗಬೇಕು. ವ್ಯವಸಾಯಕ್ಕೆ ಬೇಕಾದ ಸಹಾಯ ನೀಡಿ ಉತ್ತೇಜನ ಕೊಡುವುದು ನಮಗೆ ಗೊತ್ತಿದೆ. ಅಂಕಿಸಂಖ್ಯೆ ಪ್ರತಿವರ್ಷದ ಕೊನೆಯಲ್ಲಿ ಸಿಕ್ಕುತ್ತದೆ. ಅದರ ಮೂಲಕ ನೋಡಿದರೆ ಶೇಕಡ ಇಷ್ಟು ಭಾಗ ಆಹಾರದ ಉತ್ಪನ್ನ ಹೆಚ್ಚಾಗಿರುವಾಗ ಉಳಿದ ವಿಚಾರದಲ್ಲೂ ಮುಂದುವರೆದಿದ್ದೇವೆ ಎಂದು ಹೇಳಬಹುದು ಎಂದು ಲೆಕ್ಕಾಚಾರದ ಮೂಲಕ ಅಥವಾ ಸ್ಟೇಟ್‌ಮೆಂಟ್ ಮೂಲಕ ತೋರಿಸಿದ್ದಾರೆ. ಅದು ಅದು ಎಷ್ಟರಮಟ್ಟಿಗೆ ನಿಜ ಎಂದು ಯೋಚನೆ ಮಾಡಬೇಕಾಗಿದೆ. ಒಂದು ನಿದರ್ಶನ ಹೇಳಬೇಕಾದರೆ ಪ್ಯಾಕೇಜ್ ಸ್ಕೀಂ ವಿಚಾರ ಕೇಳಿದಾಗ ಶೇಕಡ 18ರಷ್ಟು ಉತ್ಪತ್ತಿಯಾಗಿದೆ ಎಂದು ಹೇಳಿದರು. ಅದಕ್ಕೆ ಬೇಸಿಸ್ ಯಾವುದು, ಯಾವ ವರ್ಷದ ಲೆಕ್ಕದ ಪ್ರಕಾರ ಆ ರೀತಿಯಾಗಿದೆ ಎಂದು ಕೇಳಿದರೆ ಲೆಕ್ಕವೂ ಇಲ್ಲ, ಬೇಸಿಸ್ಸೂ ಇಲ್ಲ ಯಾವ ವರ್ಷದ ಉತ್ಪತ್ತಿ ಮೂಲಕ ತೆಗೆದುಕೊಂಡರು ಎಂದು ತಿಳಿಸುವುದಕ್ಕೆ ಸಾಧ್ಯವಿಲ್ಲ. ಬಹುಶಃ ಎಲ್ಲಾ ಬಾಬುಗಳ ಅಂಕಿಅಂಶಗಳೂ ಹೀಗೆಯೇ ಇರಬಹುದು. ಆ ಕಾರಣದಿಂದ ಸಾಧಿಸಿದ ಪ್ರಗತಿ ಎಷ್ಟು ಮಟ್ಟಿಗಿದೆ ಎಂಬುದನ್ನು ಸರ್ಕಾರ ಕೂಲಂಕಷವಾಗಿ ಯೋಚನೆಮಾಡಬೇಕೆಂದು ಆಶಿಸುತ್ತೇನೆ.

ಎರಡನೆಯದಾಗಿ ನೀರಾವರಿ ವಿಚಾರ ಅನೇಕ ಮಿತ್ರರು ಹೇಳಿದ್ದಾರೆ, ಶ್ರೀ ನಾಗನೂರ್‌ರವರೂ ಸಹ ಹೇಳಿದ್ದಾರೆ ಕೃಷ್ಣ ಮತ್ತು ಕಾವೇರಿ ಬೇಸಿನ್ ಈ ಎರಡೂ ಬಹಳ ಮುಖ್ಯವಾದುವು. ಕೃಷ್ಣ ನೀರು ನಮಗೆಷ್ಟು ದೊರೆಯಬೇಕೋ ಅಷ್ಟು ದೊರಕಿಲ್ಲ. 12 ನೂರು ಟಿ.ಎಂ.ಸಿ.ಎಫ್.ಟಿ. ಬರಬೇಕಾಗಿರುವಾಗ 600 ಮಾತ್ರ ಕೊಟ್ಟಿದ್ದಾರೆ. ಆದರೆ ಅಷ್ಟನ್ನೂ ಸಹ ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ಕಾಣುತ್ತದೆ. ಒಂದು ಉದಾಹರಣೆ ಹೇಳಬೇಕೆಂದರೆ ನಾರಾಯಣಪುರ ಯೋಜನೆಯಿಂದ ಸುಮಾರು 12 ಲಕ್ಷ ಎಕರೆಗೆ ನೀರು ದೊರೆಯಬಹುದು ಎಂದು ತಿಳಿಸಿದ್ದಾರೆ. ಅಂಕಿ ಸಂಖ್ಯೆ ತಪ್ಪಿರಬಹುದು. ಕೃಷ್ಣ ಬೇಸಿನ್ ಯೋಜನೆ 325 ಟಿ.ಎಂ.ಸಿ.ಎಫ್.ಟಿ. ಉಪಯೋಗ ಮಾಡಿಕೊಳ್ಳಬಹುದು. ಮತ್ತು ಸರ್ಕಾರಕ್ಕೆ ಸುಮಾರು 130 ಕೋಟಿ ರೂಪಾಯಿಗಳ ಖರ್ಚು ತಗಲಬಹುದು. ನಮ್ಮಲ್ಲಿ ಅಷ್ಟು ಖರ್ಚು ಮಾಡಲು ಹಣವಿಲ್ಲ. ಈಗಾಗಲೇ 50-60 ಕೋಟಿ ರೂಪಾಯಿ ಕೊರತೆ ಇದೆ. 130 ಕೋಟಿ ರೂಪಾಯಿ ಖರ್ಚುಮಾಡಲು ಹಣ ಒದಗಿಸಬೇಕಾಗಿದೆ. ಹಾಗೆ ಮಾಡಿದರ ನಾವು 325 ಟಿ.ಎಂ.ಸಿ.ಎಫ್.ಟಿ. ನೀರು ಉಪಯೋಗಮಾಡಲು ಸಾಧ್ಯವಾಗಬಹುದು. ಅಷ್ಟು ಉಪಯೋಗಿಸಲು ಸಾಧ್ಯವೇ ಎಂದು ಬೇಗ ಯೋಚನೆ ಮಾಡಬೇಕಾಗಿದೆ. ಮೊನ್ನೆ ಆಂಧ್ರ ಅಸೆಂಬ್ಲಿಯಲ್ಲಿ ಮೈಸೂರಿಗೆ ನೀರು ಕೊಡಬಾರದು, ತಮಗೆ ಕಡಮೆಯಾಗುತ್ತದೆ ಎಂದು ಗಲಾಟೆ ಮಾಡಿದರೆಂದು ಪತ್ರಿಕೆಯಲ್ಲಿ ವರದಿಯಾಗಿದೆ. ಮದ್ರಾಸು ಅಸೆಂಬ್ಲಿಯಲ್ಲೂ ಕಾವೇರಿ ನೀರಿನ ಉಪಯೋಗದ ಬಗ್ಗೆ ಒಪ್ಪಂದವೇನಾಗಿದೆ, ಅದರಂತೆ ಮೈಸೂರು ಉಪಯೋಗ ಮಾಡಿಕೊಂಡಿದೆಯೇ, 1974ನೆ ಇಸವಿಯೊಳಗೆ ಮೈಸೂರು ಉಪಯೋಗ ಮಾಡದಿದ್ದರೆ ಮದ್ರಾಸು ಯಾವ ಕ್ರಮ ಕೈಗೊಳ್ಳಬೇಕು ಎಂದು ಕೇಳಿದ್ದಾರೆ. ಅದಕ್ಕೆ ಮದ್ರಾಸಿನ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮೈಸೂರಿಗೆ ಪತ್ರ ಬರೆದೆವು, ಉತ್ತರಬಂದಿಲ್ಲ ಎಂದು ಹೇಳಿದ್ದಾರೆ. ಆ ಅವಧಿಯೊಳಗಾಗಿ ಕಾವೇರಿ ನೀರನ್ನು ಉಪಯೋಗ ಮಾಡಿಕೊಳ್ಳುವ ಕಾರ್ಯಕ್ರಮವೇನಾದರೂ ನಮ್ಮ ಸರ್ಕಾರದಲ್ಲಿದೆಯೇ ಎಂದು ಕೇಳಬೇಕಾಗಿದೆ. ಬಹುಶಃ ಕಾವೇರಿ ಮತ್ತು ಕೃಷ್ಣ ಬೇಸಿನ್‌ಗಳಲ್ಲಿ ಖರ್ಚು ಎಕರೆಗೆ ಒಂದು ಸಾವಿರ ರೂಪಾಯಿಗಳಾಗಬಹುದು. ಆಲಮಟ್ಟಿ ಮತ್ತು ನಾರಾಯಣಪುರ ಈ ಎರಡು ಪ್ರಾಜೆಕ್ಟುಗಳನ್ನೂ ಕೈಕೊಂಡು 325 ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡಬೇಕು, ಅದರಿಂದ 12 ಲಕ್ಷ ಎಕರೆ ನೀರಾವರಿಯಾಗಬಹುದು, ಅದು ಕ್ಷಾಮಪೀಡಿತ ಪ್ರದೇಶ. ಆ ಕಾರಣದಿಂದ ನಿಧಾನಮಾಡದೆ ಬೇರೆ ಪ್ರದೇಶಗಳವರು ಆ ನೀರನ್ನು ಉಪಯೋಗಿಸಿ ನೀರಿಲ್ಲದಂತಾಗುವುದಕ್ಕೆ ಮುಂಚೆ ಸಂಸ್ಥಾನದ ಯೋಜನೆಗಳನ್ನು ರೂಪಿಸಿ ಕಾರ್ಯ ಮಾಡುವುದು ಉತ್ತಮ. ಆ ವಿಷಯದಲ್ಲಿ ಯಾವ ಕಾರ್ಯ ಕೈಗೊಳ್ಳುವುದಕ್ಕೆ ಬೇಕಾಗಬಹುದಾದ ಹಣಕಾಸನ್ನು ಒದಗಿಸಲು ಏನು ಮಾಡುತ್ತಾರೆ ಎಂಬುದನ್ನು ಮಂತ್ರಿಗಳು ಉತ್ತರ ಹೇಳುವಾಗ ತಿಳಿಸಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ವಿಚಾರವಾಗಿ ಹೇಳಬೇಕಾದರೆ ಶರಾವತಿ ಕಾರ್ಯಕ್ರಮ ಸ್ವಲ್ಪಮಟ್ಟಿಗೆ ರೂಪಿತವಾಗಿದೆ. ಜೂನ್ ತಿಂಗಳಲ್ಲಿ ಸ್ವಲ್ಪಮಟ್ಟಿಗೆ ವಿದ್ಯುಚ್ಛಕ್ತಿ ದೊರೆಯಬಹುದೆಂದು ಹೇಳುತ್ತಾರೆ. ಕಾಳಿನದಿ ಯೋಜನೆ, ಮೇಕೆದಾಟು ಯೋಜನೆ ಇನ್ನೂ ತೆಗೆದುಕೊಂಡಿಲ್ಲ. ಶರಾವತಿ ಯೋಜನೆ ಮುಗಿದರೆ 8–9 ಲಕ್ಷ, ಕಿಲೋವಾಟು ಪವರ್ ಉತ್ಪತ್ತಿಯಾಗುತ್ತದೆ, ಕಾಳಿನದಿ ಯೋಜನೆಯಿಂದ 10–11 ಲಕ್ಷ ಮೇಕೆದಾಟು ಯೋಜನೆ ಕೈಕೊಂಡರೆ 14 ಲಕ್ಷ ಕಿಲೋವಾಟ್ ಸಿಕ್ಕುತ್ತದೆ. ಈ ವಿಷಯದಲ್ಲಿ ಕಾರ್ಯಕ್ರಮ ತೀವ್ರವಾಗಿ ಮಾಡಿ ಕೆಲಸಕ್ಕೆ ಕೈಹಚ್ಚಬೇಕಾಗಿದೆ ಎಂದು ಹೇಳಬಯಸುತ್ತೇನೆ. ಒಂದು ಹೆದರಿಕೆ ಇದೆ, ಶರಾವತಿ ಮತ್ತು ಅನೇಕ ನದಿಗಳ ನೀರನ್ನು ನಾವು ಉಪಯೋಗಿಸಿ ವಿದ್ಯುಚ್ಛಕ್ತಿ ಉಪಯೋಗ ಮಾಡುವಾಗ, ನದೀ ನೀರನ್ನು ಉಪಯೋಗಿಸಿ ಕಾರ್ಯಕ್ರಮ ಮುಂದುವರೆಸುವಾಗ, ಕೈಗಾರಿಕೆಗಳ ಅಭಿವೃದ್ಧಿ ಮಾಡುವಾಗ ಅಕ್ಕಪಕ್ಕದ ಪ್ರಾಂತಗಳೇನು ಮಾಡುತ್ತವೆ ಎಂಬುದರ ಕಡೆ ಗಮನ ಕೊಡಬೇಕು. ನಮ್ಮ ದೇಶದ ಬೇಡಿಕೆಗೆ ಒಂದು ಮಿತಿ ಇದೆ. ಅದಕ್ಕೆ ತಕ್ಕಂತೆ ಹಿಂದುಳಿದ ಪ್ರಾಂತಗಳೆಲ್ಲವೂ ತಮ್ಮ ನೀರಾವರಿ ಯೋಜನೆಗಳು, ವಿದ್ಯುಚ್ಛಕ್ತಿ ಯೋಜನೆಗಳು, ಕೈಗಾರಿಕಾ ಉದ್ಯಮದ ಯೋಜನೆಗಳನ್ನು ಸಾಧಿಸಿಕೊಂಡಲ್ಲಿ ಒಂದೆರಡು ವರ್ಷ ಕಾಲದ ನಂತರ ನಮಗೆ ಯಾವ ರಿಸೋರ್ಸ್‌ಸ್ ಸಹ ಉಳಿಯುವುದಿಲ್ಲ, ಹಣಕಾಸು ಉಳಿಯುವುದಿಲ್ಲ ಯೋಜನೆಯೂ ನಮ್ಮ ಕೈಯಲ್ಲಿ ಉಳಿಯುವುದಿಲ್ಲ. ಆ ಕಾರಣದಿಂದ ಅಕ್ಕಪಕ್ಕದಲ್ಲಿರುವ ಪ್ರದೇಶಗಳು ಮುಂದೆ ಹೋಗುವುದರೊಳಗಾಗಿ ನಾವು ನಮ್ಮ ದೇಶದ ಪ್ರಗತಿಗೆ ಬೇಕಾದಷ್ಟು ಕೆಲಸಕಾರ್ಯಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಅದನ್ನು ಕಾರ್ಯರೂಪದಲ್ಲಿ ತರಬೇಕೆಂದು ಸರ್ಕಾರದಲ್ಲಿ ಒತ್ತಾಯಪೂರ್ವಕವಾಗಿ ಬಿನ್ನಹ ಮಾಡಿಕೊಳ್ಳುತ್ತಿದ್ದೇನೆ.

ರಾಜ್ಯಪಾಲರ ಭಾಷಣದಲ್ಲಿ ಪೂರ್ವ ದಿಕ್ಕಿನ ಜಿಲ್ಲೆಗಳಾದ ತುಮಕೂರು, ಚಿತ್ರದುರ್ಗ ಮುಂತಾದ ಜಿಲ್ಲೆಗಳಲ್ಲಿ ಕ್ಷಾಮವಿದೆ, ಅಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿದೆ ಎಂದು ನಮೂದು ಮಾಡಿದ್ದಾರೆ. ಆದರೆ ಬಳ್ಳಾರಿ ಜಿಲ್ಲೆಯ ವಿಷಯ ಅವರಿಗೆ ಏಕೆ ಮರೆತು ಹೋಯಿತೋ ನನಗೆ ಅರ್ಥವಾಗುತ್ತಾ ಇಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಮಳೆ ಇಲ್ಲದೆ ಬಳ್ಳಾರಿ, ಹೊಸಪೇಟೆ, ಸಿರಗುಪ್ಪ ತಾಲ್ಲೂಕುಗಳಲ್ಲಿ ಕ್ಷಾಮ ತಲೆದೋರಿದೆ. ಈಗ ಎರಡು ವರ್ಷಗಳಿಂದ ಪಶ್ಚಿಮ ಜಿಲ್ಲೆಗಳಲ್ಲಿ ಸಹ ಬೆಳೆ ಬೆಳೆಯದೆ ಜನರು ಬಹಳ ಕಂಗಾಲಾಗಿದ್ದಾರೆ. ಈ ಜಿಲ್ಲೆಯಲ್ಲಿರುವವರಿಗೆ ತೀವ್ರವಾಗಿ ಪರಿಹಾರ ಕೊಡಬೇಕಾದ್ದು ಅಗತ್ಯ. ಜನರೆಲ್ಲ ಕಂಗಾಲಾಗಿ ಸಾವಿರಾರು ಜನ ಕೂಲಿನಾಲಿಗಾಗಿ ತಮ್ಮ ಊರುಗಳನ್ನು ಬಿಟ್ಟು ಹೋಗಿದ್ದಾರೆ. ಈ ದಿಸೆಯಲ್ಲಿ ಏನಾದರೂ ಪರಿಹಾರವನ್ನು ಸರ್ಕಾರದವರು ಬೇಗ ಕೊಡಬೇಕೆಂದು ಅನೇಕ ಯೋಜನೆಗಳನ್ನು ಸರ್ಕಾರದವರ ಮುಂದೆ ಇಟ್ಟಿದ್ದೇವೆ. ಪಿಕಪ್ಪುಗಳನ್ನು ಕಟ್ಟುವುದು, ಕೆರೆ ಕೆಲಸ, ಹೊಸ ಕೆರೆಗಳನ್ನು ಕಟ್ಟುವುದು ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದು, ಈ ಕೆಲಸಗಳನ್ನು ತೀವ್ರವಾಗಿ ಮಾಡಿದರೆ ಜನರಿಗೆ ಕೂಲಿನಾಲಿ ಸಿಕ್ಕಲು ಅನುಕೂಲವಾಗುತ್ತದೆ. ಆದ್ದರಿಂದ ಈ ಯೋಜನೆಗಳನ್ನು ತೆಗೆದುಕೊಳ್ಳಲು ಮಂಜೂರಾತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಸ್ವಾಮಿ.

† **Sri S. RAJAGOPAL** (K.G.F.).—Sir, at the outset I would like to thank this Government for the efforts they made in securing two industries for the K.G.F., namely, the Earth Moving industry and the Mint factory. After the Centre had taken over the Mines, they have introduced several measures of economy, resulting in greater unemplyment and retrenchment These two new industries will help those who are to be retrenched and also those who are without employment. The State Government, particularly, the Chief Minister and the Finance and Revenue Ministers, played a big role in getting those industries and I would congratulate them on behalf of the people of K.G.F.

Sir, the K.G.F. has in the past been treated like Africa. When the Mines were under the management of John Taylors, we were discriminated against on grounds of colour. After nationalisation of the Mines, it became a Congo affair. I am sorry to state that since May 1962, the law and order position has deteriorated. I have raised this matter in several letters written to Government and also on the floor of the Assembly. I want a straight answer from Government whether they have any political

(SRI S RAJAGOPAL)

motive in deliberately creating trouble in the area. I know it that many persons holding important positions in the Kolar Congress are fomenting disorder. Disturbances are being created in the guise of bringing in INTUC OR AITUC or Communists or non-Communists organisations. If Government wants to wipe out the Communists from the K.G.F. there are better and open methods. They should try to win over the confidence of the people. Unfortunately for the Congress, in the past three general elections, Communists are being elected and this is naturally an eye-sore for the Congress. Because they cannot win in an open election, they are trying to impose a labour union with the protection and some local Congress bosses, supported by the Kolar D.C.C., are creating mischief. I am told that even some foreign embassies are giving a hand in the affair. I want an investigation into the matter.

MR. SPEAKER.—Let not the Hon'ble Member bring in foreign embassies into the Debate.

SRI S. RAJAGOPAL.—It is a fact.

MR. SPEAKER.—That may be. But that does not mean he can refer to all kinds of things.

SRI S. RAJAGOPAL.—I am not giving out names. The members of the ruling party are involved. They are working in coalition with foreign embassies. I am told a Congressman is getting Rs. 2,000 per month from a foreign embassy and they have already spent Rs. 5;000 in K.G.F. with a view to wipe out the Communists from the K.G.F. I want the Government to tell me plainly if they have a definite political policy to wipe out the Communists in colloboration with foreign embassies.

Sir, recently the Indian Sahitya Academy announced some awards to the authors of best books and I find not a single book written by a Mysorean being awarded the prize. Is it that we are lacking in talent or is it there is some partiality in the academy?

MR. SPEAKER.—Let the Hon'ble Member go to the Centre to criticise. He can criticise only items of expenditure for which the State Government is responsible.

SRI S. RAJBGOPAL.—My question is whether the State is bereft of authors who can compete and win prizes. Cannot we improve standards and create good literature? Sir, though I do not know Kannada, I want the Kannada language to flourish. I will try to speak in Kannada next time. I urge upon the Government to take some care to see that our literature also finds a place in the all-India level.

Coming to prohibition, several of my friends have already expressed their opinion about this. We all know how far it is a success. The Maharashtra Government has taken some stand and the Andhra Government is also adopting some policy to relax the policy. Are we not in a position to adopt similar policy in our State also? Sir, this morning we have a question about jaggery. The scarcity in jaggery is mainly due to its being used for illicit distillation. That is how it disappears from the market and its prices goes high. Similarly, many of the foodstuffs are used for this and the prices go high. By prohibition policy Government

is losing the revenue, the prices of foodstuff go high and the health of the poor people is spoiled by drinking the illicitly distilled stuff. Sir, in K.G.F. mines, people go 10,000 feet deep in the earth to work. Doctors say that toddy is very good for the health of such people. So, our Government may consider this very seriously and allow either toddy or neera for those people who work in these deep mines.

Coming to Fair Price depots, they say that all the food materials could be got there at fair price. We only find the board showing the price of food articles but nobody will get anything there. If a man goes to a neighbouring private shop, he can get everything but at a very high price. This is the position of the fair price depots as well as the co-operatives. Government should either set things right in these fair price depots or close them.

Lastly, Sir, I see here that members belonging to the ruling party criticising about the administration of the Government in respect of several projects like the Sharavathy and the others. Just now Sri Linge Gowda was telling about the attitude of a previous Revenue Minister. Here is a Bulletin relating to A.I.C.C. They have given a correct picture in this Economic Review to show to our congress people and the ruling party what the prevailing conditions are in India, particularly in the Congress Organisation.

MR. SPEAKER.—If the member wants he can give the gist of it. I would not allow him to read any book here.

SRI S. RAJAGOPAL.—Here it says that after independence......

MR. SPEAKER.—I have said that I would not allow him to read. He may give the gist, if the wants, Otherwise, I will take he has concluded.

(*The Member did not continue the speech.*)

SRI B. D. JATTI.—Sir, we have to go again to the Upper House and there we have got some work. If we meet at 3-30 p.m. it would be better instead of at 3 p.m.

MR. SPEAKER.—The House will now rise and meet at 3–30 p.m.

The House adjourned at Forty Minutes past Twelve of the Clock and reassembled at Thirty Minutes past Three of the Clock.

[MR. SPEAKER in the Chair.]

MR. SPEAKER.—I am very happy to note that there are a large number of members who desire to participate in the debate on the Budget. What does the Government say ? The Hon'ble Finance Minister......

ಶ್ರೀ ಎಚ್. ಹುಚ್ಚಮಾಸ್ತಿ ಗೌಡ (ಚಂದ್ರಶೇಖರಪುರ).—ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಅನೇಕಜನ ಮಾತನಾಡುವ ಉದ್ದೇಶವಿರುವ ಕಾರಣ, ನಾಳೆ ಸರ್ಕಾರದವರು ಉತ್ತರ ಕೊಡಬಹುದು. ನಾನು ಹೇಳುವುದನ್ನು ಮಂತ್ರಿಗಳ ಪರವಾಗಿ ಬಂದ ಹಾಗೆ ತಾವು ತಿಳಿಯಬೇಕು.

Mr. SPEAKER.—The Hon'ble Deputy Minister for Finance is here.

Sri H. R. ABDUL GAFFAR (Deputy Minister for Finance).—If the House desires to have discussion today it can go on and the reply will be given tomorrow.

Mr. SPEAKER.—So, I will extend the time for the discussion of the Budget till this evening. The Hon'ble Minister will reply tomorrow from 9-30 a.m. to 11-30 a.m. and we will take up Demands from 12-30 p.m. I suggest there will be no question hour tomorrow so that we may finish the consideration of the first Demand.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—Question hour ಇರಬೇಕು, ಸ್ವಾಮಿ.

Mr. SPEAKER.—I have no objection. Let us have it. There will be Question Hour tomorrow.

Sri B. D. JATTI.—Sir, I did not know whether the reply should be over today or tomorrow. I was late just by one or two minutes. I was waiting outside.

ಶ್ರೀಮತಿ ಅನ್ನಪೂರ್ಣಾಬಾಯಿ ರಾಗಟೆ (ಕಲ್ಯಾಣಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ 64-65ನೆ ಸಾಲಿನ ಆಯವ್ಯಯದ ಅಂದಾಜುಪಟ್ಟಿಗಳನ್ನು ಸ್ವಾಗತಿಸುತ್ತಾ ಒಂದೆರಡು ಸಲಹೆಗಳನ್ನು ಹೇಳಬಯಸುತ್ತೇನೆ. ಕಳೆದ ಸಾಲಿನ ಬಡ್ಜೆಟ್ಟನ್ನು ನೋಡಿದರೆ ಈ ವರ್ಷದ ಬಡ್ಜೆಟ್ಟಿನಲ್ಲಿ ಅದಕ್ಕಿಂತಲೂ ಅನೇಕ ಹೊಸ ವಿಷಯಗಳನ್ನು ಮತ್ತು ಹೊಸ ತೆರಿಗೆ ಇಲ್ಲದ ವಿಷಯವನ್ನು ನೋಡಿದರೆ ಈ ಸರ್ಕಾರದವರನ್ನು ಬಹಳ ಸಂತೋಷದಿಂದ ನನ್ನ ಪರವಾಗಿ ಮತ್ತು ನಮ್ಮ ಜನತೆಯ ಪರವಾಗಿ ಅಭಿನಂದಿಸಬೇಕಾಗಿದೆ. ಕಾರಣ ಈ ವರ್ಷ ಮಳೆ ಜಾಸ್ತಿಯಾಗಿ ಬೆಳೆ ಹೋಗಿ ನಮ್ಮ ತಾಲ್ಲೂಕಿನಲ್ಲಿ ಬರಗಾಲದ ಪರಿಸ್ಥಿತಿ ಇದ್ದುದರಿಂದ ಜನತೆಯ ಬಾಳು ಜನತೆಯ ಜೀವನ ನಡೆಸುವುದು ಬಹಳ ಕಷ್ಟಕರವಾಗಿದೆ. ಆದ್ದರಿಂದ ನಾನು ಎಷ್ಟೋ ಸಲ ಹೇಳಿದ್ದೇನೆ. ಈಗ ಫ್ಯಾಮಿನ್ ವರ್ಕ್ಸ್ ಕೂಡ ಕೆಲವು ಕಡೆಗಳಲ್ಲಿ ಪ್ರಾರಂಭವಾಗಿವೆ. ಆದರೆ ಮಾರ್ಚ್ ತಿಂಗಳ ಕೊನೆಯವರೆಗೂ ನಮ್ಮ ಕೆಲಸಗಳು ಪೂರ್ತಿಯಾಗುವುದಿಲ್ಲ ಮತ್ತು ಜನತೆಯ ಕಷ್ಟ ದೂರವಾಗುವುದಿಲ್ಲ. ಇನ್ನು ಮುಂದೆ ಈ ರೀತಿ ಪೂರ್ತಿ ಕಾಮಗಾರಿ ಕೆಲಸಗಳು ನಡೆಯುವ ಹಾಗೆ ಕೊಟ್ಟ ಹಣ ಲ್ಯಾಪ್ಸ್ ಆಗದಂತೆ ನೋಡಿಕೊಂಡು ಹೆಚ್ಚಿನ ಹಣ ಸಹಾಯವನ್ನು ಸರ್ಕಾರದವರು ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈ ಯೋಜನೆಗಳಲ್ಲಿ ಎಷ್ಟರಮಟ್ಟಿಗೆ ಜನತೆಗೆ ಉಪಯೋಗವಾಗುತ್ತದೆ, ಎಷ್ಟರಮಟ್ಟಿಗೆ ಜನಗಳು ಆ ಮುಖಾಂತರ ಹಣವನ್ನು ಪಡೆಯುತ್ತಿದ್ದಾರೆ ಎನ್ನುವುದನ್ನು ನೋಡಿದರೆ ನನಗೆ ಸ್ವಲ್ಪ ಸಂಶಯ ಬರುತ್ತಿದೆ. ಏತಕ್ಕೆಂದರೆ ಉದ್ಯೋಗವನ್ನು ಕಳೆದುಕೊಂಡ ಅಕ್ಕಸಾಲಿಗರಿಗೆ ಪರಿಹಾರವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ಎಷ್ಟೋ ಜನ ಸ್ಕೂಲು ಮತ್ತು ಕಾಲೇಜುಗಳಲ್ಲಿನ ಮಕ್ಕಳಿಗೆ ಶೈಕ್ಷಣಿಕ ರಿಯಾಯಿತಿಯನ್ನು ಕೊಡಲಾಗಿದೆ, ಕೈಗಾರಿಕೆ ಸಂಸ್ಥೆಗಳಲ್ಲಿ ಮತ್ತು ಸರ್ಕಾರಿ ಕಛೇರಿಗಳಲ್ಲಿ ಉದ್ಯೋಗವನ್ನು ಕಳೆದುಕೊಂಡ ಅಕ್ಕಸಾಲಿಗರಿಗೆ ಉದ್ಯೋಗಕ್ಕಾಗಿ ಬರುವ ಅರ್ಜಿಗಳಿಗೆ ಅಧಿಕ ಪ್ರಾಶಸ್ತ್ಯ ಕೊಡಲಾಗುತ್ತಿದೆ, ಈವರೆಗೆ ತಮ್ಮ ಉದ್ಯೋಗವನ್ನು ಕಳೆದುಕೊಂಡ 505 ಮಂದಿ ಅಕ ಸಾಲಿಗರನ್ನು ಕೈಗಾರಿಕೆ ಮತ್ತು ಇತರ ಉದ್ಯಮ ಸಂಸ್ಥೆಗಳಲ್ಲಿ ನೇಮಿಸಿಕೊಳ್ಳಲಾಗಿದೆ ಎಂದು ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದು ಬಹಳ ಸಂತೋಷದ ವಿಷಯ. ಆದರೆ ನಮ್ಮ ಹೈದರಾಬಾದ್ ಕರ್ಣಾಟಕದ ಏರಿಯಾದಿಂದ ಎಷ್ಟು ಜನರನ್ನು ಅದರಲ್ಲಿ ನೇಮಿಸಿಕೊಂಡಿದ್ದಾರೆ, ಎಷ್ಟು ಜನಗಳಿಗೆ ಸಹಾಯ ಸಿಕ್ಕಿದೆ ಎಂದು ನಾನು ಕೇಳುತ್ತೇನೆ ಮತ್ತು ಹೈಸ್ಕೂಲುಗಳಲ್ಲಿ 1,103 ಜನ ವಿದ್ಯಾರ್ಥಿಗಳಿಗೂ ಮತ್ತು ಕಾಲೇಜುಗಳಲ್ಲಿನ 183 ಜನ ವಿದ್ಯಾರ್ಥಿಗಳಿಗೂ ವಿವಿಧ ಶೈಕ್ಷಣಿಕ ರಿಯಾಯಿತಿಗಳನ್ನು ಮಂಜೂರ್ ಮಾಡಿದೆ ಅಂತ ಭಾಷಣದಲ್ಲಿ ಹೇಳಿದ್ದಾರೆ. ಆದು ನಮ್ಮ ಕಡೆಯಿಂದ ಈ ತರದ ಸಹಾಯವನ್ನು ಎಷ್ಟು ಜನರು ಪಡೆದಿದ್ದಾರೆಂಬುದನ್ನು ಸರ್ಕಾರದವರು ತಿಳಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಏತಕ್ಕೆಂದರೆ ನಮ್ಮ ಬೀದರ್ ಜಿಲ್ಲೆ ಸ್ವಲ್ಪ ಹಿಂದುಳಿದ ಪ್ರದೇಶ. ಅಲ್ಲಿಗೆ ಯಾವುದೇ ಒಂದು ಯೋಜನೆಯಾಗಲೀ, ಅಥವಾ ಯಾವುದೇ ಒಂದು ಸಹಾಯವಾಗಲೀ ಮುಟ್ಟಲಿಕ್ಕೆ ಬಹಳ ದಿವಸಗಳಾಗುತ್ತವೆ. ಆದ್ದರಿಂದ ಆ ಭಾಗದವರು ಈ ಸಹಾಯವನ್ನು ಪಡೆದಿದ್ದಾರೆಯೋ ಇಲ್ಲವೋ ಎಂಬ ಸಂಶಯ ಉಂಟಾಗಿದೆ. ಅದಕ್ಕೋಸ್ಕರ ನಾನು ಈ ವಿಷಯವನ್ನು ಕೇಳುತ್ತಿದ್ದೇನೆ. ಅಕ್ಕಸಾಲಿಗರ ವಿಷಯದಲ್ಲಿ ಇನ್ನೊಂದು ವಿಷಯವನ್ನು ಹೇಳಿದ್ದಾರೆ ಅದೇನೆಂದರೆ ಅವರಿಗೆ ಸಾಗುವಳಿಗಾಗಿ 950 ಎಕರೆ ಜಮೀನನ್ನು ಹಂಚಲಾಗಿದೆ ಎಂದು ಹೇಳಿದ್ದಾರೆ

ಆ ಸಹಾಯವನ್ನು ಎಷ್ಟು ಜನರು ಪಡೆದಿದ್ದಾರೆ ಎನ್ನುವುದನ್ನು ಕೂಡ ನಾನು ಕೇಳಬೇಕಾಗಿದೆ. ಈ ಬಡ್ಜೆಟ್ಟನ್ನು ನೋಡಿದರೆ ನನಗಾದರೂ ಅನಿಸುತ್ತದೆ, ಮಂತ್ರಕ್ಕಿಂತ ಉಗುಳು ಜಾಸ್ತಿ, ಊಟಕ್ಕಿಂತ ಉಪಚಾರ ಜಾಸ್ತಿ ಎನ್ನುವ ಹಾಗೆ ಇದರಲ್ಲಿ ನನಗೆ ಸಂಶಯ ಬರುತ್ತದೆ. ಆದ್ದರಿಂದ ನಮ್ಮ ಭಾಗದ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದವರು ಸ್ವಲ್ಪ ಹೆಚ್ಚು ಗಮನ ಕೊಟ್ಟು ಅಲ್ಲಿಗೆ ಸ್ವಲ್ಪ ಹೆಚ್ಚು ಹಣವನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮೆಡಿಕಲ್ ಅಂಡ್ ಪಬ್ಲಿಕ್ ಹೆಲ್ತ್ ವಿಷಯದಲ್ಲಿ ಮಾತನಾಡುತ್ತಾ ಆಸ್ಪತ್ರೆಗಳ ವಿಷಯದಲ್ಲಿ ಒಂದೆರಡು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸರಿಯಾಗಿ ಔಷಧಿಯನ್ನು ಕೊಡುವುದಿಲ್ಲ ಅಲ್ಲಿನ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಅದೇನು ನೀರು ಕೊಡುತ್ತಾರೋ ಅಥವಾ ಔಷಧಿಯನ್ನೇ ಕೊಡುತ್ತಾರೋ ಎನ್ನುವ ಹಾಗೆ ಕಾಣುತ್ತದೆ. ಆಸ್ಪತ್ರೆಗಳಿಗೆ ಸರ್ಕಾರದವರು ಸರಿಯಾಗಿ ಔಷಧಿಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಆಸ್ಪತ್ರೆಗಳಿಗೆ ಸರ್ಕಾರದವರು ಒದಗಿಸಿರತಕ್ಕ ಹಣ ಬಹಳ ಕಡಿಮೆ ಇದೆ. ಆದ್ದರಿಂದ ಬಸವ ಕಲ್ಯಾಣದ ಆಸ್ಪತ್ರೆಗೆ ಇನ್ನು ಸ್ವಲ್ಪ ಹೆಚ್ಚು ಹಣವನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ನಮ್ಮ ಭಾಗದಲ್ಲಿರುವ ಆಸ್ಪತ್ರೆಗಳಲ್ಲಿ ಬೆಡ್‌ಗಳ ಸಂಖ್ಯೆ ಬಹಳ ಕಡಿಮೆ ಇದೆ, ಬೆಡ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಆ ಆಸ್ಪತ್ರೆಯಲ್ಲಿರತಕ್ಕಂಥ ಬೆಡ್‌ಗಳನ್ನು ನೋಡಿದರೆ ನಿಜವಾಗಿಯೂ ರೋಗಿಗಳಿಗೆ ಕಾಲಿ ರೋಗ ಇರುವುದಕ್ಕಿಂತ ಮತ್ತೆ ಜಾಸ್ತಿಯಾಗುತ್ತದೆ ಎನ್ನುವ ಪರಿಸ್ಥಿತಿ ಇದೆ. ಆ ಬೆಡ್ ಮೇಲೆ ಹಾಕತಕ್ಕಂಥ ಬೆಡ್‌ಷೀಟ್‌ಗಳೂ ಕೂಡ ಚೆನ್ನಾಗಿಲ್ಲ. ಇದನ್ನೆಲ್ಲಾ ಸರ್ಕಾರದವರು ಪರಿಶೀಲನೆ ಮಾಡಿ ಆ ಆಸ್ಪತ್ರೆಗಳಿಗೆ ಬೇಕಾದ ಬೆಡ್‌ಗಳು ಮತ್ತು ಸರಿಯಾದ ಔಷಧಿ ಇತ್ಯಾದಿಗಳನ್ನು ಒದಗಿಸುವ ಸಲುವಾಗಿ ಸರ್ಕಾರದವರು ಹೆಚ್ಚು ಹಣವನ್ನು ಒದಗಿಸಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಇರಿಗೇಷನ್ ವಿಷಯದಲ್ಲಿ ಸಣ್ಣ ನೀರಾವರಿ ವಿಷಯದಲ್ಲಿ ಕೆಲವು ವಿಷಯಗಳನ್ನು ನಾನು ಹೇಳಬೇಕಾಗಿದೆ. ಈ ಸಣ್ಣ ನೀರಾವರಿ ಯೋಜನೆಗಳಿಂದ ಅನೇಕ ಜನರಿಗೆ ನಿರುದ್ಯೋಗ ದೂರವಾಗಿದೆ ಅದರಿಂದ ರೈತರಿಗೆ ಸಹಾಯವಾಗಿದೆ. ಆಹಾರದ ಪರಿಸ್ಥಿತಿಯೂ ಕೂಡ ಸ್ವಲ್ಪ ಸುಧಾರಣೆಯಾಗುತ್ತದೆ ಆದರೆ ಈ ಸಣ್ಣ ನೀರಾವರಿ ಯೋಜನೆಗಳು ತಮ್ಮ ತಾಲ್ಲೂಕಿನಲ್ಲಿ ಆಗಿರುವ ವಿಚಾರವಾಗಿ ನಾನು ಎಷ್ಟೋ ಸಲ ಹೇಳಿದ್ದೇನೆ. 14-15 ನೀರಾವರಿ ಮತ್ತು ಅಣೆಕಟ್ಟೆಗಳು, ಟ್ಯಾಂಕುಗಳು ಇವುಗಳನ್ನು ಸರ್ವೆ ಮಾಡುತ್ತಾರೆ ಕೆಲಸ ಪ್ರಾರಂಭ ಮಾಡುತ್ತಾರೆ. ಆದರೆ ಆ ಪೈಕಿ ಒಂದು ಕೆಲಸ ಕಂಪ್ಲೀಟಾಗಿದೆ ಎಂದು ತೋರಿಸಿದರೆ ನಾನು ಸಂತೋಷದಿಂದ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅಲ್ಲಿನ ಪರಿಸ್ಥಿತಿ ತುಂಬಾ ಕಠಿಣವಾಗಿದೆ. ಆದ್ದರಿಂದ ಇದರ ವಿಷಯದಲ್ಲಿ ಸರಿಯಾಗಿ ಪರಿಶೀಲಿಸತಕ್ಕ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ರೂರಲ್ ವಾಟರ್ ಸಪ್ಲೈ ವಿಷಯದಲ್ಲಿ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಇದರಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ನೀರು ಸರಬರಾಯಿ ಮಾಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಆ ಪೈಕಿ ಈಗಾಗಲೇ 60 ಕಾಮಗಾರಿಗಳು ಪೂರ್ತಿಯಾಗಿವೆ ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ಹೇಳುವುದಾದರೆ ನನ್ನ ತಾಲ್ಲೂಕಿಗೆ ಸಂಬಂಧಪಟ್ಟಂತೆ 5–6 ಗ್ರಾಮಗಳ ಫೈಲುಗಳು ಸರ್ಕಾರಕ್ಕೆ ಬಂದಿವೆ. ಆ ಕೆಲಸಗಳು ಯಾವ ಮಟ್ಟದಲ್ಲಿವೆ ಎಂಬುದ ಗೊತ್ತಾಗಿಲ್ಲ. ಅಲ್ಲಿ ಯಾವ ಕೆಲಸಗಳೂ ಸಹ ಪ್ರಾರಂಭವಾಗಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಭಾಗದಲ್ಲಿ ಒಂದು ವೇಳೆ ಆ ಕೆಲಸಗಳನ್ನೇನಾದರೂ ಪ್ರಾರಂಭ ಮಾಡಿದ್ದರೆ ಸಂತೋಷ. ಅವು ಪ್ರಾರಂಭವಾಗದೇ ಇದ್ದರೆ ಅವುಗಳನ್ನು ಜಾಗ್ರತೆ ಪ್ರಾರಂಭ ಮಾಡಬೇಕೆಂದು ನಾನು ಹೇಳುತ್ತೇನೆ. ಲಾಡವಂತಿ ಸರ್ಕಲ್‌ನಲ್ಲಿ ಸುಮಾರು 26 ಹಳ್ಳಿಗಳಿವೆ. ಅಲ್ಲಿ ಒಂದು ಊರಿನಲ್ಲಿ ಕುಡಿಯುವ ನೀರಿನ ಬಾವಿಯನ್ನು ತೋರಿಸಿದರೆ ನಾನು ಈ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. ಅಲ್ಲಿರತಕ್ಕ ಜನಗಳ ಕಷ್ಟವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದವರು ಅದನ್ನು ಪರಿಶೀಲಿಸಿ ಅಲ್ಲಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ಮುಖ್ಯ ವಿಷಯ. ಬಸವ ಕಲ್ಯಾಣದಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲದೆ ಅಲ್ಲಿನ ಜನಗಳಿಗೆ ಬಹಳ ತೊಂದರೆಯಾಗಿದೆ. ಈ ವಿಷಯದಲ್ಲಿ ನಾನು 1957ನೇ ಇಸವಿಯಿಂದಲೂ ಕೂಡ ಹೇಳುತ್ತಲೇ ಬಂದಿದ್ದೇನೆ. ಅದರ ಬಗ್ಗೆ ಪ್ಲಾನು ಮತ್ತು ಎಸ್ಟಿಮೇಟುಗಳು ಆಗಿ ಸರ್ಕಾರಕ್ಕೆ ಬಂದಿವೆ. ಆದ್ದರಿಂದ ಅಲ್ಲಿನ ಮುನಿಸಿಪಾಲಿಟಿಯವರಿಗೆ ಸಾಲವನ್ನು ಕೊಡಿ. ಗೌರ್ನಮೆಂಟ್ ಬ್ಯಾಂಕಿನಿಂದಾದರೂ ಅದಕ್ಕೆ ಹಣವನ್ನು ಕೊಡಿ, ಅಥವಾ ಇನ್ನು ಯಾವ ರೀತಿಯಿಂದಲಾದರೂ ಕೊಡಿ, ನಾವು ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದೇವೆ. ಬೀದರ್ ಜಿಲ್ಲೆಯಲ್ಲಿ ಎರಡು ಮುನಿಸಿಪಾಲಿಟಿಗಳಿಗೆ ನಾವು 10 ಲಕ್ಷ ರೂಪಾಯಿಗಳ ಸಾಲವನ್ನು ಕೇಳಿದ್ದೇವೆ. ಇದನ್ನೆಲ್ಲಾ ಯಾವಾಗ ವಿಚಾರ ಮಾಡು

(ಶ್ರೀಮತಿ ಅನ್ನಪೂರ್ಣಾಬಾಯಿ ರಾಗಟೆ)

ತ್ತೀರಿ, ಇಷ್ಟೊಂದು ನಿಧಾನ ಏತಕ್ಕೆ ಮಾಡುತ್ತೀರಿ, ನಮ್ಮ ಬೀದರ್ ಜಿಲ್ಲೆಯವರು ಕಂದಾಯ ಕೊಡುವುದಿಲ್ಲವೇ ಸರ್‌ಛಾರ್ಜ್ ಕೊಡುವುದಿಲ್ಲವೇ ? ಟ್ಯಾಕ್ಸ್ ಕೊಡುವುದಿಲ್ಲವೇ ? ಇನ್‌ಕಮ್ ಟ್ಯಾಕ್ಸ್ ಕೊಡುವುದಿಲ್ಲವೆ ? ನಮ್ಮ ಮುನಿಸಿಪಾಲಿಟಿಗಳಿಗೆ ಸಾಲವನ್ನು ಕೊಡುವುದಕ್ಕೆ ಏತಕ್ಕೆ ಇಷ್ಟೊಂದು ನಿಧಾನ ಮಾಡುತ್ತಿದ್ದೀರಿ ಎಂದು ನಾನು ವಿಷಾದದಿಂದ ಸರ್ಕಾರದವರನ್ನು ಕೇಳಬೇಕಾಗಿದೆ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸತ್ಯಾಗ್ರಹ ಮಾಡಿ.

ಶ್ರೀಮತಿ ಅನ್ನಪೂರ್ಣಾಬಾಯಿ ರಾಗಟೆ.—ಆದಷ್ಟು ಜಾಗ್ರತೆ ನಮ್ಮ ಮುನಿಸಿಪಾಲಿಟಿಗಳಿಗೆ ಸಾಲವನ್ನು ಕೊಡದೇ ಇದ್ದರೆ ನಾನು ಸತ್ಯಾಗ್ರಹ ಮಾಡುವುದಕ್ಕೂ ಸಿದ್ಧಳಾಗಿದ್ದೇನೆ. ಏತಕ್ಕೆಂದರೆ ಆ ಪ್ರದೇಶದಲ್ಲಿ ಹೆಣ್ಣುಮಕ್ಕಳ ಪರಿಸ್ಥಿತಿಯನ್ನು ನೋಡುವುದಕ್ಕಾಗುವುದಿಲ್ಲ. 2-3 ಮೈಲಿಯಿಂದ ಕೊಡಗಳಲ್ಲಿ ನೀರನ್ನು ಹೊತ್ತುಕೊಂಡು ತರುತ್ತಾರೆ. ಆದ್ದರಿಂದ ಅದನ್ನು ನಮ್ಮ ಸರ್ಕಾರದವರು ತಿಳಿದುಕೊಂಡು ಆ ಕಷ್ಟದಿಂದ ನಮ್ಮನ್ನು ದೂರಮಾಡಬೇಕಾಗಿದ್ದರೆ ನಮ್ಮ ಮುನಿಸಿಪಾಲಿಟಿಗಳಿಗೆ ಸರ್ಕಾರದವರು ಸಾಲವನ್ನು ಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಅಲಕ್ಷ್ಯಮಾಡಬೇಡಿ ಎಂದು ಸರ್ಕಾರದವರಲ್ಲಿ ನಾನು ಮತ್ತೊಮ್ಮೆ ವಿನಯದಿಂದ ಕೇಳಿಕೊಂಡು ಇಷ್ಟು ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri B. R. SUNTHANKAR (Belgaum).—Mr. Speaker, Sir, if I am to describe the budget that is presented by the Finance Minister before this House in a word, it is a "pedestrian" budget.

Sri K. S. SURYANARAYANA RAO.—Common man's budget.

Sri B. R. SUNTHANKAR.—It is not a common man's budget. But it is a pedestrian budget. There is nothing very special in the budget, nothing very commendable, and as my friend Sri Krishna has said, there is an attempt to hoodwink the public of the State. If I am allowed to use the word of the hon'ble member Sir Duggappa, this is the 'best' pedestrian budget. It is very obvious from the budget and from the various statements made by the Treasury Benches that the financial position of the State is very critical. We are in a very critical state of the finances of the State. There is nothing in the budget to assure that this critical situation will be tided over next year or in the very near future. There is a gap of Rs. 60 crores for the completion of the third plan. For the last two years, we were being told that there would be a gap of Rs. 42 crores ; but now we are told that the gap is to the extent of Rs. 60 crores. That means the gap is widening day by day. For the execution of the Third plan we have solely to depend upon the assistance from the Centre. That is not a happy position. If no extra assistance which is expected from the Centre comes forth, then our third plan will fail. That is what seems to be the fate of the Third plan in our State.

As for agricultural production, the members who spoke before me have already dealt with that subject in detail. Agricultural production in the State is almost stagnant. The target for the Third plan was an additional production of 10 lakh tons, from 38 lakhs to 48 lakh tons. The basis taken in the beginning of the Third plan was 38 lakh tons and we have not even reached that after completing 3 years of Third plan. Now it is expected the there will be an addition of 2.67 lakh tons in the food production in 1964-65. I do not understand on what basis the Government claims this additional production. There is nothing in

the past performance of Government which can guarantee such an addition to the production of food. Similarly, there has been during the past years fall in production of pulses and cotton. Fall in production of cotton is alarming. If you take the figures of the last 10 years, production of cotton is decreasing in the State year after year. The requirements of food of the State have been estimated to be 41 lakh tons and we have not even reached 37 lakh tons. How are we going to reach 41 lakh tons target which is the estimate for our self-sufficiency of food, in the remaining two years of third plan ?

In the budget there are some relief measures. Some relief measures are extended to certain sections of employees by way of an increase of Rs. 5 in the dearness allowance, but this small increase in the dearness allowance is more than offset by the rise in prices which are soaring up day by day. Similarly, there is a promise of old age pension and family pension, but there is no provision in the budget for these two schemes. I am reminded here of the ass in a proverb in Marathi. According to that proverb, a bunch of hay is tied to a stick and that stick hangs in front of the mouth of the ass in such a position that the mouth will never reach that bunch of hay. This is a temptation for the ass to walk. This old age pension is just like that bunch of baits. The age limit for this old age pension is 70 years, but the average age in India is 44 years and very, very few persons will reach 70 years of age. Madras, Andhra and West Bengal have adopted this scheme of old age pension. In Madras, the age limit is 65 years and the remuneration is Rs.20 per month. In Andhra the age limit is 70 years and there is a graded scale of pension, Rs.25 per month for Hyderabad area, Rs 20 per month in other urban areas and Rs.15 in the rural areas. In Andhra about 1,000 People will get the benefit and the provision in the budget of that State is Rs.3,60,000. In West Bengal the age limit is 69 and the annual remuneration is Rs. 300. A survey in West Bengal has found that there are about 6,000 people reaching the age of 69. If at all this scheme is to benefit a larger number of persons, this age limit should be only 60 years. According to my rough guess, the Government will have to spend on this account not Rs.25 lakhs but only Rs.5 lakhs to Rs.6 lakhs and it is expected that about 12,000 people will get the benefit if the age limit is fixed as 60 years.

Sir, I would like to look at the Budget from two aspects. One aspect is to examine the budget in the context of our plan. The second aspect I would like to look at the Budget is in the light of Bhubaneswar resolution. Bhuvaneswar Resolution is very important as far as the Congress Party is concerned. There are really very good things in that resolution. If we examine the Budget from these two aspects, I regret to say that the Budget falls far short of the mark. This Budget cannot stand these two tests. The Congress President Sri Kamaraj said in his Presidential Address at Bhubaneswar that the question was not whether socialism was good or socialism was right, but that the question was whether the legislative and executive measures were in furtherance of the socialistic goal. I am quoting the words of Sri Kama-

(SRI B. R. SUNTHANKAR

raj, the Congress President. Sir, is there anything in this Budget to assure us that Legislative and executive measures are being taken in the State to fulfil the socialist goal? The answer is 'no'.

Sri B. D. JATTI.—Is there any other State where the Hon'ble Member can point out anything being done with reference to that resolution?

Sri B. R. SUNTHANKAR.—I am not concerned with other States. Here we are concerned only with the Mysore State and the Bhubaneswar Resolution. The Congress is pledged to that resolution. In that resolution, it has been stated that a national minimum standard should be established as speedily as possible and that national minimum standard, it is stated in the resolution, is food, clothing, housing, education and health. These are the minimum requirements that every citizen of India should get. Is there anything in this Budget by which we can be sure that the common man will get these minimum requirements. Then the Third Plan is pledged to do three things; one is approach road to every village; second is drinking water to every village and third is a school to every village. Sir, is there anything in the Budget to show that we are progressing in fulfilling these three requirements to each and every village? Sir, there is a reference in the Budget about drinking water wells, but no figures are given. More than 5,000 villages go without drinking water wells. I want to know from the Government how many of these 5,000 villages have been supplied with drinking water during the last three years. Are we progressing in that direction? Are we going according to the spirit of the Bhubaneswar resolution so that drinking water is available within the whole State with in a limited period? What is the Government going to do in this matter? Three years of the Third Plan are over. What are they going to do in the remaining years? Similarly, the Bhubaneswar resolution is pledged to remove the disparities in income. What is the Government doing in this respect? On the contrary we find in the Budget that the Planters will be given some concessions in the Sales-tax and it is stated that the amendment to Sales Tax Act will include deductions on account of remuneration to Managing Directors, etc. This is a concession to the rich class in the State. Instead of removing the disparity, the Government is adding to the disparity of the State. Similarly about price support. The price support as envisaged in the budget speech will not help much to bring down prices. My last point is about the neglect of Marathi Border areas. Sir, it is said very often that the border areas are being looked into very well. My friend Sri Ganji Veerappa said that adequate provision has been made for border areas. Here, we have been pointing out to the House how the Marathi people have been discriminated against. My hon'ble friend Sri V. S. Patil quoted some instances. There is a talk of appeasing Maharashtrians and talk of assurances that the interests of Marathi people and Marathi border area are safeguarded. But I will give here some instances which will

clearly show that the Marathi border areas have been neglected. Londa Sadashivgad Road is an ore carrying road and from 1957 we are being told that this road would be improved. That road being an ore-carrying road, I think almost the whole expenditure will be borne by the Central Government. But during the last seven years work on this road is lingering. Simply the work is going on and we do not know how many years will it take to complete the work of this road. Sir, on account of the bad condition of the road, the buses have also stopped plying. Formerly, except in the rainy season, there used to be S. T. buses plying between Belgaum and Sadashivagad. But during the last three years, the bus traffic is completely closed. There is another road Belgaum-Jamboti-Kanakumbi Road leading to the Gova border. It is in a very bad condition. It is not being repaired and it is neglected. On account of bad condition of the road, bus traffic is closed for the last two or three years. Except in the rainy season, formerly throughout the year buses were plying. But during the last three years, bus traffic is closed. So, this whole area of Jamboti, Kanakumbi and Sadashivagad are without amenity of conveyance for the last three years.

Sri M. N. NAGHNOOR.—I have seen this road. Jungle is grown there and it is closed for the last 10 years.

Sri B. R. SUNTHANKAR.—Similarly gramasevaks are not being appointed in Khanapur Taluk, Karwar, Supha and Halyal. A number of taluks go without gramsevaks. Similarly in North Kanara, as my Hon'ble friend Sri Kadam has pointed out, how many development works have been taken up and how many approach roads have been completed and how many irrigation works are undertaken? Now, there is a big programme of providing pump sets. May I ask the Government how many pump sets have been provided in the North Kanara District particularly in the three border taluks? Similarly, about Belgaum City, there are a number of schemes but they have not been undertaken. Firstly, Belgaum is badly in need of a Railway overbridge. That railway overbridge is included in the Third Five Year Plan. Three years have passed but nothing has been done in that direction. Sir, every year, in the plan programme, mention is made about milk supply scheme for Belgaum whereas it is not coming forth. It is simply mentioned but no money is being spent. Even the preliminary work on that scheme is not done.

Sri VEERENDRA PATIL (Minister for Public Works).—Is it not a fact that a case is pending in the Court with regard to Railway Overbridge?

Sri B. R. SUNTHANKAR.—Railway overbridge has nothing to do with the case. Similarly, Sir, there is a move to close down educational institutions in Belgaum. There is a 113 years old Sardar High School at Belgaum and there is a move to close it. There is another move to remove the Secondary Training College at Belgaum. They want to remove this and take it either to Bijapur or Jamkhandi. We are agitating to retain this in Belgaum. Then, Sir, every year, there is over-crowding in the Railways at Belgaum in summer, from the beginning of March to the

(SRI B. R. SUNTHANKAR)

end of June. During this period, there is terrible overcrowding. Some of the social workers, and we ourselves are carrying on an agitation and lead deputations to the railway authorities. Every year, we have been doing that. This has become a common feature. But this Government is doing nothing. This Government has got to do something with the Railways. This Government can represent to the Central Government and to the Railways Department. But this Government does not want the people in Belgaum to be helped. They want to claim Belgaum. But they do not want to do anything for Belgaum. My Hon'ble friend Sri Bapu Rao has been clamouring for a High School for the Bhalki area. He has been persuading the Minister to grant permission for a high school as the Hyderabad area is backward in education. But the Education Minister is not responding. My friend has been appealing to the Education Minister. But the Minister is not willing to concede his request.

Sir, this is my last point. At the time of the passing of the Official Languages Bill into an Act, the Chief Minister assured that the aecords in the Marathi Speaking areas will not be disturbed. That was rn assurance given by the Hon'ble Chief Minister. But, what is it that is being done now ? Sir from Athani taluka, I have received complaints that the Tahsildar is asking the talatis to change the records from Marathi to Kannada. The Talatis are asking for a written order, but the Tahsildar is not issuing written orders. But in the periodical meetings at Athani, he has been threatening the talatis to convert the records from Marathi to Kannada. There has been pressure. There has been intimidation that if the talatis would not change the records from Marathi to Kannada, they would be punished. Is this the way of keeping assurances by Government ? Is this the way of implementing their own assurances ? Is this the way of keeping their own words ? In the Marathi villages Kannada talatis are being posted. We have been receiving complaints from many villages that where records are kept in Marathi, talatis who do not know Marathi are being posted, to change Marathi into Kannada. That is our charge. However tall the talks may be, there is nothing in practice; there is nothing in implementation. Marathi areas are neglected with a vengeance, and that is our charge.

MR. SPEAKER.—We will meet tomorrow at 8-30 A.M. The agenda will be as follows: 8-30 A.M. to 9-30 A.M. Question Hour; 9-30 A.M. to 11-30 A.M. Reply and from 11-30 A.M. to 12-30 P.M. Demands. Then again in the evening 3 P.M. to 6 P.M. the Demand will have to be closed.

ಶ್ರೀ ಆರ್. ಎ. ಕೊಪ್ಪಳ (ಹುಬ್ಬಳ್ಳಿ ಸಿಟಿ).—ಮಾನ್ಯ ಸಭಾಪತಿಗಳೇ, ನಮ್ಮ ರಾಜ್ಯದ ಅರ್ಥ ಮಂತ್ರಿಗಳು ಈ ಸಭೆಯಲ್ಲಿ ಮಂಡಿಸಿದ 1964-65ನೇ ಸಾಲಿನ ಮುಂಗಡ ಪತ್ರಿಕೆಯನ್ನು ನಾನು ಸ್ವಾಗತಿಸುತ್ತೇನೆ. ಈಗಿನ ಹಣಕಾಸಿನ ಸಚಿವರು ಮುಖ್ಯ ಮಂತ್ರಿಗಳಾಗಿದ್ದಾಗ್ಗೆ ಅಂದರೆ 1-3-1962ಕ್ಕೆ ನಮ್ಮ ಮೈಸೂರು ರಾಜ್ಯದಲ್ಲಿ ಹುಬ್ಬಳ್ಳಿ ಮತ್ತು ಧಾರವಾಡ ಈ ಎರಡೂ ನಗರ ಗಳನ್ನು ಸೇರಿಸಿ ಒಂದು ಕಾರ್ಪೊರೇಷನ್ ಮಾಡಿರುವುದು ಈ ಬಗ್ಗೆ ಅಭಿಮಾನ ತಾಳುತ್ತೇವೆ.

ಹುಬ್ಬಳ್ಳಿ--ಧಾರವಾಡ ಕಾರ್ಪೊರೇಷನ್ನಿಗೆ ಸರಕಾರ ಎಲ್ಲಾ ರೀತಿಯ ಸಹಾಯ ಸೌಕರ್ಯ ಒದಗಿಸಿ ಕೊಟ್ಟು ಉಳಿದ ಕಾರ್ಪೊರೇಷನ್ ಜೊತೆಗೆ ಬರುವ ಹಾಗೆ ಮಾಡಬೇಕೆಂದು ಸರಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ಪ್ರಾರಂಭ ಮಾಡಿದ ಕಾಲದಲ್ಲಿ ಅದಕ್ಕೆ ಸದಸ್ಯರನ್ನು ಎರಡು ವರ್ಷಗಳವರಗೆ ಎಂದು ನಾಮಕರಣ ಮಾಡಿತ್ತು. ಎರಡು ವರ್ಷ ಅವಧಿ ಮುಗಿಯುವ ಹೊತ್ತಿಗೆ ಚುನಾವಣೆ ನಡೆಯಬೇಕಾಗಿತ್ತು. ಆದರೆ ಕಾರ್ಪೊರೇಷನ್ ಚುನಾವಣೆಗೆ ಮಾಡಬೇಕಾದ ಪೂರ್ವಭಾವೀ ಸಿದ್ಧತೆಗಳನ್ನು ಮಾಡದೇ ಇದ್ದುದರಿಂದ ಈ ಅವಧಿ ಯನ್ನು ಪುನಃ ಒಂದು ವರ್ಷದ ಮಟ್ಟಿಗೆ ಬೆಳೆಸಿದ್ದಾರೆ. ಒಂದು ವರ್ಷದೊಳಗೆ ದಯೆಯಿಟ್ಟು ಚುನಾವಣೆ ನಡೆಸಿ, ನೀವು ಕಾರ್ಪೊರೇಷನ್ನಿಗೆ ಅಧಿಕಾರ ಕೊಡಿರಿ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇವೆ.

ಇನ್ನು ಕಾರ್ಪೊರೇಷನ್ನಿನ ನೀರಿನ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಉಣಕಲ್ ಕೆರೆಯು ಈ ವರ್ಷ ನಮ್ಮಲ್ಲಿ ಪೂರ್ತಿ ಬತ್ತಿಹೋಗಿದೆ ಮತ್ತು ಕೆಲವು ಪ್ರಮಾಣದಲ್ಲಿ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ನೀರು ಪೂರೈಸುವ ನೀರುಸಾಗರ ಕೆರೆಯಲ್ಲಿ ನೀರು ಬೇಕಾದಷ್ಟಿದ್ದರೂ ಕೂಡ, ಅದರ ಉಪಯೋಗ ಹುಬ್ಬಳ್ಳಿ ನಗರಕ್ಕೆ ಸಿಗದಂತಾಗಿದೆ. ಹುಬ್ಬಳ್ಳಿ-ಧಾರವಾಡ ನಗರ ಕಾರ್ಪೊರೇಷನ್ನಿಗೆ 40-42 ಲಕ್ಷ ಗ್ಯಾಲನ್ ನೀರು ಬೇಕಾಗುತ್ತದೆ. ನಮ್ಮ ನೀರು ಸಾಗರದಿಂದ 27 ಲಕ್ಷ ಗ್ಯಾಲನ್ ಪಂಪ್ ಮಾಡುವ ಅವಕಾಶವಿದೆ. ಈ ಹೆಚ್ಚಿನ ಪಂಪ್ ಮಾಡುವ ವ್ಯವಸ್ಥೆ ಇಲ್ಲದೆ ಇರುವುದು ಬಹಳ ಶೋಚನೀಯ ಪರಿಸ್ಥಿತಿ. ಸರಕಾರದವರು ಬೇಗ. ಅದಕ್ಕೆ ನಿಗಾಕೊಟ್ಟು ಒಂದು ಪಂಪ್‌ಸೆಟ್ ಒದಗಿಸಿ, 10–15 ಲಕ್ಷ ಗ್ಯಾಲನ್ ಪಂಪ್ ಆಗುವ ವ್ಯವಸ್ಥೆಯನ್ನು ಮಾಡಬೇಕು.

ಇನ್ನು ಈ ಕಾರ್ಪೊರೇಷನ್ನಿನವರು 40 ಲಕ್ಷ ರೂಪಾಯಿಗಳನ್ನು ಷೆಡ್ಯೂಲ್ಡ್ ಬ್ಯಾಂಕುಗಳಿಂದ ಸಾಲ ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿ ಸರಕಾರ ಆ ಬಗ್ಗೆ ಗ್ಯಾರಂಟಿಯಾಗಬೇಕು ಅಂತ ಕೇಳಿಕೊಂಡು, ಆ ಬಗ್ಗೆ ಸರಕಾರಕ್ಕೆ ಪ್ರಪೋಸಲ್ಸ್ ಕಳುಹಿಸಿ ಕೊಟ್ಟಿದ್ದಾರೆ. ಸರಕಾರ ಗ್ಯಾರಂಟಿ ಆಗುವ ಹಾಗೆ ಹಾಗೂ ಕಾರ್ಪೊರೇಷನ್ ಉನ್ನತವಾದ ಕೆಲಸವನ್ನು ತೆಗೆದುಕೊಳ್ಳುವ ಹಾಗೆ ನಿಗಾ ವಹಿಸಬೇಕು.

ಇನ್ನು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಸರ್ವಿಸೆಸ್‌ನಲ್ಲಿ ಕೇಡರ್ ಸಿಸ್ಟಮ್ ಕೂಡಲೇ ಜಾರಿಗೆ ತರಬೇಕು. ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ನಿನಲ್ಲಿಯೇ ಆಗಲಿ ಅಥವಾ ಕಾರ್ಪೊರೇಷನ್ನಿನಲ್ಲಿಯೇ ಆಗಲಿ ಸ್ಥಾನೀಯ ಜನಗಳು 30 ವರ್ಷಗಳು ಒಂದೇ ಸಮನೆ ಇರುವುದರಿಂದ ಕೆಲಸ ಅಷ್ಟು ಚೆನ್ನಾಗಿ ನಡೆಯುತ್ತಿಲ್ಲ. ಆದ್ದರಿಂದ ಈ ಕೇಡರ್ ಸಿಸ್ಟಮ್ಮನ್ನು ಕೂಡಲೆ ಜಾರಿಗೆ ತರಬೇಕೆಂದು ಈ ಸಂದರ್ಭ ದಲ್ಲಿ ಹೇಳುತ್ತೇನೆ.

ಇನ್ನು ಪೂನಾ-ಬೆಂಗಳೂರು ನ್ಯಾಷನಲ್ ಹೈವೆ ಹುಬ್ಬಳ್ಳಿ ಧಾರವಾಡ ನಗರಗಳಲ್ಲಿ ಹಾದು ಹೋಗುತ್ತದೆ. ಪ್ರತಿ ಎರಡು ನಿಮಿಷಕ್ಕೆ ಒಂದು ವಾಹನ ಓಡಾಡುತ್ತದೆ. ಈ ಹೆದ್ದಾರಿ ನಗರದ ಮಧ್ಯದಲ್ಲಿ ಹಾದು ಹೋಗುತ್ತದೆ. ಅದರ ಎಡಬಲ ಭಾಗಗಳಲ್ಲಿ ಪ್ರೈಮರಿ ಸ್ಕೂಲುಗಳು, ಮಿಡಲ್ ಸ್ಕೂಲುಗಳು ಮತ್ತು ಅನೇಕತರಹ ಆಫೀಸುಗಳು ಇರುವುದರಿಂದ, ಅಪಘಾತಗಳಾಗುತ್ತಿವೆ. ಆದ್ದರಿಂದ ಈ ಹೈವೆ ಹುಬ್ಬಳ್ಳಿ ನಗರದ ಹೊರಗೆ ಹಾದು ಹೋಗುವಂತೆ ಮಾಡುವ ಯೋಜನೆ ನಾಲ್ಕಾರು ವರ್ಷಗಳಿಂದ ಸರಕಾರದಲ್ಲಿದೆ. ಆ ಡೈವರ್ಷನ್ ರೋಡು ಕೂಡಲೆ ಆಗುವ ಹಾಗೆ ಮಾಡ ಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ನೇಮಿಸಿ ಒಂದು ವ್ಯವಸ್ಥಿತ ರೀತಿಯಲ್ಲಿ ಅಲ್ಪ ಮತ್ತು ಮಧ್ಯಮ ವರ್ಗದ ಜನರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅನುಕೂಲಮಾಡಿ ಕೊಟ್ಟಿದ್ದೀರ; ಆ ಬೋರ್ಡುಗಳು ಆದರ್ಶವಾಗಿ ಕೆಲಸ ಮಾಡುತ್ತಿವೆ. ಆದರೆ ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ರಚನೆಯಾಗಿ ಎರಡು ವರ್ಷವಾದರೂ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಮಾಡುವ ದಾರಿಯಲ್ಲಿ ಏನೊಂದೂ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಈ ನಗರಗಳಿಗೆ ಒಂದು ಮಾಸ್ಟರ್ ಪ್ಲಾನ್ ಇಲ್ಲದೆ, ಪ್ಲಾಟುಗಳ ಹಂಚಿಕೆ ಇಲ್ಲದೆ, ಮಧ್ಯದಲ್ಲಿ ಸಿಕ್ಕಾಪಟ್ಟೆ ಮನೆಗಳನ್ನು ಕಟ್ಟುತ್ತಾ ಇದ್ದಾರೆ. ಇದನ್ನು ತಪ್ಪಿಸಲು ಕೂಡಲೇ ಹುಬ್ಬಳ್ಳಿ-ಧಾರವಾಡ ನಗರಕ್ಕೆ ಸಿಟಿ ಇಂಪ್ರೂವ್‌ಮೆಂಟ್ ಬೋರ್ಡನ್ನು ರಚಿಸಬೇಕೆಂದು ಈ ಸಂದರ್ಭ ದಲ್ಲಿ ಕೇಳಿಕೊಳ್ಳುತ್ತೇನೆ.

ಸರ್ವೇಸಾಧಾರಣವಾಗಿ ದಿನವಹಿ ಪತ್ರಿಕೆಗಳಲ್ಲಿ ಹುಬ್ಬಳ್ಳಿಯಲ್ಲಿ ಕಾಲರಾ ಬೇನೆ ಇದೆಯೆಂದು ಓದುತ್ತಿದ್ದೇವೆ. 300 ಜನಕ್ಕೆ ಆ ಬೇನೆ ತಗುಲಿ, ಈತನಕ 20 ಜನ ಅದರಲ್ಲಿ ಸತ್ತಿದ್ದಾರೆಂದು ಪತ್ರಿಕೆಯಲ್ಲಿ ಓದಿದೆ. ಕಾಲರಾಬೇನೆ ಅಲ್ಲಿಗೆ ಹೊಸದೇನೂ ಅಲ್ಲ. ಒಂದು ವರ್ಷಕ್ಕೆ ಎರಡು ಮೂರು ಕಾಲವಾದರೂ ಬರುತ್ತಿರುತ್ತದೆ. ಈ ಬಗ್ಗೆ ಸರಕಾರದವರು ಆ ರೋಗ ಬರುವುದಕ್ಕೆ ಕಾರಣವೇನು ? ಅದು ಹಬ್ಬದೆ ಇರುವುದಕ್ಕೆ ಏನು ಮಾಡಬೇಕು ಎಂದು ವಿಚಾರ ಮಾಡಿ, ಯೋಜನೆ

(ಶ್ರೀ ಆರ್. ಎ. ಕೊಪ್ಪಳ)

ಗಳನ್ನು ಮಾಡಿ, ತಕ್ಕ ಕಾರ್ಯಕ್ರಮಗಳನ್ನು ಈವರೆಗೂ ಕೈಗೊಳ್ಳದೆ ಇರುವುದು ಬಹಳ ಶೋಚನೀಯ. ಅದರ ಬಗ್ಗೆ ಆರೋಗ್ಯ ಇಲಾಖೆಯವರು ಕಾಲರಾ ಹಬ್ಬದಂತೆ ಮತ್ತು ಆ ರೋಗ ನಿರ್ಮೂಲವಾಗುವ ಹಾಗೆ ಉಪಾಯವನ್ನು ಕೈಗೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕರ್ನಾಟಕ ಮೆಡಿಕಲ್ ಕಾಲೇಜ್ ಬಿಲ್ಡಿಂಗು, ಆಸ್ಪತ್ರೆ ಬಗ್ಗೆ ನನ್ನ ಅನೇಕ ಮಾನ್ಯ ಸ್ನೇಹಿತರು ತಮ್ಮ ತಮ್ಮ ವಿಚಾರಗಳನ್ನು ಇಟ್ಟಿದ್ದಾರೆ. ಅದರೆ ಅದರ ಬಿಲ್ಡಿಂಗೂ ನೋಡಲಿಕ್ಕೆ 4–5 ಅಂತಸ್ತುಗಳಿವೆ, ನೋಡಲಿಕ್ಕೆ ಬಹಳ ಚೆನ್ನಾಗಿಯೂ ಇದೆ. ಆ ಆಸ್ಪತ್ರೆಯಲ್ಲಿ ಆರೋಗ್ಯ ಹೊಂದಲಿಕ್ಕೆ ಬಂದ ರೋಗಿಯ ಮನಸ್ಸಿನ ಮೇಲೆ ಏನು ಪರಿಣಾಮವಾಗುತ್ತದೆ ಅನ್ನುವುದನ್ನು ಹೇಳಲಿಕ್ಕೆ ತೀರದು, ಸ್ಪತ್ರೆ ಸುತ್ತ ಮುತ್ತಲೂ ಹೊಲಸಾದಂಥ ಜೋಪಡಿಗಳು (ಹಟ್ಸ್), ಮತ್ತು ದಿಣ್ಣೆ, ಗುಡ್ಡ, ಗಿಡ ಕುಂಟೆಗಳು ಇವೆ. ಅದು 25-30 ವರ್ಷಗಳ ಹಿಂದೆ ಯಾವ ಸ್ಥಿತಿಯಲ್ಲಿತ್ತೋ ಅದೇಸ್ಥಿತಿಯಲ್ಲಿದೆ? ಇದನ್ನು ರುಧ್ರಭೂಮಿಯಲ್ಲಿ ಇಟ್ಟಿದ್ದಾರೆ, ಸ್ಮಶಾನ ಭೂಮಿಯಲ್ಲಿ ಇಟ್ಟಿದ್ದಾರೆ ಎಂಬ ಅನುಭವ ರೋಗಿ ಮೇಲೆ ಆಗದೆ ಇರಲಾರದು. ಈ ಬಿಲ್ಡಿಂಗ್ ಸುತ್ತಮುತ್ತಲೂ ಒಳ್ಳೆಯ ವಾತಾವರಣವನ್ನು ಸೃಷ್ಟಿಸಿ, ಎಲ್ಲವನ್ನು ಸ್ವಚ್ಛರೀತಿಯಿಂದ ಇಟ್ಟು ರೋಗಿಯ ಮನಸ್ಸಿನ ಮೇಲೆ ಉತ್ತಮವಾದಂಥ ಪರಿಣಾಮವಾಗುವಂತೆ ಆಡಳಿತವನ್ನು ನಿರ್ವಹಿಸಬೇಕೆಂದು ಒತ್ತಾಯ ಪೂರ್ವಕವಾಗಿ ನಾನು ಸರಕಾರಕ್ಕೆ ಹೇಳುತ್ತಾ ಇದ್ದೇನೆ.

ಇನ್ನು ಹುಬ್ಬಳ್ಳಿಯಿಂದ ಧಾರವಾಡಕ್ಕೆ, ಧಾರವಾಡದಿಂದ ಹುಬ್ಬಳ್ಳಿಗೆ ಸಾವಿರಾರು ಜನಗಳು ದಿನವಹಿ ಬಸ್ಸಿನಲ್ಲಿ ಓಡಾಡುತ್ತಾರೆ. ಶಾಲಾ ಕಾಲೇಜುಗಳ ಸಲುವಾಗಿ, ಆಫೀಸಿಗೆ, ಇನ್ನಿತರ ಕೆಲಸಗಳಿಗೆ ಸಾವಿರಾರು ಜನರು ಸಂಚಾರ ಮಾಡಬೇಕಾಗಿದೆ. ಕಾರ್ಪೊರೇಷನ್ ಆದಮೇಲೆ ಸಿಟಿ ಬಸ್ ಸರ್ವೀಸುಗಳನ್ನು ಷುರು ಮಾಡಲಿಕ್ಕೆ ಮತ್ತು ದರಗಳು ಏಕರಣೆ ಮಾಡಲಿಕ್ಕೆ ಎರಡು ವರ್ಷದಿಂದ ಸರ್ಕಾರಕ್ಕೆ ಕೇಳುತ್ತಾ ಇದ್ದೇವೆ. ಆ ದಿಶೆಯಲ್ಲಿ ಈವರೆಗೆ ಪ್ರಯೋಜನವಾಗಿಲ್ಲ. ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಸಿಟಿ ಬಸ್ ಸರ್ವೀಸಿನ ಏರ್ಪಾಡು ಮಾಡಬೇಕು, ಮತ್ತು ಸಿಟಿ ಬಸ್ಸಿನ ದರಗಳನ್ನು ಏಕರಣೆ ಮಾಡಬೇಕು ಎಂದು ಹೇಳುತ್ತೇನೆ.

ಧಾರವಾಡ ಜಿಲ್ಲೆಯ ಮತ್ತೊಂದು ವಿಚಾರ ಹೇಳಬೇಕಾದರೆ, ಅಲ್ಲಿ ಆಹಾರ ಧಾನ್ಯಗಳ ಪರಿಸ್ಥಿತಿ ತೀರ ಶೋಚನೀಯವಾಗಿದೆ. ಮಲೆನಾಡಿನಲ್ಲಿ ಸಕಾಲಕ್ಕೆ ಮಳೆ ಆಗದೆ ಇರುವುದರಿಂದ ಭತ್ತದ ಪೈರು ನಾಶವಾಗಿದೆ. ಅಲ್ಪ ಸ್ವಲ್ಪ ಭತ್ತದ ಪೈರು ಬಂದದ್ದು ಸುಗ್ಗಿ ಕಾಲದಲ್ಲಿ ಕೂಡಲೆ ಮದ್ರಾಸು, ಕೇರಳ, ಮತ್ತಿತರ ಹೊರಗಡೆ ಪ್ರದೇಶಗಳಿಗೆ ರಫ್ತಾಗಿದೆ. ಹೀಗಾಗಿ ಧಾರವಾಡದಲ್ಲಿ ಭತ್ತ ಇಲ್ಲದಂಥ ಒಂದು ಪರಿಸ್ಥಿತಿ ಈಗ ಬಂದಿದೆ. ಕಾರಣ, ಸರಕಾರದವರು ಇಂಪೋರ್ಟೆಡ್ ರೈಸ್ ಮತ್ತು ಇಂಪೋರ್ಟಡ್ ಗೋಧಿಯನ್ನು ಧಾರವಾಡ ಜಿಲ್ಲೆಗೆ ಹೆಚ್ಚು ಪ್ರಮಾಣದಲ್ಲಿ ನಿಗದಿಮಾಡಿ, ಸರಕಾರಿ ಫೇರ್ ಪ್ರೈಸ್‌ಡಿಪೋಗಳ ಮುಖಾಂತರ ಹಂಚುವಹಾಗೆ ತ್ವರಿತವಾಗಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸೂಚಿಸ ಬಯಸುತ್ತೇನೆ.

ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ನಿನವರು, ಹುಬ್ಬಳ್ಳಿ ಧಾರವಾಡ ನಗರಗಳ ಮಧ್ಯೆ ವಿಸ್ತಾರವಾದ 500 ಎಕರೆ ಜಮೀನನ್ನು ಇಂಡಸ್ಟ್ರಿಯಲ್ ಜೋನ್ ಅಂತ ಹೇಳಿ ಡೆವಲಪ್ ಮಾಡುತ್ತಾ ಇರುತ್ತಾರೆ, ಅಲ್ಲಿ ರಸ್ತೆ, ಚರಂಡಿ ಮತ್ತು ಎಲೆಕ್ಟ್ರಿಕ್ ದೀಪಗಳನ್ನು ಒದಗಿಸಲು ಯೋಜನೆಮಾಡಿ ಉದ್ದಿಮೆದಾರರಿಗೆ ಉದ್ಯಮಗಳನ್ನು ಹಾಕುವ ಬಗ್ಗೆ ಪತ್ರಿಕೆಯಲ್ಲಿ ಪಬ್ಲಿಷ್ ಮಾಡಿದ್ದನ್ನು ನೋಡಿದ್ದೇನೆ. ಅಲ್ಲಿ ವಿಶಾಲ ಪ್ರದೇಶವಿದೆ, ಕಚ್ಚಾ ಮಾಲೂ ಅಧಿಕವಾಗಿ ಸಿಗುತ್ತದೆ, ಯೋಗ್ಯಕೂಲಿಗಳೂ ಸಿಗುತ್ತಾರೆ, ವಿದ್ಯುಚ್ಛಕ್ತಿ ಪೂರೈಕೆ ಇದೆ. ಸ್ಟೇಷನ್‌ಕೂಡ ಸಮೀಪದಲ್ಲಿದೆ. ಆ ಕಾರಣ, ಅಲ್ಲಿ ಸಣ್ಣ ಸಣ್ಣ ಉದ್ಯಮಗಳನ್ನು ಹಾಕುವ ಬದಲು, ಒಂದೆರಡು ಹೆವಿ ಇಂಡಸ್ಟ್ರಿಗಳನ್ನು ಸೆಟ್‌ಅಪ್ ಮಾಡಬೇಕೆಂದು ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಹೆವಿ ಇಂಡಸ್ಟ್ರಿಗಳು ಸಾಕಾದಷ್ಟು ಬೆಂಗಳೂರು ಸುತ್ತಮುತ್ತ ಆಗಿವೆ. ಅವುಗಳನ್ನು ಬೆಂಗಳೂರಿನಲ್ಲಿಯೇ ಮಾಡುವುದಕ್ಕಿಂತ, ಬೇರೆ ಕಡೆಯೂ ಮಾಡುವುದು ಮೇಲು ಎಂದು ಸೆಂಟ್ರಲ್ ಗವರ್ನ್‌ಮೆಂಟಿನವರನ್ನು ಒತ್ತಾಯ ಮಾಡಿ, ಹುಬ್ಬಳ್ಳಿ-ಧಾರವಾಡಕ್ಕೂ ಕೊಡಿಸಿ ಕೊಡಬೇಕು.

ಇಷ್ಟು ಸಲಹೆಗಳನ್ನು ಮಾಡಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4-30 P.M.

†ಶ್ರೀ ಶರಣಪ್ಪ (ದೇವದುರ್ಗ).—ಮಾನ್ಯ ಸಭಾಪತಿಗಳೇ, ಈ ದಿನ ಮಾನ್ಯ ಹಣಕಾಸಿನ ಸಚಿವರಾದ ಶ್ರೀಮಾನ್ ಜತ್ತಿಯವರು ನಮ್ಮ ಮುಂದೆ 1964-65ನೇ ಸಾಲಿನ ಆಯವ್ಯಯ ಪಟ್ಟಿಯ ಒಂದು ವರದಿಯನ್ನು ಇಟ್ಟಿದ್ದಕ್ಕಾಗಿ ಅದನ್ನು ನಾನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಒಂದು ತುರ್ತುಪರಿಸ್ಥಿತಿಯಲ್ಲಿ ನಮ್ಮ ನಾಡಿನಲ್ಲಿ ಅತೀವ ತೊಂದರೆಗಳು, ತಡೆಗಳು ಮತ್ತು ಬರಗಾಲದ ಚಿನ್ಹೆಗಳು ಅಲ್ಲದೆ ಇನ್ನೂ ಅನೇಕಾನೇಕ ಕಷ್ಟದ ಪ್ರಸಂಗಗಳು ಬಂದರೂ ಕೂಡ ಮಾನ್ಯ ಸಚಿವರು ಒಂದು ಹೆಚ್ಚುವರಿ ಬಡ್ಜೆಟ್ಟನ್ನು ನಮ್ಮ ಮುಂದೆ ಇಟ್ಟಿದ್ದು ನಮ್ಮೆಲ್ಲರಿಗೂ ಒಂದು ಹೆಮ್ಮೆಯ ವಿಷಯ ಎಂದು ಹೇಳಬಹುದು. ಈ ಒಂದು ಕಾಲದಲ್ಲಿ ನಾವು ಮೂರನೆಯ ಪಂಚವಾರ್ಷಿಕ ಯೋಜನೆಯ ಕೆಲವೊಂದು ಅಂಕಿ ಅಂಶಗಳನ್ನು ವಿಚಾರಮಾಡಿ ನೋಡಿದರೆ ಒಕ್ಕಲುತನ, ವ್ಯವಸಾಯ, ನೀರಾವರಿ ಮತ್ತು ವಿದ್ಯುಚ್ಛಕ್ತಿ ಇವುಗಳ ಸಂಬಂಧದಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇ ಆದರೆ ನಮ್ಮ ದೇಶದ ಪ್ರಗತಿ ಮತ್ತು ಅಭಿವೃದ್ಧಿ ಅಷ್ಟೇ ಅಲ್ಲದೆ ಆಹಾರ ಪರಿಸ್ಥಿತಿಯೂ ಕೂಡ ಸುಧಾರಿಸುತ್ತದೆ. ಈ ಒಂದು ಮುಖ್ಯವಾದ ಪತ್ರವನ್ನು ಇಟ್ಟುಕೊಂಡೇ ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ತಯಾರುಮಾಡಿದ್ದಾರೆ. ಆ ದೃಷ್ಟಿಯಿಂದ ನಾನು ಮೇಲೆ ಹೇಳಿದ ಮೂರೇ ಮೂರು ವಿಷಯಗಳ ಬಗ್ಗೆ ಕೆಲವೊಂದು ಸಲಹೆಗಳನ್ನು ಮಾತ್ರ ಸರ್ಕಾರದವರ ಮುಂದೆ ಇಡಲು ಬಯಸುತ್ತೇನೆ.

ವ್ಯವಸಾಯದ ದೃಷ್ಟಿಯಿಂದ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮತ್ತು 1964—65ನೇ ಸಾಲಿನ ಬಡ್ಜೆಟ್ಟಿನಲ್ಲೂ ಕೂಡ ಕೆಲವೊಂದು ಹಣವನ್ನು ಒದಗಿಸಲಾಗಿದೆ. ಒಕ್ಕಲುತನವನ್ನು ಸುಧಾರಿಸುವ ಬಗ್ಗೆ ಸರಿಯಾದ ಬೀಜಗಳನ್ನು ಹಂಚಬೇಕು. ಸರಿಯಾದ ಗೊಬ್ಬರವನ್ನು ಕೊಡಬೇಕು. ನವೀನ ತರಗತಿಯಿಂದ ಒಕ್ಕಲುತನ ಮಾಡಲು ಬೇಕಾದ ಸೌಲಭ್ಯಗಳನ್ನು ಕೊಡಬೇಕೆಂದು ಪ್ರತಿಯೊಬ್ಬರಲ್ಲೂ ಆಶೆ ಇದೆ. ಪ್ರತಿಯೊಬ್ಬರು ಮಾತನಾಡುತ್ತಾ ಇದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಹಳ್ಳಿಗಳ ಪರಿಸ್ಥಿತಿಯನ್ನು ಬದಲಾವಣೆ ಮಾಡುವುದಕ್ಕೆ ಪ್ರತಿಯೊಂದು ಜಿಲ್ಲಾ ಮಟ್ಟದಲ್ಲೂ ಫಾರ್ಮರ್ಸ್ ಟ್ರೈನಿಂಗ್ ಸೆಂಟರ್‌ನ್ನು ಒದಗಿಸಿ ಕೊಟ್ಟರೆ ಹಳ್ಳಿಯಲ್ಲಿ ಒಕ್ಕಲುತನ ಮಾಡತಕ್ಕ ಬಾಂಧವರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ನನ್ನ ಸೂಚನೆ ಇದೆ. ತುಂಗಭದ್ರಾ ಯೋಜನೆಯಿಂದ ಸುಮಾರು 6 ಲಕ್ಷ ಎಕರೆ ಮತ್ತು ಮುಂದೆ ಬರತಕ್ಕ ಅಪ್ಪರ್ ಕೃಷ್ಣಾ ಯೋಜನೆಯಿಂದ ಸುಮಾರು 12 ಲಕ್ಷ ಈ ಪ್ರಕಾರ 18 ಲಕ್ಷ ಎಕರೆ ನೀರಾವರಿಯಾಗತಕ್ಕ ಪ್ರದೇಶ ಗುಲ್ಬರ್ಗ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಬರುತ್ತದೆ. ಇದರ ಬಗ್ಗೆ ಹೆಚ್ಚು ಗಮನ ಕೊಟ್ಟಿದ್ದೇ ಆದರೆ ಮತ್ತು ಒಕ್ಕಲುತನ ಮಾಡತಕ್ಕ ಜನರಿಗೆ ಒಳ್ಳೆಯ ಬೀಜ, ಒಳ್ಳೆಯ ಗೊಬ್ಬರವನ್ನು ಒದಗಿಸಿ ಕೊಟ್ಟಿದ್ದೇ ಆದರೆ ಆಹಾರದ ಪರಿಸ್ಥಿತಿಯನ್ನು ಸುಧಾರಿಸುವುದೂ ಅಲ್ಲದೆ ಅಲ್ಲಿ ಖರ್ಚು ಮಾಡಿರತಕ್ಕ ಹಣಕ್ಕೆ ರಿಟರ್ನ್ ಕೂಡ ಹೆಚ್ಚಿಗೆ ಬರುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಈಗ ಇನ್ನೊಂದು ವಿಷಯ ಗೊಂದಲಕ್ಕೆ ಉಂಟಾಗಿದೆ. ಕೆಲಕೆಲವರಲ್ಲಿ ಭಿನ್ನಾಭಿಪ್ರಾಯ ವುಂಟಾಗಿದೆ. ಕೆಲವೊಂದು ಜನರು ಇಂಥಾ ಜಾಗದಲ್ಲೇ ಅಣೆ ಕಟ್ಟಬೇಕೆಂದು ಹೇಳುವುದು ಮತ್ತು ಕೆಲವೊಂದು ಜನರು ಇಂಥಾ ಜಾಗದಲ್ಲಿ ಅಣೆ ಕಟ್ಟಬೇಕೆಂದು ಹೇಳುವುದು ಈ ಪ್ರಕಾರ ನಡೆದಿದೆ. ಈಗಿನ ಆಹಾರದ ಅಭಾವ ಪರಿಸ್ಥಿತಿಯಲ್ಲಿ ಯಾವ ಪ್ರಕಾರ ಮಾಡಿದರೆ ಒಕ್ಕಲಿಗರು ಸಾಕಾದಷ್ಟು ಆಹಾರ ಉತ್ಪಾದನೆ ಮಾಡಲಿಕ್ಕೆ ಅವಕಾಶವಾಗುತ್ತದೆ ಎಂಬ ವಿಚಾರ ಮಾತ್ರ ಮುಖ್ಯವಾಗಿ ವಿಚಾರ ಮಾಡತಕ್ಕ ವಿಷಯವಾಗಿದೆ. ಈಗ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಕೆಲವೊಂದು ಜನರು ನಾರಾಯಣಪುರದಲ್ಲಿ ಆಗಬೇಕೆಂದು ಹೇಳುತ್ತಾರೆ. ಕೆಲವೊಂದು ಜನರು ಆಲಮಟ್ಟಿಯಲ್ಲಿ ಆಗಬೇಕೆಂದು ಹೇಳುತ್ತಾರೆ. ಈ ರೀತಿ ತರ್ಕ ಮಾಡುತ್ತಾ ಹೋಗುವುದರಿಂದ ಇನ್ನು ಒಂದು ವರ್ಷ ಅಲ್ಲ ಹತ್ತು ವರ್ಷ ಆದರೂ ಕೂಡ ಈ ಅಣೆಕಟ್ಟು ಕಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ಆ ಒಂದು ದೃಷ್ಟಿಯಿಂದ ಈಗಲೇ ಒಂದು ತೀರ್ಮಾನಕ್ಕೆ ಬಂದು ಜಾಗ್ರತೆ ಆ ಕೆಲಸವನ್ನು ಪ್ರಾರಂಭ ಮಾಡಬೇಕು. ನಮ್ಮ ಪಕ್ಕದ ದೇಶದವರಾದ ಆಂಧ್ರ ಪ್ರದೇಶದವರು, ಮದರಾಸಿನವರು ಯಾವ ರೀತಿ ಖಚಿತವಾದ ಒಂದು ಅಭಿಪ್ರಾಯವನ್ನು ಇಟ್ಟುಕೊಂಡು ಈ ನೀರಾವರೀ ಬಗ್ಗೆ ಮುಂದೆ ಹೋಗುತ್ತಾ ಇದ್ದಾರೋ ಅದೇ ಪ್ರಕಾರ ಇವತ್ತಿನ ದಿವಸ ಮೈಸೂರಿನವರೂ ಕೂಡ ಆ ಎರಡು ಕಡೆಗಳಲ್ಲೂ ಅಣೆ ಕಟ್ಟತಕ್ಕ ಒಂದು ಯೋಜನೆಯನ್ನು ಶೀಘ್ರವಾಗಿ ಕೈಕೊಳ್ಳಬೇಕೆಂದು ನಾನು ಸರ್ಕಾರದವರಲ್ಲಿ ಒತ್ತಾಯಪೂರ್ವಕವಾಗಿ ಬಿನ್ನಹಮಾಡಿಕೊಳ್ಳುತ್ತಾ ಇದ್ದೇನೆ. ಹಾಗೆ ಮಾಡದೇ ನಾವು ಮೀನಾ ಮೇಷ ಮಾಡುತ್ತಾ ಹೋದರೆ ಅನೇಕ ತೊಡಕುಗಳು ಬಂದು ನಮ್ಮ ಮೈಸೂರು ದೇಶಕ್ಕೆ ಮುಂದೆ ಆಗತಕ್ಕ ಹಾನಿಯನ್ನು ನಾವು ನಾವೇ ತಂದುಕೊಂಡ ಹಾಗಾಗುತ್ತದೆ. ಆದ್ದರಿಂದ ಯಾವ ಒಂದು ವಿಚಾರ ಮಾಡದೇ, ಯಾವ ಒಂದು ತರ್ಕವನ್ನು ಮಾಡದೇ, ವಾದವಿವಾದಗಳಿಗೆ ಎಡೆ

(ಶ್ರೀ ಶರಣಪ್ಪ)

ಕೊಡದೇ ಆ ಎರಡು ಸ್ಥಳಗಳಲ್ಲೂ ಅಣೆ ಕಟ್ಟುತಕ್ಕ ಕಾರ್ಯವನ್ನು ತಕ್ಷಣ ಕೈಕೊಳ್ಳಬೇಕೆಂದು ಮತ್ತೊಮ್ಮೆ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದ್ದೇನೆ.

ಈ ಅಪ್ಪರ್ ಕೃಷ್ಣ ಪ್ರಾಜೆಕ್ಟಿನ ಬಗ್ಗೆ ತಜ್ಞರ ಅಭಿಪ್ರಾಯದಂತೆ ನಮ್ಮ ಭಾಗದಲ್ಲಿ ಕೃಷ್ಣಾ ನದಿಯ ನೀರನ್ನು ತೆಗೆದುಕೊಳ್ಳ ಬೇಕಾಗಿದ್ದರೆ ಈ ಎರಡು ಸ್ಥಳಗಳಲ್ಲೂ ಅಣೆಕಟ್ಟನ್ನು ಕಟ್ಟಲೇ ಬೇಕು. ಒಂದೇ ಸ್ಥಳದಲ್ಲಿ ಕಟ್ಟಿದರೆ ಮುಂದೆ ಅನೇಕ ರೀತಿಯಿಂದ ಹಾನಿ ಮತ್ತು ನಮಗೆ ದೊರೆಯತಕ್ಕ ನೀರಿನ ಪಾಲೂ ಕೂಡ ದೊರೆಯಲಿಕ್ಕಿಲ್ಲ ಎಂಬ ಅಭಿಪ್ರಾಯವನ್ನು ತಜ್ಞರು ಕೊಟ್ಟಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಅಲ್ಲಿನ ಶಾಸನ ಸಭಾ ಸದಸ್ಯರ ಅಭಿಪ್ರಾಯದಂತೆಯೂ ಮತ್ತು ಎಲ್ಲಿ ಕಟ್ಟಬೇಕೆಂಬುದನ್ನು ಪರಿಶೀಲನೆ ಮಾಡಿರತಕ್ಕ ಇಂಜನಿಯರುಗಳ ಅಭಿಪ್ರಾಯದಂತೆಯೂ ಎರಡು ಭಾಗದಲ್ಲೂ ಅಣೆಕಟ್ಟಿ ಸುಮಾರು 12 ಲಕ್ಷ ಎಕರೆಗೆ ನೀರನ್ನು ಪಡೆದುಕೊಳ್ಳತಕ್ಕ ಒಂದು ಸುಯೋಗವನ್ನು ಸರ್ಕಾರದವರು ಮಾಡಿಕೊಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿಯ ದೃಷ್ಟಿಯಿಂದ ನೋಡಿದರೆ ನಮ್ಮ ದೇಶದಲ್ಲಿ ಬೇಕಾದಷ್ಟು ವಿದ್ಯುಚ್ಛಕ್ತಿ ಉತ್ಪನ್ನವಾಗುತ್ತದೆ ಎಂಬ ಭರವಸೆಯನ್ನು ಕೊಡುತ್ತ ಬಂದಿದ್ದೀರಿ. ಆದರೆ ಅದನ್ನು ಉಪಯೋಗ ಮಾಡತಕ್ಕ ಕೆಲಸ ವೇಗದಿಂದ ಹೋಗುತ್ತಾ ಇಲ್ಲ. ಬಹಳ ಸೂಕ್ಷ್ಮ ರೀತಿಯಿಂದ, ಬಹಳ ಸುಸ್ತಿನಿಂದ ನಡೆದಿದೆ ಎಂದು ಹೇಳಿದರೆ ತಪ್ಪಾಗಲಾರದು. ಉದಾಹರಣೆ ಹೇಳುವುದಾದರೆ ದೇವದುರ್ಗದ ಹತ್ತಿರ ವಿದ್ಯುಚ್ಛಕ್ತಿ ಸರಬರಾಯಿ ಮಾಡುವುದಕ್ಕಾಗಿ ಒಂದು ವರ್ಷದಿಂದ ಪ್ರಯತ್ನ ನಡೆದಿದೆ. ಪೋಲ್ಸ್ ಹಾಕಿ, ತಂತಿ ಎಳೆಯುವ ಕೆಲಸ ನಡೆಸಿದ್ದಾರೆ ಇನ್ನೂ ಮುಗಿದಿಲ್ಲ. ಆದ್ದರಿಂದ ಸರ್ಕಾರದವರು ಈ ವಿಷಯದಲ್ಲಿ ಸ್ವಲ್ಪ ಹೆಚ್ಚು ನಿಗಾ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೂ ಅನೇಕ ಡಿಮ್ಯಾಂಡ್‌ಗಳು ಇವೆ. ಅದರ ಮೇಲೆ ವಿವರವಾಗಿ ಚರ್ಚೆ ಮಾಡಲು ಅವಕಾಶವಿದೆ. ಆ ಸಂದರ್ಭದಲ್ಲಿ ಹೇಳಲು ಪ್ರಯತ್ನ ಮಾಡುತ್ತೇನೆ.

ಇನ್ನು ಒಂದೇ ಒಂದು ವಿಷಯವನ್ನು ನಾನು ಈ ಸಮಯದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದೇನೆಂದರೆ ಬೆಳಗಾಂ ಪ್ರದೇಶದಲ್ಲಿ ಕೆಲವು ಜನರು ಮರಾಠಿ ಮಾತನಾಡತಕ್ಕ ಜನರು ಇದ್ದಾರೆ. ಮೈಸೂರು ದೇಶಕ್ಕೆ ಹೊರಗಿನ ಭಾಗಗಳು ಬಂದು ಸೇರಿದಾಗ ಆ ಭಾಗಗಳೂ ಕೂಡ ಬಂದು ಸೇರಿದವು. ಆದರೂ ಕೂಡ ಅವರು ಮೈಸೂರಿನಿಂದ ಪ್ರತ್ಯೇಕವಾಗಿದ್ದೇವೆ ಎಂಬ ರೀತಿಯಲ್ಲಿ ಮಾತನಾಡುತ್ತಾ ಇರುತ್ತಾರೆ. ಒಟ್ಟು ಮೈಸೂರು ರಾಜ್ಯದಲ್ಲಿ ಸೇರಿದ ಮೇಲೆ ಒಗ್ಗಟ್ಟಿನ ಮನೋಭಾವವನ್ನು ಬೆಳಸಬೇಕೇ ಹೊರತು ಅಂತರ ವಿಚಾರಗಳನ್ನು ಎತ್ತಬಾರದು. ಒಗ್ಗಟ್ಟಿನಿಂದ ನಡೆಯತಕ್ಕ ಒಂದು ವಾತಾವರಣವನ್ನು ಪ್ರತಿಯೊಬ್ಬ ಮಾನ್ಯ ಸದಸ್ಯರೂ ಕಲ್ಪನೆ ಮಾಡಬೇಕೆಂದು ಮಾನ್ಯ ಸ್ನೇಹಿತರನ್ನು ಬೇಡಿಕೊಂಡು ಈ ಸಮಯದಲ್ಲಿ ಒಂದೆರಡು ಮಾತುಗಳನ್ನಾಡಲು ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri SANJEEVANATH AIKALA (Suratkal).—Mr. Speaker, Sir, the budget estamates presented by our Finance Minister whom I can very well call as modern Kautilya of our Government, lacks an intelligent assessment of the economic and climatic conditions prevailing in the country. It also fails to take into consideration so many shortfalls in various development sectors. I agree that the smallest shoulders among the Ministers have to bear the biggest burden of a budget of nearly Rs. 111 crores. The Finance Minister has so ably manipulated the figures that he is able to show a small surplus of Rs. 7 lakhs. We are on the eve of the 14th year of planning or in the 4th year of the third plan. I expected that the Finance Minister would take into consideration the mid-term appraisal of the plan progress and would have adumbrated in his budget such proposals as would give relief to the middleclass people. It is quite well-known that the cost of living index is spiralling up and the food prices are getting higher and higher. Under the

circumstances, the Finance Minister, instead of cutting short the expenditure of the State and increasing the internal resources has not taken into consideration the major relief items in some of the taxation proposals which he brought forward last year. We expected several tax relief measures which he assured last year, but no such tax relief measures are found here. On page 33 of the speech the Finance Minister says that there will be a short fall of nearly Rs. 50 to 60 crores to fully implement the plan programmes. The Gorwala Report has clearly suggested some salient measures to cut short the Governmental expenditure. Recently, the A. G. R. Committee also has made very good sugestions to improve the finances of the State. But our Finance Minister and the Government instead of heeding to the good advice given by the hon'ble members on this side, has committed the greatest folly of sticking still to the prohibition policy which is not only draining the money of the people but also destroying the morality of the people and consequently we are losing man power which is very valuable. We have repeatedly telling about the ill-effects of prohibition, but the Government seems to have a deaf ear to this.

Coming to the public debt of Government it was Rs. 101 crores in 1958 and in 1962 it went up to Rs. 185 crores. Within a span of 4 years the public debt has risen from Rs. 101 crores to Rs. 185 crores, nearly 84 crores. The Government goes on borrowing money without a clear idea about its capacity to repay. Perhaps Government is not very much worried about repayment because the burden of repayment will fall upon us after 1967 when the present Government will be replaced by a Government of the members on this side. So perhaps Government does not feel any hesitation to borrow money because it has no responsibility for repaying the debts. We have to pay nearly Rs. 6 crores as interest every year for the public debt. Over and above this, the Government of Mysore has also stood surety for Rs. 22.72 crores borrowed by various corporations and statutory bodies and co-operative societies. This is the position of the finances of our State.

Coming to the agricultural sector, we have not fully utilized our resources in this direction. We have also not utilized the help, financial as well as technical, given by the Centre for augmenting our production. We have according to the Economic Review, Mysore, 1962-63, nearly 33,30,000 acres of fallow lands about which the Government has not taken any concrete measures to make them cultivable. Also we have developed an irrigation potential of 64 lakhs acres out of which only in 34 lakh acres of land this potency is utilised and the remaining 30 lakh acres remain unused. I made it clear on previous occasions how a large tract of land has been remaining unused on the Right Bank Channel of the Tungabhadra river and how after flowing hundreds of miles, the same water which has been harnessed is allowed to flow back to the river at another end. That is the position about our irrigation.

We have been working this minor irrgation scheme on a percentage basis of return. We say that for Rs. 1,000 spent we must get so much return. This is not to be treated on a neccssary basis. We have to

(ಶ್ರೀ ಸಂಜೀವನಾಥ ಐಕಳ)

marshal our massive forces to get the maximum benefit from minor irrigation works and we cannot look at this from the point of view of the return that it will yield.

We have to see the potential forces are combined to get more production. From this point of view, minor irrigation works should be expedited. Next, I will come to industry. The Government have not taken adequate steps in regard to rehabilitation of handloom industry. This is one of the biggest industries in the State wherein nearly 2,29,000 looms are now working and nearly 10 lakhs of people are getting their livelihood. Sir, this industry now faces a serious crisis. The price of yarn is rising from Rs. 26 to Rs. 33, that is nearly 33 per cent rise from the previous rate, where as the price of cloth has not considerably incrased. Our esteemed Ex-Governor General of the Indian Union, Sri Rajagopalachari suggested that a particular variety of cloth should be assigned to handloom sector. That is not being done by this Government. I seriously suggest that certain variety of cloth should be only allotted to handloom section. Then I would like to touch upon Mineral Development Board. Mineral development is in a pellmell. There are several irregularities in the Board of Mineral Development. I understand that the rates offered for transport of mineral ore is much higher than what has been offered by some private people. The Board has got 120 lorries out of which more than 60 lorries are always on sick test. Most of the parts of these lorries are missing. Consequently, the Board had to depend upon other transport operators to carry their ores. That is a very sad state of affairs prevailing in the Board of Mineral Development. I will conclude by saying that Inter-State Seniority list of the officers should be completed as early as possible. That is one bugbear now prevailing and that should be immediately looked into.

ಶ್ರೀ ಆರ್. ಕೆಂಚಪ್ಪ.—(ಪಾವಗಡ) ಸ್ವಾಮೀ, 1964—65ರ ಆಯವ್ಯಯವನ್ನು ಸ್ವಾಗತಿಸುತ್ತ ನಾನು ಒಂದೆರಡು ಸಲಹೆಗಳನ್ನು ಇಲ್ಲಿ ಹೇಳಬಯಸುತ್ತೇನೆ.

ಈಗ ನಮ್ಮ ದೇಶದ ಜನತೆಗೆ ಬಹಳ ಪ್ರಾಮುಖ್ಯವಾದ ವಸ್ತುಗಳು ಏನಿವೆ ಎಂದರೆ ಆಹಾರ ಪದಾರ್ಥಗಳು. ಆಹಾರ ಪದಾರ್ಥಗಳನ್ನು ನಾವು ಹೆಚ್ಚಾಗಿ ಬೆಳೆಯಬೇಕಾಗಿದ್ದರೆ ಅದಕ್ಕಾಗಿ ನಮ್ಮ ದೇಶದ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ ನಮ್ಮ ಸರಕಾರವು ನಮ್ಮ ದೇಶದಲ್ಲಿ ಈ ವರ್ಷಕ್ಕೆ ಸುಮಾರು 2.67 ಲಕ್ಷ ಟನ್ನುಗಳಷ್ಟು ಆಹಾರ ಪದಾರ್ಥವನ್ನು ನಿರೀಕ್ಷಿಸುತ್ತಿದ್ದೇವೆ. ನಮ್ಮ ನಿರೀಕ್ಷಣೆಯಂತೆ ಈ ಬೆಳೆಗಳನ್ನು ಬೆಳೆಯಬೇಕಾದರೆ ಮುಖ್ಯವಾಗಿ ಬೇಕಾಗಿರತಕ್ಕದ್ದು ನೀರನ್ನು ಒದಗಿಸುವುದು ಸರಕಾರದ ಆದ್ಯ ಕರ್ತವ್ಯವಾಗಿದೆ. ದೇಶದ ಬಹು ಭಾಗ ಕ್ಷಾಮಪ್ರದೇಶವಾಗಿದ್ದು ಆ ಪ್ರದೇಶದಲ್ಲಿ ಜೀವನದಿಗಳಾಗಲೀ ಅಥವಾ ದೊಡ್ಡ ದೊಡ್ಡ ಕೆರೆಗಳಾಗಲೀ ಇರುವುದಿಲ್ಲ. ಅಂತಹ ಕಡೆ ಚಿಕ್ಕ ಚಿಕ್ಕ ಕೆರೆಗಳ ನಿರ್ಮಾಣ, ನಾದುರಸ್ತು ಆಗಿರುವ ಕೆರೆಗಳ ಜೀರ್ಣೋದ್ಧಾರ ಮುಖ್ಯ. ಅಲ್ಲಿರುವ ಜನಕ್ಕೆ ಮತ್ತು ರೈತರಿಗೆ ಸಹಸ್ರಾರು ಬಾವಿಗಳನ್ನು ಒದಗಿಸುವುದು ಅನಿವಾರ್ಯವಾಗುತ್ತದೆ. ಕ್ಷಾಮ ಪ್ರದೇಶದಲ್ಲಿ ಬಾವಿಗಳನ್ನು ಒದಗಿಸಿದರೆ ಆ ಪ್ರದೇಶದಲ್ಲಿ ವರ್ಷಪೂರ್ತಿ, ವಿವಿಧ ಕಾಲದಲ್ಲಿಯೂ ಬೆಳೆಯುವಂತಹ ಬೆಳೆಗಳನ್ನು ಬೆಳೆಯಬೇಕಾಗಿದ್ದರೆ ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದು ಬಹು ಪ್ರಾಮುಖ್ಯವಾದ ಸಮಸ್ಯೆಯಾಗಿರುತ್ತದೆ. ಅನೇಕ ಕಡೆ

ಗಳಲ್ಲಿ ಕ್ಷಾಮ ಪ್ರದೇಶಗಳಿರುವುದು ಎಲ್ಲರಿಗೂ ಕೂಡ ಗೊತ್ತಿರುವ ಹಾಗೆ, ನಮಗೆ ಒಂದು ಪಂಪು ಸೆಟ್ಟು ಸಿಕ್ಕಿದರೆ ಅನುಕೂಲ ಎನ್ನುತ್ತಾರೆ. ಆದರೆ ಅದಕ್ಕೆ ಬೇಕಾದ ವೈರುಗಳಿಲ್ಲ, ವೈರ್ಸ್‌ಗಳಿದ್ದರೆ ಸರ್ವಿಸ್ಸು ಕೊಟ್ಟಿಲ್ಲ. ಎಂದು ದೂರುಗಳನ್ನು ಮಾನ್ಯ ಸದಸ್ಯರು ಇಲ್ಲಿ ವ್ಯಕ್ತಪಡಿಸಿರುತ್ತಾರೆ. ಆದರೆ ಉಧಾಹರಣೆಯಾಗಿ ಹೇಳುವುದಾದರೆ ನಮ್ಮ ತುಮಕೂರು ಜಿಲ್ಲೆಯಲ್ಲಿ ಮಧುಗಿರಿ, ಪಾವಗಡ ಆಂಧ್ರದ ರಾಯಲ್ ಸೀಮೆಯ ಸರಹದ್ದಿನಲ್ಲಿರತಕ್ಕ ಪ್ರದೇಶಗಳು. ಈ ಪ್ರದೇಶಗಳಲ್ಲಿ ಹತ್ತು, ಹನ್ನೆರಡು ಇಂಚಿನಷ್ಟು ಮಳೆ ಬಂದರೆ ಅದೇ ಪುಣ್ಯ ಎಂದು ಹೇಳಬಹುದು. ಮಳೆಯಿಂದ ಬಂದ ನೀರನ್ನು ಶೇಖರಣೆ ಮಾಡುವುದಕ್ಕೆ ಕೆರೆಗಳ ಸಂಖ್ಯೆ ಬಹಳವಾಗಿ ಬೇಕಾಗಿರುತ್ತದೆ. ಅನೇಕರು ಕೆರೆಗಳು ಬೇಕೆಂದು ಇಲಾಖೆಯನ್ನು ಬೇಡಿದರೆ, ಈ ಪ್ರದೇಶಗಳು ಆಂಧ್ರ ಪ್ರದೇಶದ ಸರಹದ್ದಿನಲ್ಲಿರುವ ಅಗ್ರಿಮೆಂಟ್ ಜೋನಿನಲ್ಲಿ ಬರುತ್ತದೆ. ಎಂದು ಇಲ್ಲಿನ ಕೆರೆಗಳನ್ನು ದುರಸ್ತು ಮಾಡುವುದರ ಕಡೆಗೆ ಎಸ್ಟಿಮೇಟುಗಳನ್ನು ಮಾಡಿ ಸರಕಾರಕ್ಕೆ ಕಳುಹಿಸುವುದನ್ನೇ ಕೈಬಿಟ್ಟು ಬಿಡುತ್ತಾರೆ. ಆದರೆ ಒಂದೆರಡು ಮೈಲಿ ಹತ್ತಿರದಲ್ಲಿರುವ ಆಂಧ್ರದವರು ನಮ್ಮ ಸರಹದ್ದಿನ ಅಗ್ರಿಮೆಂಟಲ್ ಜೋನ್‌ನಲ್ಲಿದ್ದರೂ ಕೆರೆಗಳನ್ನು ನಿರ್ಮಿಸಿಕೊಂಡು ಬೇಕಾದ ಹಾಗೆ ಆಹಾರದ ಬೆಳೆಗಳನ್ನು ಬೆಳೆಯುತ್ತಿರುವುದನ್ನು ನಾವು ನೋಡುತ್ತಿರುತ್ತೇವೆ. ಇದನ್ನು ನಾವು ಆಗಾಗ್ಗೆ ಇಲ್ಲಿ ಪದೇ ಪದೇ ಹೇಳುತ್ತಿದ್ದರೂ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ನಮ್ಮಲ್ಲಿ ಉತ್ತರ ಪೆನ್ನಾರ್ ನದಿಯು ಹರಿಯುತ್ತದೆ. ಇದು ಗೋರಿಬಿದನೂರು ಬಳಿ ಹರಿಯುತ್ತಿದೆ. ಈ ತಾಲ್ಲೂಕಿನಲ್ಲಿ ಈ ನದಿ ಹರಿಯುತ್ತಿದ್ದರೂ ಕೂಡ ಇದರ ನೀರನ್ನು ಸರಿಯಾಗಿ ಉಪಯೋಗಿಸಿಕೊಂಡಿಲ್ಲ. ಆದರೆ ಇದರಿಂದಾಚೆಗೆ ಇರುವ ಹಿಂದೂಪುರದಲ್ಲಿ ಕೆರೆಗಳಿಗೆ ಫೀಡರುಚಾನಲ್ಲುಗಳನ್ನು ಮಾಡಿಕೊಂಡು ಜನಕ್ಕೆ ಅನುಕೂಲವಾಗುವಂತೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಆದರೆ ನಮ್ಮ ಪಾವಗಡ ತಾಲ್ಲೂಕಿನಲ್ಲಿ ಈ ಪೆನ್ನಾರ್ ನದಿಯು ಹರಿಯುತ್ತಿದ್ದರೂ ನೀರನ್ನು ಉಪಯೋಗಿಸುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಆಂಧ್ರ ಸರ್ಕಾರ ಧರ್ಮಾವರಂ ತಾಲ್ಲೂಕಿನಲ್ಲಿ ಸೇರೂರು ಪ್ರಾಜೆಕ್ಟನ್ನು ನಿರ್ಮಾಣ ಮಾಡಿಬಿಟ್ಟು ಲಕ್ಷಾಂತರ ಎಕರೆಗಳಿಗೆ ನೀರನ್ನುಪಯೋಗಿಸುತ್ತಿದ್ದಾರೆ. ತತ್ಪರಿಣಾಮವಾಗಿ ನಮ್ಮ ತಾಲ್ಲೂಕಿನ 200 ಎಕರೆಯಷ್ಟು ಭೂಮಿಯು ಮುಳುಗಡೆಯಾದರೂ ಇದುವರೆಗೂ ಅವರಿಗೆ ಕೊಡಬೇಕಾದ ಕಾಂಪನ್‌ಸೇಷನ್ನನ್ನು ಕೊಟ್ಟಿಲ್ಲ. ನಮ್ಮ ತಾಲ್ಲೂಕಿನ ನಾಗಲಮಡಿಕೆ ಹತ್ತಿರ. ಆಂಧ್ರ ಸರಕಾರದವರು ಅನುಮತಿ ಕೊಟ್ಟಿದ್ದಾರೆ. ನಮ್ಮ ಸರಕಾರದವರೇನೂ ಮಾಡುತ್ತಿಲ್ಲ. ಇದರ ಸರ್ವೆ ಆಗಿ ಪ್ರಾಜೆಕ್ಟು ಫೈನಲೈಸು ಆಗಿಲ್ಲ ಎಂದು ನಾನು ಒಂದು ಪ್ರಶ್ನೆ ಇಲ್ಲಿ ಕೇಳಿದಾಗ ಉತ್ತರ ಕೊಟ್ಟಿದ್ದಾರೆ. ಹಾಗಿದ್ದರೂ ಎಸ್ಟಿಮೇಟು ತಯಾರು ಮಾಡಬೇಕಾಗಿದ್ದರೆ ಆಂಧ್ರದ ನಮ್ಮ ಬಾರ್ಡರಿನಲ್ಲಿ ಆಂಧ್ರ ಸಬ ಮರ್ಷನ್ ಬರುವ ಹಾಗಿದ್ದರೆ ಅದನ್ನು ಬಿಟ್ಟು ಎಸ್ಟಿಮೇಟು ತಯಾರು ಮಾಡಬೇಕೆಂದು ವರ್ತಮಾನ ಕೇಳುತ್ತೇವೆ. ಸಬ್‌ಮರ್ಷನ್ ಬಂದರೂ ಸುಮಾರು 50—60 ಎಕರೆಗಳಷ್ಟು ಬರುತ್ತದೆ. ಆಂಧ್ರ ಪ್ರದೇಶದ 50 ಎಕರೆಯಷ್ಟು ಸಬ್‌ಮರ್ಷನ್ನು ಬರುವುದನ್ನು ತಪ್ಪಿಸಿ ಈ ಪ್ರಾಜೆಕ್ಟು ಮಾಡಿದರೆ, 1,500 ಎಕರೆಯಷ್ಟು ನೀರಾವರಿಗೆ ಅನಾನುಕೂಲವಾಗುತ್ತದೆ. ನೀರಾವರಿಯಾಗುವ ಪ್ರದೇಶ ಕಮ್ಮಿ ಬರುತ್ತದೆ ಎನ್ನುವ ಅಭಿಪ್ರಾಯವೂ ಇದೆ. ಅಂಧ್ರದ ಸೇರೂರು ಪ್ರಾಜೆಕ್ಟಿನಿಂದ ನಮ್ಮ ತಾಲ್ಲೂಕಿನಲ್ಲಿ ಸಬ್‌ಮರ್ಷನ್‌ಗೊಳಗಾಗಿರುವ ಇಲ್ಲಿನ ರೈತರಿಗಾಗಿ ಏನು ಪರಿಹಾರ ಕೊಡಬಹುದು ಎನ್ನುವುದನ್ನು ಕೂಲಂಕಷವಾಗಿ ಸರ್ಕಾರವೇ ಅಂಧ್ರ ಸರ್ಕಾರದೊಂದಿಗೆ ಆಲೋಚನೆ ಮಾಡಿ 50–60 ಎಕರೆಗಳಷ್ಟು ಆಂಧ್ರದಲ್ಲಿ ಮುಳುಗಡೆ ಬಂದರೂ ಇದರಿಂದ ಎಷ್ಟು ಎಕರೆಗೆ ನೀರು ಬರುತ್ತದೆ ಎನ್ನುವುದನ್ನು ನೋಡಿಕೊಂಡು ಎಸ್ಟಿಮೇಟು ಮಾಡಿ ಈ ಪ್ರಾಜೆಕ್ಟನ್ನು ನಿರ್ಮಾಣ ಮಾಡಿದರೆ ಸುಮಾರು 4,000 ಎಕರೆಗಳಷ್ಟು ನೀರಾವರಿ ಸೌಲಭ್ಯಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಸರಕಾರದವರು ಆಂಧ್ರದಲ್ಲಿ ಬರುವ 50 ಎಕರೆಯ ಸಬ್‌ಮರ್ಷನ್ ಕೈಬಿಡದೆ ಇದಕ್ಕೆ ಎಸ್ಟಿಮೇಟು ತಯಾರಿಸಿ ಮೂರನೇ ಯೋಜನೆಯಲ್ಲಿಯೇ ಈ ಪ್ರಾಜೆಕ್ಟು ಕಾಮಗಾರಿಯನ್ನು ತೆಗೆದುಕೊಳ್ಳಬೇಕೆಂದು ಇಲ್ಲಿ ಒತ್ತಾಯಪಡಿಸುತ್ತೇನೆ.

ಈಗ ಇನ್ನೊಂದು ವಿಚಾರ, ರೂರಲ್ ವಾಟರ್ ಸರಬರಾಯಿ ಬಗ್ಗೆ ನಮ್ಮಲ್ಲಿ ಮಳವಳ್ಳಿ ವೆಂಕಟಾಪುರ ಈ ಎರಡು ಗ್ರಾಮಗಳಿಗೆ ನೀರನ್ನು ಸರಬರಾಯಿ ಮಾಡಲು ಅಂದಾಜು ಇತ್ಯಾದಿಗಳನ್ನು ತಯಾರಿಸಿ ಕಳುಹಿಸಿ ಇಲ್ಲಿಗೆ 6—7 ವರ್ಷಗಳಾಯಿತು. ಜಿಲ್ಲಾ ಮಟ್ಟದಲ್ಲಿ ರೆಕಾರ್ಡುಗಳು ವರ್ಷಾನುಗಟ್ಟಲೆ ಚಲನೆಯಾಗದೆ ಅಲ್ಲಲ್ಲೇ ಮಲಗಿರುತ್ತವೆ. ಮಳವಳ್ಳಿಗೆ ಸಂಬಂಧಪಟ್ಟ ರೆಕಾರ್ಡು ಸಂಬಂಧಪಟ್ಟ ಗುಮಾಸ್ತೆಯ ಮೇಜಿನ ಮೇಲೆ 7—8 ತಿಂಗಳಿಂದ ನಿದ್ರೆ ಮಾಡುತ್ತಿದೆ ಎಂಬ ವಿಷಯವನ್ನು ತಿಳಿಸಲು ತುಂಬಾ ವಿಷಾದವಾಗುತ್ತದೆ. ಇಂತಿಷ್ಟು ಕಾಲಕ್ಕೆ ಜಾಸ್ತಿಯಾಗಿ ಯಾರ ಮೇಜಿನ ಮೇಲೂ ರೆಕಾರ್ಡುಗಳಿರಬಾರದೆಂದು ಒಂದು ನಿಬಂಧನೆಯಿದ್ದರೂ ಇಂಥಾ ವಿಷಯಗಳ ಬಗ್ಗೆ ಸರ್ಕಾರದವರು ಕೂಡಲೇ ನಿಗಾಕೊಡಬೇಕೆಂದು ಹೇಳುತ್ತೇನೆ.

(ಶ್ರೀ ಆರ್. ಕೆಂಚಪ್ಪ)

5 P.M.

ಇನ್ನು ಆರ್. ಡಿ. ಮತ್ತು ಎಲ್. ಡಿ. ಸ್ಕೀಮಿನಲ್ಲಿ ಬಾವಿಗಳನ್ನು ತೋಡಿಸುವ ಕೆಲಸ 5—6 ವರ್ಷಗಳಿಂದ ಇನ್ನೂ ಮುಗಿಯದೆ ಹಾಗೇ ನಿಂತಿದೆ. ಕೆಲವು ಬಾವಿಗಳಲ್ಲಿ ಬಂಡೆ ಬದ್ದು ಅವು ಪುನಃ ರೀಎಸ್ಟಿಮೇಟಾಗತಕ್ಕ ಪ್ರಸಂಗ ಬಂದಿದೆ. ಇದು ಕ್ಷಾಮಪೀಡಿತ ಪ್ರದೇಶ, ನೀರಿಗೆ ಯಾವಾಗಲೂ ಅಭಾವವಿರುವುದರಿಂದ ಸರ್ಕಾರದವರು ಈ ವಿಚಾರಕ್ಕೆ ಕೂಡಲೇ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಪಾವಗಡ ಟವನಿನಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಅಲ್ಲಿದ್ದ ಮಹಿಳಾ ಡಾಕ್ಟರಿಗೆ ವರ್ಗವಾಗಿ 6-7 ತಿಂಗಳಾಯಿತು. ಈ ವಿಷಯ ಆರೋಗ್ಯ ಸಚಿವರ ಗಮನಕ್ಕೆ ತರಲಾಗಿ ನಮ್ಮಲ್ಲಿ ಮಹಿಳಾ ಡಾಕ್ಟರ ಕೊರತೆಯಿದೆಯೆಂದರು. ಇದರಿಂದ ನಮ್ಮ ಸರ್ಕಾರದಲ್ಲಿ ಸ್ತ್ರೀಯರಿಗೆ ಪ್ರೋತ್ಸಾಹವಿಲ್ಲವೆ? ಅಲ್ಲಿಯ ಜನರ ಆರೋಗ್ಯ ಚಿಕಿತ್ಸೆಗೆ ಹಾಗೂ ಗರ್ಭಿಣಿಯರಿಗೆ ತುಂಬಾ ತೊಂದರೆಯುಂಟಾಗಿದೆ. ಮಹಿಳಾ ಡಾಕ್ಟರಿಲ್ಲದೆ ಕೆಲವು ಗರ್ಭಿಣೀ ಹೆಂಗಸರು ಸ್ಥಳದಲ್ಲೇ ಮೃತಪಟ್ಟಿರತಕ್ಕ ನಿದರ್ಶನಗಳು ಕೂಡ ಇವೆ. ಆದುದರಿಂದ ಸರ್ಕಾರದವರು ಕೂಡಲೇ ಅಲ್ಲಿಗೆ ಒಬ್ಬ ಮಹಿಳಾ ಡಾಕ್ಟರನ್ನು ಕಳುಹಿಸಬೇಕು. ಇಲ್ಲಿಗೆ ಹತ್ತಿರದಲ್ಲಿ ಯಾವ ಆಸ್ಪತ್ರೆಗಳೂ ಇಲ್ಲ. ಪಾವಗಡ ನಮ್ಮ ಪ್ರದೇಶದ ಇತರ ಭಾಗಗಳಿಗೆ 50—60 ಮೈಲಿ ದೂರವಿದೆ. ಹಣವಂತರಾದರೇನೋ ಅವರು ದೂರ ಹೋಗಿ ಚಿಕಿತ್ಸೆ ಪಡೆಯಬಹುದು, ಬಡವರಿಗೆ ಸಾಧ್ಯವಿಲ್ಲ. ಆದ್ದರಿಂದ ಆದಷ್ಟು ಬೇಗ ಅಲ್ಲಿಗೆ ಡಾಕ್ಟರನ್ನು ವರ್ಗಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸಕ್ಕೆ ಬಂದರೆ—ಈಗ ಕಂಪಲ್‌ಸರಿ ಎಜುಕೇಷನ್ ಜಾರಿಗೆ ಬಂದಿದೆ. ಅನೇಕ ಸ್ಕೂಲುಗಳಲ್ಲಿ ಉಪಾಧ್ಯಾಯರಿಲ್ಲ. ಸಾಲದ್ದಕ್ಕೆ ಹಿಂದಿಯನ್ನು ಈಗ ಅಪ್ಪರ್ ಪ್ರೈಮರಿ, ಮಿಡಲ್ ಮತ್ತು ಎನ್. ಟಿ. ಎಂ. ಸ್ಕೂಲುಗಳಲ್ಲಿ ಹಿಂದಿಯನ್ನು ಕಂಪಲ್‌ಸರಿ ಮಾಡಿದ್ದಾರೆ. ಆದರೆ ಹಿಂದಿ ಪಾಠಹೇಳತಕ್ಕ ಉಪಾಧ್ಯಾಯರುಗಳೇ ಇಲ್ಲ. ಹೀಗಾದರೆ ನಮ್ಮ ವಿದ್ಯಾಭ್ಯಾಸದ ಗತಿ ಏನು! ಆದಷ್ಟು ಬೇಗ ಸರ್ಕಾರದವರು ಹಿಂದೀ ಉಪಾಧ್ಯಾಯರನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹರಿಜನಾಭಿವೃದ್ಧಿ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಹಿಂದೆ ಏನಾಗುತ್ತಿತ್ತು, ಈಗೇನಾಗುತ್ತಿದೆ ಎಂಬುದನ್ನು ನೋಡಿದರೆ ನಮ್ಮ ಜನಾಂಗಕ್ಕೆ ಹಿಂದೆ ಅನೇಕ ರೀತಿಯಲ್ಲಿ ಎಕನಾಮಿಕ್ ಏಯ್ಡನ್ನು ಕೊಡಲಾಗುತ್ತಿತ್ತು. ಮೆರಿಟ್ ಸ್ಕಾಲರ್‌ಷಿಪ್ಪನ್ನೂ ಕೊಡುತ್ತಿದ್ದರು. ಯಾರಾದರೂ ಜರ್ನಲ್ ಇತ್ಯಾದಿಗಳನ್ನು ಹೊರಡಿಸುತ್ತಿದ್ದರೆ ಅವರಿಗೂ ಗ್ರ್ಯಾಂಟನ್ನು ಕೊಡುತ್ತಿದ್ದರು. ಆದರೆ ಈಗಿರತಕ್ಕ ನಮ್ಮ ಮಂತ್ರಿಗಳು ಪೋರ್ಟ್‌ಫೋಲಿಯೋ ವಿಚಾರದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯ ಬಂದಿದೆ ಎಂಬ ಅಂಶವನ್ನು ಅರಿತು, ಅವರು ಹರಿಜನರ ಕಲ್ಯಾಣಕ್ಕಾಗಿ ತಾಯಿ ಮಕ್ಕಳನ್ನು ಸಾಕುವಂತೆ ಅಷ್ಟು ಹೆಚ್ಚಿನ ನಿಗಾವಣೆಯಿಂದ ನೋಡಿಕೊಳ್ಳುತ್ತಿದ್ದೇನೆಂದು ಹಿಂದೆ ಈ ಸಭೆಯಲ್ಲಿ ಹೇಳಿದರು. ಇವರು ಹೇಳುತ್ತಿರುವುದನ್ನು ನೋಡಿದರೆ ಹೊಟ್ಟೆಗೆ ಹಿಟ್ಟನ್ನು ಕೇಳಬೇಡ, ಮೈಗೆ ಬಟ್ಟೆಯನ್ನು ಕೇಳಬೇಡ, ನಿಮ್ಮನ್ನು ಪಂಜರದಲ್ಲಿಟ್ಟು ಗಿಳಿಸಾಕಿದಂತೆ ಸಾಕುತ್ತೇನೆಂದು ಹೇಳುವಂತಿದೆ. ಇಷ್ಟನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಭೈರಪ್ಪಾಜಿ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, ಬಹಳ ಚಮತ್ಕಾರದಿಂದ ಅಂಕೀ ಅಂಶಗಳನ್ನು ಜೋಡಿಸಿ ನಮ್ಮ ಮುಂದೆ ? 7 ಲಕ್ಷ ರೂಪಾಯಿಗಳ ಒಂದು ಉಳಿತಾಯ ಮುಂಗಡ ಪತ್ರವನ್ನು ನಮ್ಮ ಮಂತ್ರಿಗಳು ಇಟ್ಟಿದ್ದಾರೆ. ಇದೇ ನಮ್ಮ ಮಂತ್ರಿಗಳು ಇನ್ನೊಂದು ಕಡೆ ಹೇಳುತ್ತಾರೆ. ಮುಂದಿನ ಎರಡು ವರ್ಷಗಳು ಬಹಳ ಕ್ಲಿಷ್ಟಕರವಾಗಿರುತ್ತವೆ ಎಂದು. ಮತ್ತೊಂದು ಕಡೆ ಇದರ ಭಾಷಣದಲ್ಲಿ ಈ ಯೋಜನೆಗಳ ಬಗ್ಗೆ ಮುಂದಿನ ಎರಡು ವರ್ಷಗಳಲ್ಲಿ 50-60 ಕೋಟಿ ರೂಪಾಯಿಗಳು ಖೋತಾ ಬೀಳಬಹುದು ಎಂದು ಹೇಳುತ್ತಿದ್ದಾರೆ. ಹೀಗೆಲ್ಲಾ ವಿವಾದಾಸ್ಪದವಾದ ಅಂಕೀ ಅಂಶಗಳನ್ನು ಕೊಟ್ಟು ಇರುವುದರಿಂದ ಇದು ನಿಜವಾಗಿಯೂ ಒಂದು ಉಳಿತಾಯದ ಮುಂಗಡ ಪತ್ರವಲ್ಲ, ಇದು ಖೋತಾ ಮುಂಗಡ ಪತ್ರವೆಂದು ಮನದಟ್ಟುಮಾಡಿಕೊಳ್ಳಲು ಸಾಕಷ್ಟು ಅವಕಾಶ ಇದೆ. ಈ ಮುಂಗಡ ಪತ್ರದಲ್ಲಿ ದೇಶದ ಬೆನ್ನು ಮೂಳೆಯಾಗಿರತಕ್ಕ ರೈತನ ಉದ್ಧಾರಕ್ಕಾಗಿ ಯಾವ ಒಂದು ಪ್ರಾಮುಖ್ಯ ಕಾರ್ಯವನ್ನೂ ಕೈಗೊಳ್ಳತಕ್ಕ ಅಂಶಗಳು ಈ ಮುಂಗಡ ಪತ್ರದಲ್ಲಿದ್ದಂತೆ ಕಂಡುಬರುತ್ತಿಲ್ಲ. ಈ ಬಗ್ಗೆ ಯಾವ ಹಣವನ್ನೂ ಇದರಲ್ಲಿ ಮೀಸಲಾಗಿಟ್ಟಿಲ್ಲ. ರೈತನ ಸ್ಥಿತಿಯನ್ನು ಉತ್ತಮಗೊಳಿಸಿ, ಅವನ ಕಲ್ಯಾಣವನ್ನು ಸಾಗಿಸಲು ಸಕಲ ರೀತಿಯಲ್ಲೂ ಸರ್ಕಾರ ಆತನಿಗೆ

ನೆರವನ್ನು ನೀಡಬೇಕಾಗಿದೆ. ರೈತ ಅತೃಪ್ತಿಯಿಂದಿದ್ದರೆ ದೇಶದಲ್ಲಿ ಅಶಾಂತಿ ನೆಲೆಸುತ್ತದೆ ಆದ್ದರಿಂದ ಸರ್ಕಾರ ರೈತನ ಹಿತವನ್ನು ಸಾಧಿಸುವುದರ ಮೂಲಕ ದೇಶದಲ್ಲಿ ಒಂದು ಒಳ್ಳೇ ವಾತಾವರಣವನ್ನುಂಟುಮಾಡುವುದರ ಜೊತೆಗೆ, ದೇಶದಲ್ಲಿ ಶಾಂತಿ ನೆಲೆಸಲು ಅವಕಾಶವಾಗುತ್ತದೆ. ಆದರೆ ಅಂಥ ಯಾವ ಒಂದು ಅವಕಾಶವನ್ನೂ ಈ ಮುಂಗಡ ಪತ್ರದಲ್ಲಿ ಮಾಡಿದಂತೆ ಕಾಣುಬರುವುದಿಲ್ಲ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ವ್ಯವಸಾಯಗಾರರು ತಮ್ಮ ಒಂದು ವ್ಯವಸಾಯ ಒಂದನ್ನೇ ನಂಬಿಕೊಂಡು ಸುಖದಿಂದ ಇರಬೇಕೆಂದರೆ ಅದು ಖಂಡಿತ ಸಾಧ್ಯವಿಲ್ಲ. ಇದಕ್ಕೆ ಕನ್ನಡದಲ್ಲಿ ಒಂದು ಗಾದೆಯಿದೆ. ಬೇಸಾಯ, ವ್ಯವಸಾಯ, ನೀಸಾಯ ಎಂದು ಹೇಳಿ ಒಂದು ಗಾದೆ ಇದೆ. ವ್ಯವಸಾಯಗಾರನು ಇಡೀ ದಿನವೆಲ್ಲಾ ಕತ್ತೆಯಹಾಗೆ ದುಡಿದು ಜೀವನದಲ್ಲಿ ಶಾಂತಿ ಸಮಾಧಾನಗಳಿಲ್ಲದೆ ತೊಳಲಿ ಬಳಲಿ ಬೆಂಡಾಗಿದ್ದಾನೆ. ಹಾಗೂ ಬಹಳ ಬಡತನದಲ್ಲಿದ್ದಾನೆ. ಇಂಥಾ ರೈತನಬಗ್ಗೆ ಸರ್ಕಾರ ಹೆಚ್ಚಿನ ನಿಗಾಕೊಡದಿರುವುದು ಬಹಳ ವಿಷಾದನೀಯ. ನಮ್ಮ ಸರ್ಕಾರದವರು ಅನೇಕ ಸಂದರ್ಭಗಳಲ್ಲಿ ರೈತನ ಹಿತವನ್ನು ಸಾಧಿಸಬೇಕೆಂದು ಹೇಳುತ್ತಿರುತ್ತಾರೆ. ಆದರೆ ಅದನ್ನು ಕೃತಿಯಲ್ಲಿ ತೋರಿಸುವುದಿಲ್ಲ. ವ್ಯಾಪಾರಸ್ಥರಿಗೆ, ಕೈಗಾರಿಕಾ ಮಾಲೀಕರುಗಳಿಗೆ ಅನೇಕ ಸೌಲತ್ತುಗಳನ್ನು ಕೊಡುತ್ತಿದ್ದಾರೆ. ಆದರೆ ಮೂಳೆ ಮುರಿದುಬಿದ್ದಿರತಕ್ಕ ರೈತನಮೇಲೆ ಲೆಕ್ಕವಿಲ್ಲದಷ್ಟು ತೆರಿಗೆಗಳನ್ನು ಹಾಕುತ್ತಿದ್ದಾರೆ. ಹೀಗೆಲ್ಲಾ ಇವನಮೇಲೆ ಹೊರಲಾರದ ತೆರಿಗೆಗಳನ್ನು ಹಾಕಬಾರದೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯಾಖಾತೆಯನ್ನು ತೆಗೆದುಕೊಂಡರೆ, ಕೆಲವೊಮ್ಮೆ ನಮ್ಮ ಮಂತ್ರಿಗಳು ಸಂತೋಷ ಸಾಗರದಲ್ಲಿರುವಾಗ ಒಂದೊಂದು ಹೇಳಿಕೆಯನ್ನು ಕೊಡುತ್ತಾರೆ. ಅದರಿಂದ ಇಡೀ ದೇಶದಲ್ಲಿರತಕ್ಕ ಜನರ ಮನಸ್ಸೆಲ್ಲಾ ಕದಡಿಹೋಗುತ್ತದೆ. ಆಗಾಗ್ಗೆ ಅವರು ಅಂಥಾ ಮಾತುಗಳನ್ನು ಆಡುತ್ತಿದ್ದಾರೆ.

ಅದಕ್ಕೆ ಉದಾಹರಣೆ ಮೊನ್ನೆತಾನೇ ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ಕೊಟ್ಟಿದ್ದಾರೆ. 11ನೇ ತರಗತಿಯನ್ನು ಹೈಸ್ಕೂಲು ಮಟ್ಟದಲ್ಲಿ ಪ್ರಾರಂಭ ಮಾಡುತ್ತೇವೆಂದು. ಸ್ವಾಮಿ, ಈ ಪ್ರಯತ್ನ ಮಾಡಬೇಕಾದರೆ ಮಾನ್ಯ ಮಂತ್ರಿಗಳು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಆ ರೀತಿ ಪ್ರಯತ್ನ ಮಾಡತಕ್ಕ ಈ ದೇಶದಲ್ಲಿ ಸೂಕ್ತವಾದಂಥ, ಕ್ರಮಬದ್ಧವಾದಂಥ ಸಲಕರಣೆಗಳು, ಪಾಠ ಹೇಳುವ ಉಪಾಧ್ಯಾಯರು—ಇವರೆಲ್ಲರನ್ನೂ ಸರ್ಕಾರದವರು ಒದಗಿಸುವುದಕ್ಕೆ ಸಾಧ್ಯವೇ ಎನ್ನುವುದನ್ನು ಮುಂಚೆ ಮನನ ಮಾಡಿಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ಈ ದೇಶದಲ್ಲಿ ಹಳ್ಳಿಗಳಲ್ಲಿಯೂ ಇನ್ನುಮುಂದೆ ಕಾಲೇಜುಗಳನ್ನು ತೆರೆಯುತ್ತೇವೆಂದು ಹೇಳಿದ್ದನ್ನು ಕೇಳಿ ನಮಗೆ ಬಹಳ ಸಂತೋಷವಾಯಿತು. ಆದರೂ ಸ್ವಲ್ಪ ಅನುಮಾನವಿತ್ತು. ಪಟ್ಟಣಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ವಿದ್ಯಾರ್ಥಿಗಳು ಬಾರದೆಯೇ ತಮ್ಮ ಎಲ್ಲಾ ವಿದ್ಯಾಭ್ಯಾಸವನ್ನು ಹಳ್ಳಿಯಲ್ಲಿಯೇ ಮುಗಿಯಬೇಕೆಂಬ ಆಶೆ ಆಕಾಂಕ್ಷೆಯನ್ನು ವ್ಯಕ್ತಪಡಿಸಿದ್ದರೂ ಅದರಬಗ್ಗೆ ಸರಿಯಾದ ವಿದ್ಯಾಭ್ಯಾಸ ಕೊಡದೆ, ಯಾವ ಒಂದು ರಿಫಾರ್ಮ್‌ಮಾಡದೆ, ಏನೂ ರೂಪುಗೊಳಿಸದೆ ಹೋದರೆ ನಿಜವಾಗಿ ಆದರಿಂದ ತೊಂದರೆಯುಂಟಾಗುತ್ತದೆಂಬುದು ಸರ್ವಮಾನ್ಯವೆಂಬುದಾಗಿ ನಾನು ಹೇಳುತ್ತೇನೆ. ಶ್ರೀ ಚಾಗ್ಲಾರವರು ಮೊನ್ನೆತಾನೇ ಯಾವ ಸರ್ಕಾರವೇಆಗಲೀ ಯಾವ ಮೆಷಿನರಿಯನ್ನು ಕೊಟ್ಟರೂ ಏನೋ 5 ಲಕ್ಷ, 10 ಲಕ್ಷ, ಕೋಟಿ ಹೋಗಬಹುದು, ಬರಬಹುದು. ಆದರೆ ಪ್ರಜೆಗಳ ಮನ್ನಣೆ, ಗೌರವಕ್ಕೆ ಪಾತ್ರರಾಗಬೇಕಾದರೆ ಅವರ ಮುಂದಿನ ಮಾರ್ಗ ವಿದ್ಯಾಭ್ಯಾಸದ ಮೂಲಕವೇ, ಅದರಲ್ಲೇನಾದರೂ ತಪ್ಪುದಾರಿ ಹಿಡಿದರೆ ಖಂಡಿತವಾಗಿ ದೇಶಕ್ಕೇ ಅಪಾಯ. ಅದನ್ನು ಕೂಡಲೇ ಸರಿಪಡಿಸಬೇಕು. ಅದು ಬಹಳ ಕಷ್ಟಕರವಾದ ಸಂಗತಿಯೆಂದು ಹೇಳಿದ್ದಾರೆ. ಆದ್ದರಿಂದ ಇಂಥಾದ್ದನ್ನು ಮಾಡಬೇಕಾದರೆ ಬಹಳ ಹಿಂದುಮುಂದು ಯೋಚನೆಮಾಡಿ, ಇದರಿಂದ ಒಳ್ಳೆಯ ಪರಿಣಾಮವೆಷ್ಟು, ದುಷ್ಪರಿಣಾಮವೆಷ್ಟು, ಇದನ್ನು ಕಾರ್ಯಗತ ಮಾಡುವುದಕ್ಕೆ ಇವರಿಗೆ ಶಕ್ತಿ ಇದೆಯೇ ಇಲ್ಲವೇ ಎಂಬುದನ್ನೆಲ್ಲಾ ವಿಶದವಾಗಿ ಪರಿಶೀಲಿಸಬೇಕೆಂದು ನಾನು ಈ ಸಂದರ್ಭದಲ್ಲಿ ಅರಿಕೆ ಮಾಡುತ್ತೇನೆ.

ಇನ್ನು ಅಮೇರಿಕಾದ ಕೇರ್ ಸಂಸ್ಥೆಯವರು ಸುಮಾರು 5 ಲಕ್ಷ ರೂಪಾಯಿಗಳನ್ನು ಮಕ್ಕಳ ಮಧ್ಯಾಹ್ನ ಉಪಾಹಾರವನ್ನು ಏರ್ಪಡಿಸುವುದಕ್ಕಾಗಿ ಕೊಟ್ಟಿದ್ದಾರೆಂದು ಹೇಳಿದರು. ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೇವಲ ಇಬ್ಬರು ಉಪಾಧ್ಯಾಯರುಗಳಿರುತ್ತಾರೆ. ಯಾವ್ಯಾವ ಪಾಠಶಾಲೆಗಳಿಗೆ ಇಂತಹ ಸೌಕರ್ಯವನ್ನು ಕಲ್ಪಿಸಿಕೊಟ್ಟಿದ್ದೀರೆಂಬುದು ಗೊತ್ತಿಲ್ಲ. ಒಂದುವೇಳೆ ಈ ಸೌಕರ್ಯವನ್ನು ಯಾವುದಾದರೊಂದು ಪಾಠಶಾಲೆಗೆ ಒದಗಿಸಿದರೆ ಪಾತ್ರೆಗಳನ್ನು ತೆಗೆದುಕೊಂಡು ಬರುವುದಕ್ಕೆ ಮತ್ತು ಸೌದೆ ತರುವುದಕ್ಕೆ ಇನ್ನೊಬ್ಬರಹತ್ತಿರ ಹೋಗಬೇಕು. ಈ ಮಧ್ಯೆ ತನ್ನ ದೈನಂದಿನ ಪಾಠಗಳ ಕಾರ್ಯಕ್ರಮ ಪಟ್ಟಿಯನ್ನು ಮಾಡಿಕೊಳ್ಳಬೇಕು. ಇದರಿಂದ ತಾನು ಹುಡುಗರಿಗೆ ಪಾಠ ಬೋಧಿಸುವುದನ್ನು ಬಿಟ್ಟು ಈ ಮಧ್ಯಾಹ್ನ ಉಪಾಹಾರ ಕೆಲಸಗಳಿಗೆ ತನ್ನ ಕಾಲವನ್ನೆಲ್ಲಾ ಮೀಸಲಾಗಿಡುತ್ತಾನೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನೆಲ್ಲಾ ಕೂಲಂಕಷ

(ಶ್ರೀ ಟಿ. ಬೈರಪ್ಪಾಜಿ)

ವಾಗಿ ವಿಮರ್ಶೆ ಮಾಡಬೇಕು. ಆದ್ದರಿಂದ ಕೆಲವು ಸ್ಥಳಗಳಿಗೆ ಅವರೇ ಖುದ್ದಾಗಿ ಭೇಟಿಕೊಟ್ಟು ಇದರ ಪರಿಣಾಮ ಕೆಟ್ಟದ್ದೇ ಅಥವಾ ಒಳ್ಳೆಯದೇ ಎಂಬುದನ್ನು ದಯವಿಟ್ಟು ವಿಮರ್ಶೆಮಾಡಿ ಸರಿಪಡಿಸಬೇಕೆಂದು ನಾನು ಅವರಲ್ಲಿ ಭಿನ್ನೈಸಿಕೊಳ್ಳುತ್ತೇನೆ.

ಇನ್ನು ಪ್ರೊಹಿಬಿಷನ್ ವಿಚಾರ. ಇದು ಭ್ರಷ್ಟಾಚಾರಕ್ಕೆ, ದೇಶದ ಜನತೆಯನ್ನು ಒಂದು ಅನೀತಿ ಮಾರ್ಗಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಅವಕಾಶಕೊಟ್ಟಿದೆ ಈ ಒಂದು ಮಾರ್ಗವನ್ನು ಸರಿಪಡಿಸಬೇಕಾದರೆ ದೇಶದಲ್ಲಿ ದಿನೇದಿನೇ ಬೆಳೆಯುತ್ತಿರುವ ಇಂತಹ ಗೃಹ ಕೈಗಾರಿಕೆಯನ್ನು ಕಡಿಮೆ ಮಾಡಬೇಕಾಗಿದೆ, ಯಾವುದಾದರೂ ಒಂದು ನೀತಿಯನ್ನಾದರೂ ಅನುಸರಿಸಬೇಕು ಇಲ್ಲವೇ ಪಾನ ನಿರೋಧವನ್ನು ತೆಗೆಯಬೇಕು, ಇಲ್ಲವೇ ಕಟ್ಟುನಿಟ್ಟಾದ ಕಾನೂನನ್ನು ಪರಿಪಾಲನೆ ಮಾಡಬೇಕು. ಈ ಪ್ರೊಹಿಬಿಷನ್ ವಿಚಾರದಲ್ಲಿ ಜನತೆ ದಿನೇದಿನೇ ತಮ್ಮ ನೀತಿಯನ್ನು ಬಿಡುತ್ತಿದ್ದಾರೆ. ಕುಡಿತ, ಕಳ್ಳಭಟ್ಟಿ ವ್ಯಾಪಾರ ದಿನೇದಿನೇ ಹೆಚ್ಚಾಗುತ್ತಿದೆ. ಭ್ರಷ್ಟಾಚಾರವೂ ಹೆಚ್ಚಾಗುತ್ತಿದೆ. ಅಧಿಕಾರಿಗಳಲ್ಲಿಯೂ ನೈತಿಕ ಮಟ್ಟದ ಜವಾಬ್ದಾರಿ ಕಡಿಮೆಯಾಗುತ್ತಿದೆ. ಈ ಒಂದು ಅಭಿಪ್ರಾಯದಲ್ಲಿ ನಮ್ಮ ಸರ್ಕಾರದವರ ಮುಖ್ಯ ಗಮನವನ್ನು ಸೆಳೆಯ ಕೇಂದ್ರ ಸರ್ಕಾರದವರು ಒಂದು ಸಮಿತಿಯನ್ನು ಇತ್ತೀಚೆಗೆ ರಚನೆ ಮಾಡಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ತಿಳಿಸಿ ಇದನ್ನು ತೆಗೆಯಬೇಕೇ, ಬೇಡವೇ ಎಂದು ಕೇಳಿ ಚರ್ಚೆ ಮಾಡತಕ್ಕ ಬಹುಮುಖ್ಯವಾದಂಥ ಅಂಶವಾಗಿದೆ, ಎಂಬುದಾಗಿ ಹೇಳಬೇಕು ಆದ್ದರಿಂದ ಎಲ್ಲಾ ಶಾಲಾ ಕಾಲೇಜುಗಳಲ್ಲಿಯೂ ಮತ್ತು ಮುಖ್ಯಮುಖ್ಯ ಸಂಸ್ಥೆಗಳಲ್ಲಿಯೂ ಈ ವಿಷಯವನ್ನು ಚರ್ಚೆಗೋಸ್ಕರ ಇಟ್ಟು ಆ ಒಂದು ಚರ್ಚೆಯಲ್ಲಿ ಇದರಬಗ್ಗೆ ಏನು ಅಭಿಪ್ರಾಯ ಬರುತ್ತದೆಂಬುದನ್ನು ನಮ್ಮ ಸರ್ಕಾರದವರು ಮನಸ್ಸಿಗೆ ತಂದುಕೊಂಡರೆ ಆಗ ಇದು ಇರಬೇಕೇ ಬೇಡವೇ ಎಂಬುದನ್ನು ಯೋಚನೆಮಾಡಬಹುದು. ಇದರಿಂದ ದೇಶದ ಜನತೆಯ ಮನಸ್ಸು ಸ್ವಲ್ಪಮಟ್ಟಿಗೆ ಕೆಡಿದೆ. ಯಾವ ಸರ್ಕಾರ ಇದನ್ನು ತಂದಿದ್ದಾರೋ ಎಂದು ಅನೇಕರು ಮುಂದಗತಿಯಲ್ಲಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ತಮ್ಮ ಒಂದು ಡೋಲಾಯಮಾನವಾದ ನೀತಿಯನ್ನು ಬದಲಾಯಿಸಬೇಕು. ಎಂಬುದಾಗಿ ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಂಡು ನನಗೆ ಈ ದಿವಸ ಇಷ್ಟುಹೊತ್ತು ಮಾತನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ರುದ್ರಪ್ಪ (ಕಲ್ಗಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಹಣಕಾಸಿನ ಸಚಿವರು ನಮ್ಮ ಮುಂದೆ ಮಂಡಿಸಿರುವ 1964—65ನೇ ಸಾಲಿನ ಬಡ್ಜೆಟ್ಟನ್ನು ನಾನು ಸ್ವಾಗತಿಸುತ್ತೇನೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಿಸಿದ ಪ್ರಗತಿಯನ್ನೂ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಯ ಎರಡು ವರ್ಷಗಳ ಅವಧಿಯಲ್ಲಿ ಸಾಧಿಸಿದ ಪ್ರಗತಿಯನ್ನೂ ನೋಡುವುದಾದರೆ ಒರಿನಜಿಲ್ ಯೋಜನೆಯಲ್ಲಿ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೋ ಅವುಗಳನ್ನು ಸ್ವಲ್ಪ ಕಡಮೆ ಮಾಡಿದ್ದಾರೆ. ಈಗ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ತರಹ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಸರ್ಕಾರದವರು ಒಂದು ಭಾಗದಲ್ಲಿ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದರೂ, ಇನ್ನೊಂದು ಕಡೆ ನೂರಾರು ರೂಪಾಯಿಗಳನ್ನು ಖರ್ಚುಮಾಡುವಂತಿಲ್ಲ. ಒಂದು ಭಾಗದಲ್ಲಿ ಅಭಿವೃದ್ಧಿಕಾರ್ಯಗಳು ಬಹಳ ಭರದಿಂದ ನಡೆದರೆ ಇನ್ನೊಂದು ಭಾಗದಲ್ಲಿ ಅಭಿವೃದ್ಧಿ ಕಾರ್ಯಗಳು ಬಹಳ ಕುಂಠಿತವಾಗಿವೆ. ಹಿಂದುಳಿದಭಾಗವಾದ ಹೈದರಾಬಾದ್ ಕರ್ನಾಟಕವನ್ನು ಮುಂದುವರಿದ ಬೇರೆ ಭಾಗಗಳ ಮಟ್ಟಕ್ಕೆ ತಂದಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಮೈನರ್ ಇರಿಗೇಷನ್ ಸಂಬಂಧದಲ್ಲಿ ಕೆಲವುಕಡೆ ಸರ್ಕಾರದವರು ಒಳ್ಳೆಯ ಉತ್ತಮವಾದ ಕೆಲಸಗಳನ್ನು ಸಾಧಿಸಿದ್ದಾರೆ. ಆದರೆ ಹೈದರಾಬಾದ್ ಕರ್ನಾಟಕದಲ್ಲಿ ಮೈನರ್ ಇರಿಗೇಷನ್ ಸಂಬಂಧದಲ್ಲಿ ಅಷ್ಟು ಹೆಚ್ಚಿನ ಕೆಲಸಕಾರ್ಯಗಳನ್ನು ತೆಗೆದುಕೊಂಡಿಲ್ಲ ಎಂದು ನಾನು ಹೇಳಬಯಸುತ್ತೇನೆ. 1963-64ನೇ ಸಾಲಿನಲ್ಲಿ ಸರ್ಕಾರದವರು ಖರ್ಚುಮಾಡಿರತಕ್ಕ ಅಂಕಿ ಅಂಶಗಳನ್ನು ನೋಡುವುದಾದರೆ ಹೈದರಾಬಾದ್ ಕರ್ನಾಟಕದಲ್ಲಿ ಬಹಳ ಕಡಿಮೆ ಹಣವನ್ನು ಖರ್ಚು ಮಾಡಿದ್ದಾರೆ ಎಂದು ತಿಳಿಯಬಯಸುತ್ತೇನೆ. ಬೆಂಗಳೂರು ಸರ್ಕಲ್‌ನಲ್ಲಿ ನೋಡಿದರೆ ಬಹಳ ಹಣ ಖರ್ಚಾಗಿದೆ ಎಂದು ಸರ್ಕಲ್‌ವೈಜ್ ಕೊಟ್ಟಿರತಕ್ಕ ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಬೆಂಗಳೂರು ಸರ್ಕಲ್‌ನಲ್ಲಿ 115 ಲಕ್ಷರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಮೈಸೂರಿನಲ್ಲಿ 76 ಲಕ್ಷರೂಪಾಯಿಗಳನ್ನು, ಶಿವಮೊಗ್ಗದಲ್ಲಿ 41 ಲಕ್ಷ ರೂಪಾಯಿಗಳನ್ನು, ಬೆಳಗಾಮ್ ಸರ್ಕಲ್‌ನಲ್ಲಿ 30 ಲಕ್ಷ ರೂಪಾಯಿಗಳನ್ನು, ಧಾರವಾಡದಲ್ಲಿ 21 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆದರೆ ಹೈದರಾಬಾದ್ ಕರ್ನಾಟಕದಲ್ಲಿ ಬೀದರ್, ಗುಲ್ಬರ್ಗ ಮತ್ತು ರಾಯಚೂರು ಈ ಮೂರು

ಜಿಲ್ಲೆಗಳಲ್ಲಿ 20-25 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಈ ಅಂಕಿ ಸಂಖ್ಯೆಗಳನ್ನು ನೋಡಿದರೆ ಹೈದರಾಬಾದ್ ಕರ್ನಾಟಕವನ್ನು ಅಲಕ್ಷ್ಯ ಮಾಡಿದ್ದಾರೆಂದು ನಾನು ಹೇಳುತ್ತೇನೆ. 1964-65ನೇ ಸಾಲಿನ ಆಯವ್ಯಯ ಪಟ್ಟಿಯನ್ನು ನೋಡುವುದಾದರೆ ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಮೈನರ್ ಇರಿಗೇಷನ್ನಿಗೆ ಹೆಚ್ಚು ಹಣವನ್ನು ಒದಗಿಸಿಲ್ಲ. ಕೇವಲ 10 ಕೆಲಸಗಳನ್ನು ಮಾತ್ರ ಈ ವರ್ಷದ ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರೆ. ಆ ಕೆಲಸಗಳು ಸಹ ಹಳೆಯ ಕೆಲಸಗಳು. ಈ ವರ್ಷ ಹೊಸಕೆಲಸಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ. ಎಂದು ನಾನು ಹೇಳುತ್ತೇನೆ. ಗುಲ್ಬರ್ಗ ಜಿಲ್ಲೆ ಬಹಳ ಹಿಂದುಳಿದ ಪ್ರದೇಶ. ಅದು ಮುಂದಕ್ಕೆ ಬರಬೇಕಾದರೆ ಅಲ್ಲಿ ಹೆಚ್ಚು ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದರೂ ಕೂಡ ಈ ವರ್ಷ ಬಡ್ಜೆಟ್ಟಿನಲ್ಲಿ ಒಂದು ಕೆಲಸವನ್ನೂ ಹೊಸದಾಗಿ ಸೇರಿಸಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಇದೇ ರೀತಿ ರಸ್ತೆಗಳ ವಿಷಯವನ್ನು ಹೇಳುವುದಾದರೂ ಕೂಡ ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ರೋಡುಗಳು ಬಹಳ ಕಡಿಮೆ. ಗುಲ್ಬರ್ಗಾದಲ್ಲಿ ರಸ್ತೆಗಳಾಗಿರುವುದು 11 ಪರ್ಸೆಂಟ್, ರಾಯಚೂರಿನಲ್ಲಿ 13 ಪರ್ಸೆಂಟ್, ಬೀದರ್‌ನಲ್ಲಿ 10 ಪರ್ಸೆಂಟ್, ಹಳೆಯಮೈಸೂರಿನಲ್ಲಿ ಹಾಸನಾ 39 ಪರ್ಸೆಂಟ್ ತುಮಕೂರು 35 ಪರ್ಸೆಂಟ್, ಮೈಸೂರಿನಲ್ಲಿ 37 ಪರ್ಸೆಂಟ್ ರಸ್ತೆಗಳಾಗಿವೆ, ಬೇರೆ ಭಾಗದಲ್ಲಿ ಹಣವನ್ನು ಖರ್ಚುಮಾಡಬಾರದು, ಬೇರೆ ಭಾಗದಲ್ಲಿ ಅಭಿವೃದ್ಧಿ ಆಗಬಾರದು ಎಂದು ನಮ್ಮ ಅಭಿಪ್ರಾಯವಲ್ಲ. ಹಿಂದುಳಿದ ಭಾಗವನ್ನು ಅಲಕ್ಷ್ಯ ಮಾಡಬಾರದು, ಹೈದರಾಬಾದ್ ಕರ್ನಾಟಕ ಮುಂದೆ ಬರಬೇಕು ಎಂದು ನಮ್ಮ ಅಭಿಪ್ರಾಯ. ಈಗ ಬೇರೆ ಭಾಗದಲ್ಲಿ ಅಭಿವೃದ್ಧಿ ಯಾವ ಮಟ್ಟಕ್ಕೆ ಬಂದಿದೆಯೋ ಅದೇ ಮಟ್ಟಕ್ಕೆ ನಮ್ಮ ಹೈದರಾಬಾದ್ ಕರ್ನಾಟಕವನ್ನು ತರಬೇಕು ಎಂದು ನಮ್ಮ ಆಶೆ. ಸ್ಟೇಟ್ ಆವರೇಜ್ ರಸ್ತೆಯನ್ನು ನಿರ್ಮಾಣ ಮಾಡಿರುವುದು 28 ಪರ್ಸೆಂಟ್ ಇದೆ. ಆದ್ದರಿಂದ ಮೊದಲು ನಮ್ಮನ್ನು ಸ್ಟೇಟ್ ಅವರೇಜ್ ಮಟ್ಟಕ್ಕಾದರೂ ತರಬೇಕೆಂದು ನನ್ನ ಸೂಚನೆ.

ಇನ್ನು ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಮತ್ತು ಸ್ಯಾನಿಟೇಷನ್ ಪ್ರೋಗ್ರಾಮಿನಲ್ಲಿ ಸುಮಾರು 205 ಕಾಮಗಾರಿಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಅದರಲ್ಲಿ 60 ಕಾಮಗಾರಿಗಳು ಕಂಪ್ಲೀಟಾಗಿವೆ ಎಂದು ಮಾನ್ಯ ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮತ್ತು ಇದುವರೆಗೆ ಅದಕ್ಕಾಗಿ 28.45 ಲಕ್ಷರೂಪಾಯಿಗಳು ಖರ್ಚಾಗಿವೆ ಎಂದು ಹೇಳಿದ್ದಾರೆ. ಈ ಸಂಬಂಧದಲ್ಲಿ ಹಾಕಿದಂತಹ 40 ಯೋಜನೆಗಳಲ್ಲಿ ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಮಾತ್ರ 10 ಯೋಜನೆಗಳು ಮುಗಿದಿವೆ. ಇನ್ನು 30 ಯೋಜನೆಗಳು ಹಳೆಯ ಮೈಸೂರಿನಲ್ಲಿಯೇ ಪಡೆದಿವೆ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ.

ಆಮೇಲೆ ಅನಿಮಲ್ ಹಸ್ಬೆಂಡ್ರಿಯಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ಪ್ರತ್ಯೇಕವಾಗಿ ಗುಲ್ಬರ್ಗಾಜಿಲ್ಲೆಗೆ ಒಂದು ಮಿಲ್ಕ್ ಸಪ್ಲೈ ಯೋಜನೆಯನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಮತ್ತು ಅದಕ್ಕಾಗಿ 8 ಲಕ್ಷ ರೂಪಾಯಿಗಳನ್ನು ಒದಗಿಸಿದೆ ಎಂದು ಹೇಳಿದ್ದಾರೆ. ಆದರೆ ಈ ಯೋಜನೆಯನ್ನು ಸರ್ಕಾರದವರು ಇದುವರೆಗೂ ಕಾರ್ಯರೂಪಕ್ಕೆ ತಂದಿಲ್ಲ. ಹೋದವರ್ಷ ಈ ಸಂಬಂಧದಲ್ಲಿ ಮೂರು ಸಾವಿರ ಲೀಟರ್ ಹಾಲನ್ನು ಸಪ್ಲೈ ಮಾಡತಕ್ಕ ಒಂದು ಯೋಜನೆಯನ್ನು ಕಾರ್ಯರೂಪಕ್ಕೆ ತಂದು ಮಂಗಳೂರು, ಶಿವಮೊಗ್ಗ ಈ ಪ್ರದೇಶದಲ್ಲಿ ಆ ಕಾರ್ಯ ಬಹಳ ತೀವ್ರಗತಿಯಿಂದ ನಡೆದಿವೆ. ಆದರೆ ಹೈದರಾಬಾದ್ ಕರ್ನಾಟಕದಲ್ಲಿ ಈ ಕೆಲಸ ನಡೆದಿಲ್ಲ ಎಂದು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಇನ್ನು ಇದೇ ರೀತಿ ಗುಲ್ಬರ್ಗಾಕ್ಕೆ ಕೀ ವಿಲೇಜ್ ಯೋಜನೆಯೊಂದನ್ನು ಮಂಜೂರುಮಾಡಿ ಎರಡುವರ್ಷಗಳಾಯಿತು. ಆದರೆ ಅದು ಇನ್ನೂ ಪೇಪರ್ ಮೇಲೆ ಇದೆಯೇ ಹೊರತು ಆ ಕಾರ್ಯವನ್ನು ಇನ್ನೂ ನಮ್ಮಲ್ಲಿ ಕಾರ್ಯರೂಪಕ್ಕೆ ತಂದಿಲ್ಲ. ಅಧಿಕಾರಿಗಳನ್ನು ಕೇಳಿದರೆ ಸ್ಟಾಕ್‌ಮನ್‌ಗಳು ಇಲ್ಲ. ಆದ್ದರಿಂದ ಆ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿಲ್ಲ ಎಂದು ಹೇಳುತ್ತಾರೆ. ಈಗ ಧಾರವಾಡದಲ್ಲಿ ಒಂದು ಸ್ಟಾಕ್‌ಮನ್ ಟ್ರೈನಿಂಗ್ ಸೆಂಟರನ್ನು ತೆಗೆದಿದ್ದಾರೆ. ಅದೇ ರೀತಿ ಹೈದರಾಬಾದ್ ಕರ್ನಾಟಕದಲ್ಲೂ ಒಂದು ಸ್ಟಾಕ್‌ಮನ್ ಟ್ರೈನಿಂಗ್ ಸೆಂಟರನ್ನು ತೆಗೆದರೆ ಒಳ್ಳೆಯದು.

ಇನ್ನು ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ 17 ದವಾಖಾನೆಗಳಲ್ಲಿ ಡಾಕ್ಟರುಗಳು ಇಲ್ಲ. ಮತ್ತು ಆ ದವಾಖಾನೆಗಳಲ್ಲಿ ಔಷಧಿ ಸಹ ಸರಿಯಾಗಿ ಇರುವುದಿಲ್ಲ. ಆದ್ದರಿಂದ ಸರ್ಕಾರದವರು ಆ ಕಡೆ ಗಮನ ಕೊಟ್ಟು ದವಖಾನೆಗಳಿಗೆ ಆದಷ್ಟು ಬೇಗ ಡಾಕ್ಟರುಗಳನ್ನು ಕಳುಹಿಸುವುದಕ್ಕೆ ತಕ್ಕ ಏರ್ಪಾಡನ್ನು ಮಾಡಬೇಕು. ಮತ್ತು ಆ ದವಾಖಾನೆಗಳಿಗೆ ಸರಿಯಾಗಿ ಔಷಧಿಯನ್ನು ಸಹ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು ನಮ್ಮ ಗುಲ್ಬರ್ಗಾಜಿಲ್ಲೆಗೆ ಬಂದಿದ್ದಾಗ ನಿಮ್ಮ ಜಿಲ್ಲೆಯಲ್ಲಿ ಸ್ಮಾಲ್ ಸೇವಿಂಗ್ಸ್ ಸ್ಕೀಮ್ ಬಹಳ ಯಶಸ್ವಿಯಾಗಿದೆ. ಅದಕ್ಕಾಗಿ ನಿಮ್ಮ ಜಿಲ್ಲೆಗೆ 18 ಲಕ್ಷ

(ಶ್ರೀ ಆರ್. ರುದ್ರಪ್ಪ)

ರೂಪಾಯಿಗಳ ಒಂದು ಯೋಜನೆಯನ್ನು ಕೊಟ್ಟಿದ್ದೇವೆ, ಈ ಸ್ಮಾಲ್ ಸೇವಿಂಗ್ಸ್ ಸ್ಕೀಮಿನಲ್ಲಿ ವಸೂಲಾಗಿರತಕ್ಕ ಹಣದಲ್ಲಿ ¾ ಭಾಗ ಹಣವನ್ನು ಅಲ್ಲಿ ಖರ್ಚು ಮಾಡುತ್ತೇವೆಂದು ವಾಗ್ದಾನ ಮಾಡಿದ್ದರು ಆದರೆ ಬಡ್ಜೆಟಿನಲ್ಲಿ ನೋಡಿದರೆ ಅದು ಯಾವುದೂ ಇಲ್ಲ. ಆದ್ದರಿಂದ ನಾನು ಮಾನ್ಯ ಹಣಕಾಸಿನ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇವೆ. ನಮ್ಮ ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕಕ್ಕೆ ಬಡ್ಜೆಟ್ಟಿನಲ್ಲಿ ಹೆಚ್ಚು ಹಣವನ್ನು ಒದಗಿಸಬೇಕೆಂದು. ಇಷ್ಟು ಹೇಳಿ

ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ (ಸಾಗರ).—ಮಾನ್ಯ ಸಭಾಪತಿಗಳೇ, ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ 1964-65ನೇ ಇಸವಿಯ ಆಯವ್ಯಯ ಅಂದಾಜುಪಟ್ಟಿಯನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ನಾನು ಹೇಳಬಯಸುತ್ತೇನೆ. ಈ ಸಾರಿ ನಮ್ಮ ಬಡ್ಜೆಟ್ಟಿನಲ್ಲಿ ಒಂದು ಹೆಚ್ಚಿನ ವೈಶಿಷ್ಟ್ಯ ಇದೆ, ಅದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ. ಆ ವೈಶಿಷ್ಟ್ಯ ಏನು ಎಂದರೆ ವೃದ್ಧಾಪ್ಯವೇತನವನ್ನು ಕೊಡತಕ್ಕ ಒಂದು ವ್ಯವಸ್ಥೆಮಾಡಿರುವುದು. ಈ ವೃದ್ಧಾಪ್ಯ ವೇತನವನ್ನು ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಆದಷ್ಟು ಜಾಗ್ರತೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಈ ನಮ್ಮ ರಾಜ್ಯದಲ್ಲಿ ಮುಂದಿನ ವರ್ಷದ ಆಡಳಿತದ ವಿಷಯದಲ್ಲಿ ನನಗೆ ತೋರಿದ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ನಮ್ಮ ಸ್ನೇಹಿತರನೇಕರು ವ್ಯವಸಾಯದ ವಿಚಾರವಾಗಿ ಹಾಗೂ ನೀರಾವರಿಯ ವಿಚಾರದಲ್ಲಿ ಬಹಳ ವಿಷಯಗಳನ್ನು ಹೇಳಿದ್ದಾರೆ. ಆದ್ದರಿಂದ ನಾನು ದೊಡ್ಡ ನೀರಾವರಿಯೋಜನೆಗಳ ವಿಷಯದಲ್ಲಿ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಈ ದೊಡ್ಡ ನೀರಾವರಿ ವಿಚಾರದಲ್ಲಿ ಸರ್ಕಾರದವರು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೋ ಅದರ ವಿಚಾರದಲ್ಲಿ ಎಷ್ಟೇ ಭಿನ್ನಾಭಿಪ್ರಾಯ ಬಂದರೂ ಕೂಡ ಅವುಗಳನ್ನು ಧೈರ್ಯವಾಗಿ ತೆಗೆದುಕೊಂಡು ಆ ಯೋಜನೆಗಳನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. ಈಗಾಗಲೇ ಕೆಲವು ದೊಡ್ಡ ದೊಡ್ಡ ಯೋಜನೆಗಳ ಕೆಳಗಡೆ ವ್ಯವಸಾಯ ಅಭಿವೃದ್ಧಿ ಆಗದೇ ಇರತಕ್ಕ ಕ್ಷೇತ್ರಗಳಲ್ಲಿ ಅನೇಕ ಲಕ್ಷ ಎಕರೆ ಜಮೀನು ಹಾಗೆಯೇ ಇದೆ. ಈ ನಮ್ಮ ಬಡ್ಜೆಟ್ಟನ್ನು ನೋಡುವುದಾದರೆ ಸುಮಾರು 3 ಲಕ್ಷ ಎಕರೆ ಜಮೀನು ವ್ಯವಸಾಯಕ್ಕೆ ಉಪಯೋಗಿಸಲ್ಪಡದೆ ಹಾಗೆಯೇ ಇದೆ. ನಮ್ಮ ರಾಜ್ಯದಲ್ಲಿ ಆಹಾರದ ಅವಶ್ಯಕತೆ ಎಷ್ಟರಮಟ್ಟಿಗೆ ಇದೆ ಎಂಬುದನ್ನು ತಿಳಿದುಕೊಂಡಿದ್ದರೂ ಕೂಡ ನಮ್ಮ ಜನತೆ ಆ ಜಮೀನನ್ನು ಉಪಯೋಗ ಮಾಡಿಕೊಳ್ಳುತ್ತಾ ಇಲ್ಲ. ಆದ್ದರಿಂದ ಆ ಜಮೀನಿನಲ್ಲಿ ವ್ಯವಸಾಯ ಮಾಡಲು ಹೆಚ್ಚಿನ ಮಟ್ಟದಲ್ಲಿ ಶ್ರಮವಹಿಸಬೇಕು. ಈಗ ನಾವು ಹೊಸದಾಗಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗಾಗಿ ಏನು ಹಣವನ್ನು ಖರ್ಚುಮಾಡಿದ್ದೇವೋ ಆ ಯೋಜನೆಯ ಕೆಳಗಡೆ ಇರತಕ್ಕ ಜಮೀನನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಂಡು ಅದರಲ್ಲಿ ಆಹಾರವನ್ನು ಉತ್ಪಾದನೆ ಮಾಡುವ ಹಾಗೆ ಮಾಡಬೇಕು. ಈಗಾಗಲೇ ಕಾರ್ಯಗತವಾಗಿರತಕ್ಕ ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಕೆಳಗಡೆ ಇರತಕ್ಕಂಥ 3 ಲಕ್ಷ ಎಕರೆ ಜಮೀನನ್ನು ಉಪಯೋಗ ಮಾಡಿಕೊಂಡು ಅದರಲ್ಲಿ ವ್ಯವಸಾಯವನ್ನು ಮಾಡುವುದಾದರೆ ಅದರಲ್ಲಿ ಸುಮಾರು 30-40 ಸಾವಿರ ಟನ್ ಆಹಾರವನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಅದೇ ರೀತಿಯಲ್ಲಿ ಸಣ್ಣ ನೀರಾವರಿ ಯೋಜನೆಯ ವಿಚಾರದಲ್ಲಿಯೂ ಸಹ ಹೆಚ್ಚಿನ ಆಸಕ್ತಿಯನ್ನು ವಹಿಸಿ ಕೆಲಸಮಾಡಬೇಕಾಗಿದೆ. ಇವೊತ್ತು ಇಡೀ ನಮ್ಮ ರಾಜ್ಯದಲ್ಲಿ 33 ಸಾವಿರ ಕೆರೆಗಳಿವೆ ಎಂದು ಅಂಕಿಅಂಶಗಳಿಂದ ನಮಗೆ ಗೊತ್ತಾಗುತ್ತದೆ. ಆ ಕೆರೆಗಳ ಪೈಕಿ ಶೇಕಡಾ 1/6 ಭಾಗದಷ್ಟು ಕೆರೆಗಳು ನಮ್ಮ ಸಾಗರ ಸಬ್‌ಡಿವಿಜನ್ನಿನಲ್ಲಿವೆ. ಈ ಕೆರೆಗಳ ವಿಚಾರದಲ್ಲಿ ಸರ್ಕಾರದವರು ಎಷ್ಟರಮಟ್ಟಿನ ಆಸಕ್ತಿಯನ್ನು ವಹಿಸಿದ್ದಾರೆ ಎಂಬುದನ್ನು ನಾವು ಯೋಚನೆ ಮಾಡುವುದಾದರೆ ಈಗ 5-6 ದಿವಸಗಳಿಂದ ನಮ್ಮ ಸ್ನೇಹಿತರುಗಳು ಈ ಸಭೆಯಲ್ಲಿ ಭಾಷಣ ಮಾಡುವಾಗ ಯಾವ ಭಾಗದ ಸದಸ್ಯರೂ ಕೂಡ ತಮ್ಮ ಭಾಗದಲ್ಲಿ ಕೆಲಸ ಚೆನ್ನಾಗಿ ಆಗಿದೆ ಎಂದು ಯಾರೂ ಹೇಳಲಿಲ್ಲ. ಸಣ್ಣ ನೀರಾವರಿಗೆ ಸಂಬಂಧಪಟ್ಟ ಹಾಗೆ ಕೆರೆಗಳ ಕೆಲಸಗಳು ಹಳೆಯ ಮೈಸೂರಿನಲ್ಲಿಯೂ ಆಗಿಲ್ಲ. ಹೊಸ ಮೈಸೂರಿನಲ್ಲಿಯೂ ಆಗಿಲ್ಲ. ಹಾಗಾದರೆ ಆ ಬಾಬಿಗೆ ಒದಗಿಸಿದ್ದ ದುಡ್ಡು ಎಲ್ಲಿ ಹೋಯಿತು ? ಆ ದುಡ್ಡೇನಾದರೂ ಮೆಸ್‌ಮರಿಜಮ್ ಆಯಿತೇ ಎಂದು ನನ್ನ ಮನಸ್ಸಿಗೆ ಬರುತ್ತದೆ. ನಮ್ಮ ಸಾಗರಾ ಡಿವಿಜನ್‌ನಲ್ಲಿ ಇರತಕ್ಕ ಕೆರೆಗಳು ರಿಪೇರಿಯಾಗಿಲ್ಲ. ಈ ರೀತಿ ಅಲ್ಲಿರತಕ್ಕ ಕೆರೆಗಳ ರಿಪೇರಿಯನ್ನು ಮಾಡದೇ ಇರುವುದರಿಂದ ಮಲೆನಾಡು ಭಾಗದಲ್ಲಿ ಕೆರೆಗಳಲ್ಲಿ ನೀರಿಲ್ಲದೆ ಮತ್ತು ಪ್ರಕೃತಿಯ ವಿಕೋಪದಿಂದ ಅಲ್ಲಿ ಮಳೆಬಾರದೆ ಪೈರುಗಳೆಲ್ಲಾ ಹಾಳಾಗಿ

ಹೋಯಿತು. ಇವೊತ್ತಿನ ದಿವಸ ಮೈದಾನ ಪ್ರದೇಶದಲ್ಲಿ ಮಳೆಯಾಗಿಲ್ಲ ಎಂದು ಕೆಲವೊಂದು ಪ್ರದೇಶವನ್ನು ಬರಗಾಲಪೀಡಿತ ಪ್ರದೇಶ ಎಂದು ಯಾವ ರೀತಿ ತೀರ್ಮಾನ ಮಾಡಿದ್ದಾರೆಯೋ ಅದಕ್ಕಿಂತಲೂ ಹೆಚ್ಚಿನ ಒಂದು ಪರಿಸ್ಥಿತಿ ಅಲ್ಲಿ ಉಂಟಾಗಿದೆ. ಈ ಕೆರೆಗಳ ವಿಚಾರದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿ ಕೆರೆಗಳ ರಿಪೇರಿಯನ್ನು ಮಾಡಿಸಬೇಕು. ಸಣ್ಣ ನೀರಾವರಿಯ ವಿಷಯದಲ್ಲಿ ಸರ್ಕಾರದವರು ಹೆಚ್ಚು ಗಮನವನ್ನು ಕೊಡಬೇಕು ಎಂದು ನಾನು ಅನೇಕಸಾರಿ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಲ್ಲಿ ಹೇಳಿದ್ದೇನೆ. ಅವರು ಕೇಂದ್ರ ಸರ್ಕಾರದಿಂದ ದುಡ್ಡು ಬರುತ್ತದೆ, ಅದರ ಬಗ್ಗೆ ಆಸಕ್ತಿಯನ್ನು ವಹಿಸುತ್ತೇವೆ ಎಂದು ನಮಗೆ ಭರವಸೆಯನ್ನು ಕೊಟ್ಟಿದ್ದಾರೆ. ಅದು ನಮ್ಮ ದುರಾದೃಷ್ಟವೋ ಏನೋ, ಆ ಕೆಲಸವನ್ನು ಸರ್ಕಾರದವರು ಮಾಡಿಕೊಟ್ಟು ಜನಗಳಿಗೆ ಅನುಕೂಲ ಮಾಡಿಕೊಟ್ಟಿಲ್ಲ. ಜನರು ಕಷ್ಟಪಡತಕ್ಕದ್ದು ತಪ್ಪಿಲ್ಲ.

ಶ್ರೀ ಅಲೂರು ಹನುಮಂತಪ್ಪ (ಸಣ್ಣ ನೀರಾವರಿ ಶಾಖೆಯ ಮಂತ್ರಿಗಳು).—ಇದರಲ್ಲಿ ದುರದೃಷ್ಟವೇನೂ ಇಲ್ಲ. ಎಲ್ಲಾ ಕೆರೆಗಳ ರಿಪೇರಿಯನ್ನು ಮಾಡಬೇಕಾದರೆ 20 ಕೋಟಿ ರೂಪಾಯಿಗಳು ಬೇಕಾಗುತ್ತದೆ. 4-5 ಕೋಟಿ ರೂಪಾಯಿಗಳಲ್ಲಿ ಆ ಕೆಲಸವನ್ನು ಮುಗಿಸುವುದಕ್ಕೆ ಸಾಧ್ಯವಿಲ್ಲ. ವರ್ಷೇ ವರ್ಷೇ ಸ್ವಲ್ಪ ಸ್ವಲ್ಪ ಕೆಲಸಗಳನ್ನು ಮಾಡಿಕೊಂಡು ಹೋಗಬೇಕಾಗುತ್ತದೆ. ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಕೊಟ್ಟಂತ ಹಣ ಮಿಸ್‌ಮೆರಿಜಮ್ ಏನೂ ಆಗುವುದಿಲ್ಲ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಅವರು ಇನ್ನೂ 20 ಕೋಟಿ ರೂಪಾಯಿ ಬೇಕಾಗುತ್ತದೆಂದು ಹೇಳುತ್ತಾರೆ. ಹೊಸ ಯೋಜನೆಗಳನ್ನು ಮಾಡುವುದಕ್ಕೆ ನಾವು ಹೊರಟಿರುವಾಗ ಹಳೆಯದಾಗಿ ಹಿಂದಿನಿಂದ ಇರತಕ್ಕ ಬಹುಭಾಗ ಕೆರೆಗಳನ್ನು ಸರಿಪಡಿಸದೆ, ಅವುಗಳಿಗೆ ಗಮನ ಕೊಡದೆ ಹೊಸದನ್ನು ಮಾಡುವುದಕ್ಕೆ ಹೊರಡುತ್ತೇವೆ. ಇದರಿಂದ ಹಳೆಯದನ್ನು ಹಾಳು ಮಾಡಿದಂತಾಗುವುದಿಲ್ಲವೇ, ಆ ಭಾಗದ ಅಭಿವೃದ್ಧಿಗೆ ಕುಂದು ಬಂದಂತಾಗುವುದಿಲ್ಲವೇ ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕು.

5-30 P.M.

ಎಂಟು ಸಾವಿರ ಕೆರೆಗಳ ರಿಪೇರಿ ಮಾಡುವುದಕ್ಕಿಂತಲೂ ಎಂಟು ಸಾವಿರ ಕೆರೆಗಳನ್ನು ಹೊಸದಾಗಿ ಕಟ್ಟಿ ಅದರ ಅಚ್ಚುಕಟ್ಟಿನ ಜಮೀನನ್ನು ಸಾಗುವಳಿಗೆ ತರತಕ್ಕದ್ದು ಎಷ್ಟು ಕಷ್ಟದ ಕೆಲಸ ಎಂಬುದನ್ನು ಗಮನಿಸಬೇಕು. ನಮ್ಮಲ್ಲಿರುವ ಆಹಾರದ ಸಮಸ್ಯೆಯನ್ನು ಬಗೆಹರಿಸಲು ಹೆಚ್ಚು ಆಹಾರವನ್ನು ಬೆಳೆಯಬೇಕು ಎಂದು ಬೇಕಾದಷ್ಟು ಹೇಳುತ್ತೇವೆ. ಆದರೆ ಯಾವ ರೀತಿಯಲ್ಲಿ ಅದರ ಅಭಿವೃದ್ಧಿಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಸರಿಯಾಗಿ ಯೋಚಿಸಿ ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿಗೆ ಗಮನ ಕೊಡಬೇಕು. ಹಿಂದಿನಿಂದಲೂ ಇರುವ ಕೆರೆಗಳನ್ನೂ ನೋಡುವುದಕ್ಕೆ ಆಗದೆ ಇರುವಾಗ ಹೊಸ ಕೆರೆಗಳನ್ನು ಕಟ್ಟುತ್ತೇವೆ ಎಂದು ಹೇಳುತ್ತೀರಿ. ಸಾಗರ ಡಿವಿಜನ್‌ನಲ್ಲಿ ಒಂದು ಕೆರೆಗೂ ಬಡ್ಜೆಟ್ಟಿನಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟಿಲ್ಲ. ಹಿಂದಿನಿಂದ ಇರುವ ಕೆರೆಗಳನ್ನು ನೋಡಿಕೊಳ್ಳಲು ಅಲಕ್ಷ್ಯ ಮಾಡುವುದಾದರೆ ದೇಶಕ್ಕೆ ಬೇಕಾದ ನೀರಾವರಿ ಆಗಿ ಆಹಾರ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಸರ್ಕಾರ ಗಮನಕೊಡಬೇಕೆಂದು ಹೇಳಿ ಇದರ ಬಗ್ಗೆ ಸಾಕಷ್ಟು ಹಣವನ್ನು ಸಾಗರ ಡಿವಿಜನ್ನಿಗೆ ಕೊಡಬೇಕೆಂದೂ, ಹಳೆಯ ಕೆರೆಗಳ ದುರಸ್ತಿಯನ್ನು ಸಹ ಮಾಡಬೇಕು ಎಂದೂ ನಿರ್ದಿಷ್ಟವಾಗಿ ಹೇಳಬಯಸುತ್ತೇನೆ.

ಆಹಾರದ ವಿಚಾರದಲ್ಲಿ ಧಾರಣೆ ಬಹಳ ಹೆಚ್ಚಾಗಿದೆ ಎನ್ನುವ ವಿಷಯವನ್ನು ಅನೇಕ ಸಾರಿ ಕೇಳಿದ್ದೇವೆ. ವ್ಯವಸಾಯಾಭಿವೃದ್ಧಿ ಆಗಬೇಕಾದರೆ ರೈತನಿಗೆ ಸರಿಯಾದ ದರ ಸಿಕ್ಕಬೇಕು, ಅದಿಲ್ಲದೆ ಹೋದರೆ ಅವನಿಗೆ ಬೆಳೆಯಲು ಪ್ರೋತ್ಸಾಹವಿರುವುದಿಲ್ಲ. ವ್ಯವಸಾಯಗಾರನಿಗೆ ಹೆಚ್ಚು ಬೆಲೆ ಸಿಕ್ಕಬೇಕು, ಮತ್ತು ಕಡಮೆ ದರದಲ್ಲಿ ಬಳಕೆಗಾರನಿಗೆ ಸಿಕ್ಕುವಂಥ ವ್ಯವಸ್ಥೆಯನ್ನು ಮಾಡಬೇಕು.

ತೋಟದ ಬೆಳೆಗೆ ಬೇಕಾದ ಬೀಜ ಅಥವಾ ಸಸಿ ಮುಂತಾದುವನ್ನು ಒದಗಿಸಬೇಕು. ಈ ವರ್ಷ ಐದು ಲಕ್ಷ ತೆಂಗಿನ ಸಸಿಗಳ ಮತ್ತು ಹತ್ತು ಲಕ್ಷ ಅಡಕೆ ಸಸಿಗಳ ಬೆಳವಣಿಗೆಗೆ ಅವಕಾಶ ಕೊಡಬೇಕು ಎನ್ನುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಅನೇಕ ತೋಟಗಳ ಬೆಳವಣಿಗೆಗೆ ಏನು ಅವಶ್ಯಕತೆ ಇದೆ ಎನ್ನುವುದರ ಕಡೆಗೆ ಗಮನ ಕೊಡಬೇಕು. ತೋಟಗಳಿಗೆ ಹೆಚ್ಚಿನ ಮಟ್ಟದಲ್ಲಿ ಸೊಪ್ಪಿನ ಗೊಬ್ಬರ ಬೇಕು. ಇದಕ್ಕಾಗಿ ಸೊಪ್ಪಿನ ಬೆಟ್ಟಗಳನ್ನು ಮಲೆನಾಡು ಭಾಗದಲ್ಲಿ ಬಿಟ್ಟಿದ್ದಾರೆ ಅದರ ಮಾಲೀಕತ್ವ ಯಾರಿಗೆ, ಯಾವ ಯಾವ ತೋಟಕ್ಕೆ ಎಷ್ಟು ಸೇರಿದೆ ಎಂಬುದನ್ನು ನಿರ್ದಿಷ್ಟಪಡಿಸಿ ಸೊಪ್ಪಿನ ಬೆಟ್ಟಗಳ ರಕ್ಷಣೆ ಹಾಗೂ ತೋಟಗಳ ಬೆಳವಣಿಗೆಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಹೇಳುತ್ತೇನೆ.

ಶರಾವತಿ ಯೋಜನೆಯಲ್ಲಿ ನೀರು ಮುಳುಗಡೆ ಆಗುವ ಪ್ರದೇಶದ ಜನರ ಪುನರ್ವಸತಿಗಾಗಿ 19 ಲಕ್ಷ ರೂಪಾಯಿ ಒದಗಿಸಿದ್ದುದನ್ನು 50 ಲಕ್ಷಕ್ಕೆ ಏರಿಸಿರುವುದಾಗಿ ಶ್ವೇತಪತ್ರದಲ್ಲಿ ತೋರಿಸಿ

(ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ)

ದ್ದಾರೆ. ಅಲ್ಲಿಯ ಜನತೆಯನ್ನು ಸರಿಯಾದ ರೀತಿಯಲ್ಲಿ ಪುನರ್ವಸತಿ ಮಾಡುವುದಕ್ಕೆ ಮಾನವೀಯತೆಯ ದೃಷ್ಟಿಯಿಂದ ಹೆಚ್ಚಿನ ಮಟ್ಟದಲ್ಲಿ ಸರ್ಕಾರ ಆಸಕ್ತಿವಹಿಸಬೇಕು. ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಜೋಗಿಗೆ ಬಂದಾಗ್ಗೆ ಅನೇಕ ವೇಳೆ ಬಹಳ ಕರುಣೆಯಿಂದ ಕೇಳಿ ಅದರ ಬಗ್ಗೆ ಸೂಕ್ತ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಭರವಸೆಯನ್ನು ಕೊಟ್ಟಿರುವರು. ಅದರ ಬಗ್ಗೆ ಕೂಡಲೇ ಸರ್ಕಾರದ ಆರ್ಡರ್ ಆಗಿ ಎಲ್ಲ ರೀತಿಯಿಂದಲೂ ಅವರಿಗೆ ಪರಿಹಾರ ದೊರಕುವಂತೆ ಸರ್ಕಾರ ಸಹಾನುಭೂತಿಯಿಂದ ನೋಡಬೇಕು ಎಂದು ತಿಳಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಸಭಾಪತಿಗಳೇ, ಯಾವುದೇ ರಾಜ್ಯದ ಆಡಳಿತಕ್ಕೂ ಮುಖ್ಯವಾಗಿ ಮೂರು ಭಾಗವಿದೆ. ಒಂದು ವಿಧಾನಾಂಗ, ಎರಡನೆಯದು ರಾಜ್ಯಾಂಗ, ಮೂರನೆಯದು ನ್ಯಾಯಾಂಗ. ಇವು ಮೂರರಲ್ಲಿ ವಿಶಿಷ್ಟಾಂಗವೆಂದರೆ ವಿಧಾನಾಂಗ. ನಾವು ಮೊದಲು ಯಾವುದೇ ಕೆಲಸವನ್ನೂ ರಾಜ್ಯದಲ್ಲಿ ಮಾಡಬೇಕಾದರೂ ಅದಕ್ಕೆ ಜನ್ಮ ಈ ವಿಧಾನ ಸಭೆಯಲ್ಲಿ ಆಗಿ, ಒಂದು ಮೂರ್ತಿ ಸ್ವರೂಪದಲ್ಲಿ ತರುತ್ತೇವೆ—ಒಂದು ಬಿಲ್, ಕಾನೂನು, ಬಡ್ಜೆಟ್ ಅಥವಾ ಬರೀ ರೆಸಲ್ಯೂಷನ್ ಅವುಗಳಿಗೆ ಇಲ್ಲಿ ಮೊದಲು ಪ್ರಾಣಪ್ರತಿಷ್ಠೆಯಾಗಿ ಹೊರಗೆ ಉತ್ಸವ ಹೊರಡುತ್ತವೆ. ಅನಂತರದಲ್ಲಿ ರಾಜ್ಯಾಂಗಕ್ಕೂ ಕಾರ್ಯಾಚರಣೆಗೆ ತರುವ ಸಲುವಾಗಿ ಮುಂದೆ ಹೋಗುತ್ತದೆ. ಈ ರೀತಿ ಮಾಡುವಾಗ ಯಾವರೀತಿ ಕೆಲಸ ನಡೆಯುತ್ತದೆಂದು 3-4 ದಿವಸಗಳಿಂದ ನಡೆದ ಚರ್ಚೆಯಲ್ಲಿ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಈ ಸಭೆಯಲ್ಲಿ ರಾಜ್ಯಾಂಗದಲ್ಲಿ ಸ್ವಲ್ಪ influence ಉಳ್ಳ ಜನರಿದ್ದಾರೆ. ಮೆಜಾರಿಟಿಯಿಂದ ಏನು ಕೆಲಸವಾಗುತ್ತದೆಂದರೆ, ನನಗೆ ಹೀಗೆ ಅನ್ನಿಸುತ್ತದೆ, ಈ ವಿಧಾನ ಸಭೆಯಲ್ಲಾದರೂ ವಾಸ್ತವಿಕ ಮೆಜಾರಿಟಿಯಿಂದ ನೋಡಬೇಕಾಗಿದೆ. ಅದರಲ್ಲಿ ಸತ್ಯ, ವಾಸ್ತವಿಕತೆ ಸರಿಯಾದ ನೀತಿ ಸಿಕ್ಕುವುದಿಲ್ಲ ಎಂದು ನನಗನ್ನಿಸುತ್ತದೆ. ಏಕೆಂದರೆ ಸತ್ಯ ಮತ್ತು ಧರ್ಮ ನಮಗೆ ಇರುವುದಿಲ್ಲ. ನಮ್ಮ ಮುಂದಿರುವ ಬಡ್ಜೆಟ್ಟನ್ನು ನೋಡಿದರೆ ವಿಶಾಲವಾದ ದೇಶ ಕಟ್ಟಿದ್ದಾರೆಂದು ಹೇಳುವುದಕ್ಕೆ ನಾನು ತಯಾರಿಲ್ಲ.

ಇವತ್ತು ಒಂದು ಕಡೆ ಸಾಮ್ಯವಾದ, ಮತ್ತೊಂದು ಕಡೆ ಗಾಂಧಿವಾದ ಎಂದು ಹೇಳುತ್ತಾರೆ. ಅದಕ್ಕೆ ಒಪ್ಪಿದೆವು. ಆ ಕಕ್ಷೆಯೊಳಗೆ ಸ್ವರಾಜ್ಯ ಸಿಕ್ಕಿತು. ಆದರೆ ಧರ್ಮವಿಲ್ಲ, ನೀತಿ ಇಲ್ಲ, ಅದಕ್ಕೆ ತಳಹದಿ ಕಟ್ಟುವುದಕ್ಕೆ ಸಮತಾ ಮತ್ತು ಸಾಮ್ಯವಾದ ಮಾಡಲಿಕ್ಕೆ ಏನು ಬೇಕಾಗಿತ್ತು, ಎಷ್ಟು ನೀತಿ ಬೇಕಾಗಿತ್ತು. ಅದು ಒಂದೂ ಇರಲಾರದೆ ನಮ್ಮ ಎರಡೂ ಕಡೆ ಅದನ್ನು ಬಿಟ್ಟು ಹೋಗಿದ್ದಾರೆ. ಉರ್ದು ಭಾಷೆಯಲ್ಲಿ ಒಂದು ಮಾತು ಹೇಳುತ್ತಾರೆ. ಆ ಪ್ರಕಾರವೇ ನಮ್ಮ ರಾಜ್ಯದ ವ್ಯವಸ್ಥೆಯಾಗಿದೆ ಎಂದು ಹೇಳುತ್ತೇನೆ.

ನಾನು ಇಲ್ಲಿಗೆ ಬಂದಮೇಲೆ ಮೂರನೆಯ ಬಡ್ಜೆಟ್ಟನ್ನೂ ನೋಡುತ್ತಿದ್ದೇನೆ. ಇದರಲ್ಲಿ ಲೆಕ್ಕಪತ್ರ income ಇವು ಇದ್ದೇ ಇರುತ್ತವೆ. ಸ್ವರಾಜ್ಯ ಬರುವುದಕ್ಕೆ ಮೊದಲು ಬ್ರಿಟಿಷ್ ರಾಜ್ಯದಲ್ಲಿ ನಿಜಾಮ್ ರಾಜ್ಯದಲ್ಲಿ, ಮರಾಠ ರಾಜ್ಯದಲ್ಲಿ ಯಾವರೀತಿ ಇತ್ತೋ ಈಗಲೂ ಅದೇ ರೀತಿ ನಡೆಯುತ್ತಿದೆ. ಇವತ್ತಿನ ಒಂದು ವೈಶಿಷ್ಟ್ಯ ನೋಡಬೇಕಾಗಿದೆ. ಅದು ಯಾವುದೆಂದರೆ ಪ್ರಜಾ ಪ್ರಭುತ್ವದಲ್ಲಿ ಯಾವ ಮಾತು ಬೇಕಾಗಿತ್ತು, ಎಷ್ಟು ಶಕ್ತಿ ಬೇಕಾಗಿತ್ತು, ಎಷ್ಟು ಸಮಾನತ್ವ ಬೇಕಾಗಿತ್ತು, ಅದೊಂದೂ ಇದರಲ್ಲಿ ಕಾಣುತ್ತಿಲ್ಲ. ಅದಕ್ಕೂ ಇದಕ್ಕೂ ಏನು ವ್ಯತ್ಯಾಸವೆಂದರೆ ಎರಡು ಮೂರು ವಿಚಾರಗಳು ಕಣ್ಣಿಗೆ ಕಾಣಿಸುತ್ತವೆ. ಈ ಸರ್ಕಾರದಲ್ಲಿ ಏನು ಕಾಣಿಸುತ್ತದೆಂದರೆ ಮೊದಲು ಷರಾಬು ಬಹಿರಂಗವಾಗಿ ಕುಡಿಯುತ್ತಿದ್ದರು, ಈಗ ಮರೆಯಲ್ಲಿ ಮುಚ್ಚಿ ಕುಡಿಯುತ್ತಾರೆ. ಲಂಚವನ್ನೂ ಮುಚ್ಚಿ ತೆಗೆದುಕೊಳ್ಳುತ್ತಿದ್ದರು. ಈಗ ಬಹಿರಂಗವಾಗಿ ತೆಗೆದುಕೊಳ್ಳುತ್ತಾರೆ.

ಸಮಯ ಸ್ವಲ್ಪ ಕೊಟ್ಟಿರುವುದರಿಂದ ನಾನು ನನ್ನ ಜಿಲ್ಲೆಯ ಮಟ್ಟಿಗೆ ಹೇಳುತ್ತೇನೆ. ಹೈದರಾಬಾದ್ ಭಾಗವನ್ನು ಬಹಳ neglect ಮಾಡುತ್ತಿದ್ದಾರೆಂದು ಶ್ರೀಮಾನ್ ರುದ್ರಪ್ಪನವರೂ ಹೇಳಿದರು. ನಾನೂ ಅದನ್ನೇ ಹೇಳುತ್ತಿದ್ದೇನೆ. ಆ ಪ್ರಕಾರ ಮಾಡಿದರೆ ಯಾವುದೇ ರಾಜ್ಯವಾಗಲೀ ಮುಂದೆ ಬರುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಯಾವುದೇ ವರ್ಗಕ್ಕೆ ಸರಿಸಮಾನತೆ ಬರುವುದಿಲ್ಲ. ಎಲ್ಲರ ಆದಾಯ ಮತ್ತು ಖರ್ಚು ಸರಿಯಾಗಿರುವುದಿಲ್ಲ. ಆ ಮಟ್ಟಕ್ಕೆ ಬರುವ ಮುಂದೆ ನಮ್ಮಲ್ಲಿ ಸುಖ ಮತ್ತು ಶಾಂತಿ ನೆಲಸಲು ಸಾಧ್ಯವಿಲ್ಲ. ನಾನು ಬಿದರ್ ಜಿಲ್ಲೆಯ ವಿಚಾರ ಹೇಳುತ್ತೇನೆ. ಮೈಸೂರು ಡಿವಿಜನ್ನಿಗೆ 10 ಕೋಟಿ ರೂಪಾಯಿ, ಬೆಳಗಾಂ ಡಿವಿಜನ್ನಿಗೆ 8 ಕೋಟಿ ರೂಪಾಯಿ ಕೊಟ್ಟು ಗುಲ್ಬರ್ಗ ಡಿವಿಜನ್ನಿಗೆ ಮೂರು ಕೋಟಿ ರೂಪಾಯಿ ಹೀಗೆ ಕೊಟ್ಟಿದ್ದೀರಿ. ಅದರಲ್ಲಿ ಬಿದರ್ ಜಿಲ್ಲೆಗೆ ಬಹಳ ಕಡಮೆ ಇದೆ. ತಾಲ್ಲೂಕುಗಳ ಪ್ರಕಾರ ತೆಗೆದುಕೊಂಡರೆ ನಾನು ಯಾವ Constituency ಯಿಂದ ಬರುತ್ತೇನೆಯೋ ಅದು ಎಲ್ಲಕ್ಕಿಂತ

ಹಿಂದೆ ಉಳಿದಿದೆ. ಇಂಥ ಸರ್ಕಾರದ ನೀತಿಯನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ Appendix 'E' ತೆಗೆದು ನೋಡಿದರೆ ಮೂರು ನಾಲ್ಕು ಕೆರೆ ಕೆಲಸಗಳನ್ನು ತೆಗೆದುಕೊಂಡಿರುವುದರಲ್ಲಿ ಬಾಲ್ಕಿಯಲ್ಲಿ ಏನೂ ತೆಗೆದುಕೊಂಡಿಲ್ಲ. ಈಗ ಎರಡು ವರ್ಷ ಮೊದಲು ಐದು ಕೆರೆಗಳನ್ನು ಕಟ್ಟಲು ಒಂದು ಯೋಜನೆಯನ್ನೂ ಮಾಡಿದರು. ಆದರೆ ಅದನ್ನು ಈ ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ. ರಸ್ತೆ ನೋಡಿದರೆ, ಇದರ ಸಲುವಾಗಿ ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಎರಡು ವರ್ಷದ ಹಿಂದೆ ಇದನ್ನು ಮುಗಿಸುತ್ತೇವೆಂದು ವಚನವಿತ್ತರು, ಆದರೆ ಇನ್ನೂ ಕೂಡ ಇದು ಮುಗಿದಿಲ್ಲ. ಸೇತುವೆ ಮಾಡುತ್ತೇನೆ ಕಾರಂಜಿಯಲ್ಲಿ, ಕೂಡಲೇ ಮಾಡುತ್ತೇನೆ ಎಂದು ಹೇಳಿದರು, ಆದರೆ ಬಡ್ಜೆಟ್ ಭಾಷಣವನ್ನು ನೋಡಿದರೆ, ಒಂದು ಕೋಟಿ ಎಪ್ಪತ್ತೈದು ಲಕ್ಷ ಹಾಕಿಕೊಂಡಿದ್ದರೂ ಸಾಧ್ಯವಿದ್ದರೆ, ಹಣ ದೊರಕಿದರೆ ಮಾಡುತ್ತೇವೆ ಇಲ್ಲದಿದ್ದರೆ ಇಲ್ಲ ಎಂದು ಹೇಳಿದ್ದಾರೆ.

ಹೈಸ್ಕೂಲು ಕಟ್ಟಡದ ವಿಷಯ ಹೇಳುವುದಾದರೆ ಬೀದರ್ ಜಿಲ್ಲೆಯ ಹುಮ್ನಾಬಾದು ತಾಲ್ಲೂಕಿನ ಮೊರವಿಯಲ್ಲಿ ಕೇವಲ ಎಂಟು ಮಂದಿ ವಿದ್ಯಾರ್ಥಿಗಳಿದ್ದರೂ ಅಲ್ಲಿ ಒಂದು ಹೈಸ್ಕೂಲು ನಡೆಸುತ್ತಿದ್ದಾರೆ. ಮೂರು ಲಕ್ಷ ರೂಪಾಯನ್ನು ಕಟ್ಟಡಕ್ಕಾಗಿ ಖರ್ಚು ಮಾಡಿದ್ದಾರೆ. ಶಾಲೆ ನಡೆಸುತ್ತಿದ್ದಾರೆ, ಸಿಬ್ಬಂದಿ ಖರ್ಚು ದಂಡವಾಗುತ್ತಿದೆ. ಆದರೆ ಭಾಲ್ಕಿಯಲ್ಲಿ ಒಂದು ಸಾವಿರ ಜನ ವಿದ್ಯಾರ್ಥಿಯರಿದ್ದಾರೆ. ಆ ಕಟ್ಟಡದಲ್ಲಿ ಕುದುರೆ ಕತ್ತೆಗಳನ್ನು ಕಟ್ಟುವುದಕ್ಕೆ ಕೂಡ ಆಗುವುದಿಲ್ಲ. ಅಲ್ಲಿ ಹುಡುಗರು ಕೂಡುವುದಕ್ಕೂ ಜಾಗವಿಲ್ಲ ಅಂತಹ ಪರಿಸ್ಥಿತಿಯಲ್ಲಿಟ್ಟಿದ್ದಾರೆ. ಇದಕ್ಕೆ ಕಾರಣವೇನೆಂದು ಹೇಳಲಿ. ಅಲ್ಲಿನ ಎಂ. ಎಲ್. ಎ. ತಮ್ಮ ಪಕ್ಷದವರು, ತಮ್ಮ ನೆಂಟರಿಷ್ಟರು ಅಲ್ಲಿದ್ದಾರೆ, ಅವರ ಮಾತನ್ನು ಕೇಳಿ ಸರಕಾರದ ಹಣವನ್ನು ಅಲ್ಲಿ ವ್ಯರ್ಥಮಾಡುತ್ತಿದ್ದಾರೆ. ಬೇರೆ ಕಡೆ ಅಗತ್ಯವಿದ್ದರೂ ಖರ್ಚು ಮಾಡುವುದಿಲ್ಲ. ಗುಲ್ಬರ್ಗದಲ್ಲಿ ಕಾರಂಜ ಯೋಜನೆಯನ್ನು ತೆಗೆದುಕೊಂಡಿದ್ದಾರೆ. ಹಿಂದುಳಿದ ಜಿಲ್ಲೆಯಾದ ಬಿದರ್‌ನಲ್ಲಿ ಚಂದ್ರಂಪಳ್ಳಿ ಯೋಜನೆಯನ್ನು ತೆಗೆದುಕೊಳ್ಳಬೇಕು. ಆದರೆ ಅದನ್ನು ನಿರ್ಲಕ್ಷ್ಯಮಾಡಿದ್ದಾರೆ. ಒಟ್ಟಿನಲ್ಲಿ ಇದನ್ನೆಲ್ಲ ನೋಡಿದರೆ ನನಗನಿಸುತ್ತದೆ, ನಿಜಾಮ್ ಕಾಲದಲ್ಲಿ ಹೈದರಾಬಾದಿನಲ್ಲಿ ರಜಾಕರರ ಆಡಳಿತದಲ್ಲಿ ಮುಸ್ಲಿಮರು ಮತ್ತು ಮುಸ್ಲಿಮೇತರರು ಎಂಬ ಭೇದ ಭಾವನೆಯಿಂದ ನೋಡುತ್ತಿದ್ದರು ; ಅವರ ರಾಜ್ಯ ಹೊರಟು ಹೋಯಿತು. ಹಾಗೆ ಈ ಸರಕಾರದಲ್ಲಿ ಪಕ್ಷಪಾತ ಭಾವನೆ ಬೆಳೆಯುತ್ತಿದೆ. ಹಿಂದೆ ಹೈದರಾಬಾದಿನಲ್ಲಿ ಮುಸ್ಲಿಂ ರಜಾಕರರು ಮಾಡುತ್ತಿದ್ದರು, ಈಗ ಇಲ್ಲಿ ಕಾಂಗ್ರೆಸ್ ರಜಾಕರರ ರಾಜ್ಯ ಎಂದು ಕಾಣುತ್ತದೆ. ಬೇರೆ ಹೈದರಾಬಾದು ಕರ್ಣಾಟಕದಲ್ಲಿ ತೆಗೆದುಕೊಂಡದ್ದು ಯಾವುದನ್ನೂ ಸರಿಯಾಗಿ ಮಾಡಿಲ್ಲ. ಇಂಟರ್‌ಸ್ಟೇಟ್ ಸೀನಿಯಾರಿಟಿ ಪಟ್ಟಿಯನ್ನು ನೋಡಿದರೆ, ಅಲ್ಲಿ ಸೆಕೆಂಡ್ ಗ್ರೇಡ್‌ನಲ್ಲಿದ್ದವರನ್ನು ಹಾಗೆಯೇ ಇಟ್ಟಿದ್ದಾರೆ. ಅವರಿಗೆ ಯಾವ ಪ್ರಮೋಷನ್ ಇಲ್ಲ. ಏಳು ವರ್ಷ ಆಯಿತು ಇನ್ನೂ ಪರಿಶೀಲನೆಯಲ್ಲಿದೆ, ತೀರ್ಮಾನ ಮಾಡಿಲ್ಲ. ಗುಲ್ಬರ್ಗದಲ್ಲಿ ರಿಕ್ರೂಟ್‌ಮೆಂಟ್ ಕಮಿಟಿ ಮಾಡಿದ್ದಾರೆ, ಅಲ್ಲಿ ಬಿದರ್ ಜಿಲ್ಲೆಯಿಂದ ಬಂದ 98 ಅರ್ಜಿಗಳನ್ನು ನಿರಾಕರಿಸಿದ್ದಾರೆ. ಅದಕ್ಕೆ ಕಾರಣ ಗೊತ್ತಿಲ್ಲ. ಹಿಂದುಳಿದ ಜಿಲ್ಲೆಯಲ್ಲಿ ಏನು ಕಾರ್ಯ ಮಾಡಬೇಕೆಂದರೂ ಕೂಡ ಈ ರೀತಿ ನೀತಿಯನ್ನು ಕೈಗೊಂಡಿರುವುದು ಒಳ್ಳೆಯದಲ್ಲವೆಂದು ಹೇಳುತ್ತೇನೆ.

ಮಹಾರಾಷ್ಟ್ರ ಮೈಸೂರುಗಳ ಸಂಬಂಧವಾಗಿ ಬಿದರ್ ಜಿಲ್ಲೆಯ ವಿಷಯವನ್ನು ಶ್ರೀಮಾನ್ ಸುಂಠನಕರ್ ಅವರು ಹೇಳಿದರು. ಪಾರ್ಲಿಮೆಂಟಿನಲ್ಲಿ ಈ ವಿಷಯ ಒಂದು ಸ್ಟೇಟ್ಸ್ ರೀ-ಆರ್ಗನೈಸೇಷನ್ ಕಾನೂನು ಅಲ್ಲಿ ಪಾಸ್ ಆಯಿತು. ಆಂಧ್ರ, ಕರ್ಣಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಜನರು ಮತ್ತು ಸರಕಾರದವರು ಸೇರಿ ಚರ್ಚಿಸಿ ನಿರ್ಣಯ ತೆಗೆದುಕೊಂಡರು. ಅಲ್ಲಿನ ಜನರ ಪ್ರತಿನಿಧಿಗಳು ಡೆಲ್ಲಿಗೆ ಹೋಗಿ ನಿರ್ಣಯವಾದನಂತರ ಮತ್ತೊಮ್ಮೆ ನಿರ್ಣಯ ಮಾಡಬೇಕೆಂದರೆ ಅದು ತಪ್ಪಾಗುತ್ತದೆ. ಅಖೈರಾಗಿ ತೀರ್ಮಾನವಾಗಿರುವ ವಿಷಯವನ್ನು ಹೊಸದಾಗಿ ತೆಗೆದುಕೊಳ್ಳಬಾರದು. ಅವರು ಏಕೆ ಹೀಗೆ ಚಳವಳಿ ಮಾಡುತ್ತಿದ್ದಾರೆಂದರೆ, ಸರಕಾರದ ತಪ್ಪಿನಿಂದ. ಈ ವಿಷಯ ಅಖೈರಾಗಿ ತೀರ್ಮಾನವಾಗಿದೆ ಮತ್ತೆ ಇದನ್ನು ಎತ್ತಬಾರದು ಎಂದು ಸ್ಪಷ್ಟವಾಗಿ ಹೇಳಬೇಕು ಹಾಗೆ ಹೇಳದೇಯಿರುವುದು ಸರಕಾರದ ತಪ್ಪು. ಒಟ್ಟನಲ್ಲಿ ಸರಕಾರ ಎಲ್ಲಿಯವರೆಗೆ ಪಕ್ಷಪಾತ ನೀತಿಯನ್ನು ಬಿಡುವುದಿಲ್ಲವೋ ಅಲ್ಲಿಯವರೆಗೆ ರಾಜ್ಯದಲ್ಲಿ ಶಾಂತಿ ಬರುವುದಿಲ್ಲ. ಸಮಾಜವಾದವನ್ನು ಹೇಳುವವರು ಸಮಾಜವಾದದ ದೃಷ್ಟಿಯಿಂದ ಎಲ್ಲರಿಗೂ ಒಂದೇ ರೀತಿಯಲ್ಲಿ ಸರಿಯಾಗಿ ನಡೆಯಲು ಪ್ರಯತ್ನ ಮಾಡಬೇಕೆಂದು ಹೇಳಿ ನನಗಿಷ್ಟು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

† ಶ್ರೀ ಎನ್. ವೀರಪ್ಪ (ಷಿಕಾರಿಪುರ).—ಮಾನ್ಯ ಅಧ್ಯಕ್ಷರೆ, ಅರ್ಥಮಂತ್ರಿಗಳು ನಮ್ಮ ಮುಂದಿಟ್ಟಿರುವ ಬಡ್ಜೆಟ್ಟನ್ನು ಅನುಮೋದಿಸುತ್ತಾ ಷಿಕಾರಿಪುರ ತಾಲ್ಲೂಕಿನಲ್ಲಿರುವ ಕೆಲವು ಕುಂದು ಕೊರತೆಗಳನ್ನು ಸರಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ತಾಲ್ಲೂಕಿನ ಟಾಲಗುಂದ ಮತ್ತು ಬೆಲಗಾವಿ ಹೋಬಳಿಗಳಲ್ಲಿ ನೀರಿಲ್ಲದೆ ಆಗಾಗ ಈ ಪ್ರದೇಶಗಳು ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಿವೆ.

(ಶ್ರೀ ಎಸ್. ವೀರಪ್ಪ)

ಈ ವರ್ಷ ಕಾಲಕ್ಕೆ ಸರಿಯಾಗಿ ಮಳೆ ಬಾರದೆ ಮೂರು ಹೋಬಳಿಗಳಲ್ಲಿ ಎರಡಾಣಿ ಬೆಳೆ ಕೂಡ ಆಗದೆ ಅಲ್ಲಿನ ಜನರು ಕಷ್ಟವನ್ನನುಭವಿಸುತ್ತಿದ್ದಾರೆ. ಆದುದರಿಂದ ಮಾನ್ಯ ರೆವಿನ್ಯೂ ಮಂತ್ರಿಗಳು ಆ ಮೂರು ತಾಲ್ಲೂಕುಗಳಿಗೆ ಭೇಟಿ ಕೊಟ್ಟು ಸೂಕ್ತವಾದ ಸಹಾಯವನ್ನೊದಗಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಈ ಮೂರು ಹೋಬಳಿಗಳಲ್ಲಿ ಮೈನರ್ ಮತ್ತು ಮೇಜರ್ ಕೆರೆಗಳು ಹೆಚ್ಚಾಗಿರುವುದರಿಂದಲೂ ಅವುಗಳಲ್ಲಿ ಅನೇಕ ಕೆರೆಗಳು ನಾದುರಸ್ತಾಗಿರುವುದರಿಂದಲೂ ಅವುಗಳ ಬಗ್ಗೆ ಹೆಚ್ಚು ಗ್ರಾಂಟು ಕೊಟ್ಟು ಅವುಗಳನ್ನು ದುರಸ್ತು ಮಾಡಿಸುವುದಲ್ಲದೆ ಅಲ್ಲಿನ ಜನರಿಗೆ ಕೂಲಿ ದೊರಕಲು ಸಹಾಯ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಬೆಲಗಾವಿ ರಸ್ತೆಯ ವಿಷಯವನ್ನು ಹದಿನೈದು ವರ್ಷಗಳಿಂದ ಹೇಳುತ್ತಿದ್ದೇನೆ, ಈ ವರ್ಷ ಅದನ್ನು ಸ್ಟೇಟ್ ಫಂಡ್ ರಸ್ತೆಯಾಗಿ ತೆಗೆದುಕೊಂಡಿದ್ದಾರೆ. ಜಾಗ್ರತೆ ಅದಕ್ಕೆ ಅಗತ್ಯವಾದ ಗ್ರಾಂಟನ್ನು ಮಂಜೂರು ಮಾಡಿ ಕೆಲಸವನ್ನು ಕೈಗೊಂಡು ಸುಮಾರು ಇಪ್ಪತ್ತು ಹೋಬಳಿಗಳಿಗೆ ಅನುಕೂಲ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಂಬ್ಲಿಗೋಳ ಯೋಜನೆ ಪ್ರಾರಂಭವಾಗಿ ಅನೇಕ ವರ್ಷವಾಯಿತು. ಇದರ ಸಂಬಂಧವಾಗಿ ಅನೇಕ ಜನರು ತಮ್ಮ ಭೂಮಿಯನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಸರಕಾರದಿಂದ ಅವರಿಗೆ ಪರಿಹಾರ ದೊರಕದೇಯಿರುವುದರಿಂದ ಬಹಳ ಕಷ್ಟಕ್ಕೀಡಾಗಿದ್ದಾರೆ. ಈ ಬರಗಾಲದಲ್ಲಿ ಅವರಿಗೆ ಬೇಗ ಸಹಾಯವನ್ನೊದಗಿಸಬೇಕೆಂದು ಪ್ರಾರ್ಥಿಸುತ್ತೇನೆ.

ಎರಡನೆಯದಾಗಿ ಸಹಕಾರ ಸಂಘಗಳ ವಿಚಾರ. ಸಹಕಾರ ಸಂಘಗಳನ್ನು ಮಾಡಿರುವುದು ನಮ್ಮ ರೈತರ ಹಿತಕ್ಕಾಗಿ. ಆದರೆ ಕೆಲವು ರೈತರು ಇದನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆಂದು ವಿಷಾದದಿಂದ ಹೇಳಬೇಕಾಗಿದೆ. ಪ್ರತಿ ಹಳ್ಳಿಯಲ್ಲಿಯೂ ಕೂಡ ಎರಡು ಪಕ್ಷ ಅಥವಾ ಪಾರ್ಟಿಗಳಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಒಂದು ಸಾರಿ ಒಂದು ಪಕ್ಷದವರು ಸಂಘದ ಚುನಾವಣೆಯಲ್ಲಿ ಡೈರೆಕ್ಟರುಗಳಾಗಿ, ಸೆಕ್ರೆಟರಿ ಮತ್ತು ಪ್ರೆಸಿಡೆಂಟರಾಗಿ ಚುನಾಯಿತರಾಗಿ ಬಂದ ಮೇಲೆ ಆ ವರ್ಷ ಎಲ್ಲ ಸದಸ್ಯರಿಂದ ಹಣ ತೆಗೆದುಕೊಂಡು, ಅವರ ಕಡೆಯವರಿಗೆ ಸಾಲಗಳನ್ನು ಕೊಡುತ್ತಾರೆ. ಅವರಲ್ಲಿ ಅನೇಕರು ಡಿಫಾಲ್ಟರುಗಳಾಗುತ್ತಾರೆ. ಅವರ ಮೇಲೆ ಸೂಕ್ತ ಕಾರ್ಯಕ್ರಮವನ್ನು ಕೈಗೊಂಡು ಬಾಕಿ ವಸೂಲು ಮಾಡುವುದಿಲ್ಲ. ಅವರಿಗಿಂತ ಮುಂಚಿತವಾಗಿ ಸಾಲಕ್ಕೆ ಅರ್ಜಿ ಹಾಕಿರುವವರಿಗೆ ಸಾಲಗಳನ್ನು ಮಂಜೂರು ಮಾಡುವುದಿಲ್ಲ, ಇಂತಹ ಅವ್ಯವಸ್ಥೆಗಳನ್ನು ಸರಿಪಡಿಸಿ ಬಾಕಿನಿಂತಿರುವುದನ್ನು ಅವರಿಂದ ವಸೂಲು ಮಾಡುವುದಲ್ಲದೆ ಮುಂಚಿತವಾಗಿ ಅರ್ಜಿಗಳನ್ನು ಹಾಕಿಕೊಂಡಿರುವವರಿಗೆ ಸಾಲ ಜಾಗ್ರತೆ ಸಿಕ್ಕುವಂತೆ ಅನುಕೂಲ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಕೆಲವು ಸಹಕಾರ ಸಂಘಗಳಲ್ಲಿ ಅಲ್ಲಿನ ಸೆಕ್ರೆಟರಿಗಳು ಸಂಘದ ಹಣವನ್ನು ಸ್ವಂತ ಉಪಯೋಗಕ್ಕೆ ಬಳಸಿಕೊಂಡಿದ್ದಾರೆಂದು ಕೇಳಿದ್ದೇನೆ. ಈ ವಿಚಾರವನ್ನು ಸಂಬಂಧಪಟ್ಟ ಇಲಾಖೆಯ ಇನ್‌ಸ್ಪೆಕ್ಟರಿಗೆ ಮತ್ತು ಇತರ ಅಧಿಕಾರಿಗಳಿಗೆ ತಿಳಿಸಿದರೂ ಕೂಡ ಅವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದಕ್ಕೆ ಗಮನ ಕೊಟ್ಟು ಸಂಘಗಳು ಸರಿಯಾಗಿ ಕೆಲಸ ಮಾಡುವಂತೆ ಅನುಕೂಲಮಾಡಬೇಕೆಂದು ಸರಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ.

[MR. DEPUTY SPEAKER in the Chair]

ಇನ್ನೊಂದು ವಿಷಯದ ಬಗ್ಗೆ ನಾಲ್ಕು ಮಾತು ಹೇಳಲು ಬಯಸುತ್ತೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ದೇಶದಲ್ಲಿ ಪಾನನಿರೋಧ-ಪ್ರೊಹಿಬಿಷನ್-ಜಾರಿಗೆ ಬಂದಿದೆ. ಆದರೆ ಇದು ಸರಿಯಾಗಿ ಕಾರ್ಯಗತವಾಗಿಲ್ಲ ಎಂದು ಹೇಳಬೇಕಾಗಿದೆ. ಬ್ರಿಟಿಷರ ಕಾಲದಲ್ಲಿ ಹರಾಜು ಮಾಡಿ ಜವಾಬ್ದಾರಿಯಿಂದ ನಡೆಸಿಕೊಂಡು ಹೋಗುತ್ತಿದ್ದರು. ಆಗ್ಗೆ ಕಳ್ಳಭಟ್ಟಿ ಸರಾಯಿ ಇರಲಿಲ್ಲ. ಈಗ ಮದ್ಯಪಾನ ನಿರೋಧ ಜಾರಿಗೆ ಬಂದ ಮೇಲೆ ಪ್ರತಿಯೊಂದು ಹಳ್ಳಿಯಲ್ಲಿ ನಾಲ್ಕು ಸೇಂದಿ ಅಂಗಡಿಗಳು ತಯಾರಾಗಿವೆ. ಪೋಲೀಸಿನವರಿಗೆ ಮಾಮೂಲು ಕೊಟ್ಟುಬಿಟ್ಟು ಭ್ರಷ್ಟಾಚಾರ ನಡೆಸುತ್ತಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಎಂಟುಹತ್ತು ಸಮಿತಿಗಳನ್ನು ನೇಮಕ ಮಾಡಿ ಸೂಕ್ತ ಕ್ರಮ ತೆಗೆದುಕೊಂಡು ಇಂಥ ಭ್ರಷ್ಟಾಚಾರ ತಡೆಗಟ್ಟಬೇಕೆಂದು ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕು ಬಹಳ ಹಿಂದುಳಿದ ತಾಲ್ಲೂಕು ಆಗಿದೆ. ಕಳೆದ 15 ವರ್ಷಗಳಿಂದ ಈ ತಾಲ್ಲೂಕು ರಿಜರ್ವ್ ಕಾನ್‌ಸ್ಟಿಟ್ಯೂಷನ್ ಆಗಿದೆ ಎಂಬುದು ಸರಕಾರಕ್ಕೆ ಗೊತ್ತಿದೆ. ಆದುದರಿಂದ ಇದು ಹಿಂದುಳಿದಿದೆ. ಇಲ್ಲಿಯ ಹಿಂದುಳಿದ ವರ್ಗದ ಪಂಗಡದವರಿಗೆ ಸರಕಾರ ಯಾವದೇ ಸೌಲಭ್ಯ ಒದಗಿಸಿಲ್ಲ ಎಂದು ಹೇಳ ಬಯಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಕೆಲವು ಹಳ್ಳಿಗಳಲ್ಲಿ ಕುಡಿಯುವ

ನೀರಿನ ಬಾವಿ ಇಲ್ಲ, ಮಕ್ಕಳ ವಿದ್ಯಾಭ್ಯಾಸಕ್ಕೆ ಸ್ಕೂಲು ಇಲ್ಲ. ಹಿಂದುಳಿದ ಪಂಗಡದವರಿಗೆ ಸರಕಾರ ನೇರವಾಗಿ ಗ್ರ್ಯಾಂಟ್‌ಕೊಟ್ಟು ಕುಡಿಯುವ ನೀರಿನ ಬಾವಿ ವ್ಯವಸ್ಥೆ ಮಾಡಬೇಕು. ಮನೆ ಕಟ್ಟಲು ಗ್ರ್ಯಾಂಟ್‌ಕೊಟ್ಟು ಸಹಾಯ ಮಾಡಬೇಕೆಂದು ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಅನೇಕ ವಿಷಯಗಳ ಮೇಲೆ ನಾನು ಮಾತನಾಡಬೇಕಾಗಿದೆ, ನಾನು ಯಾವ ವಿಷಯದ ಮೇಲೆ ಮಾತನಾಡಬೇಕು ಎಂಬುದನ್ನು ಹೇಳಿದರೆ ಒಳ್ಳೆಯದಾಗುತ್ತದೆ. ವಿರೋಧ ಪಕ್ಷದ ಸದಸ್ಯರು ಬರೀ ಕ್ರಿಟಿಸೈಜ ಮಾಡುತ್ತಾರೆ, ರಚನಾತ್ಮಕ ಸಲಹೆ ಕೊಡಲಿಲ್ಲ ಎಂದು ಕೆಲವರು ಹೇಳಿದರು. ಅವರೂ ಕೂಡ ಯಾವ ರಚನಾತ್ಮಕ ಸಲಹೆ ಹೇಳಲಿಲ್ಲ. ವಿರೋಧ ಪಕ್ಷದ ಮೇಲೆ ಕಾರಣವಿಲ್ಲದೆ ಅಪಾದನೆ ಮಾಡುತ್ತಾರೆ. ವಿರೋಧ ಪಕ್ಷದವರು ರಚನಾತ್ಮಕ ಸಲಹೆ ಕೊಡುತ್ತಾರೆ. ಅಧಿಕಾರ ಪಕ್ಷದಲ್ಲಿಯ ಸದಸ್ಯರೊಬ್ಬರು ಮಾತನಾಡುತ್ತಾ ಪಾನ ನಿರೋಧ ಜಾರಿ ಇರುವ ಪ್ರದೇಶದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿ ನಾಲ್ಕು ಸೇಂಧಿ ಅಂಗಡಿಗಳು ಇವೆ ಎಂದು ಹೇಳಿದರು. ಇಂಥಾ ಮುಖ್ಯ ವಿಚಾರವನ್ನು ಯಾರೂ ನೋಟ್ ಮಾಡಿಕೊಳ್ಳಲಿಲ್ಲ. ಯಾವದೋ ಒಂದು ತತ್ವಕ್ಕೆ ಅಂಟಿಕೊಂಡು ಪಾನನಿರೋಧ ಜಾರಿ ಮಾಡಲು ಪ್ರಯತ್ನ ನಾಡುತ್ತಿದ್ದೀರಿ. ಆದರೆ ಅದು ಯಶಸ್ವಿಯಾಗಿಲ್ಲ. ಸರಕಾರಕ್ಕೆ ಬರಬೇಕಾದ ಹಣ ಬರುತ್ತಿಲ್ಲ. ಈ ರೀತಿ ಯಾದರೆ ಸರಕಾರಕ್ಕೆ ಎಲ್ಲಿಂದ ಹಣ ಬರಬೇಕು ? ನೀರಾವರಿ ರಸ್ತೆ ಕಾಮಗಾರಿಗಳು ಹೇಗೆ ಆಗಬೇಕು ? ಇದರಿಂದ ಜನರಿಗೆ ಬಹಳ ತೊಂದರೆಯಾಗಿದೆ ಎಂದು ಹೇಳಬಯಸುತ್ತೇನೆ.

ಶ್ರೀಮಾನ್ ದುಗ್ಗಪ್ಪನವರು ಮಾತನಾಡುತ್ತಾ ಒಂದು ವಿಷಯ ಹೇಳಿದರು. ಹದಿನೇಳು ಜನ ಸೋಷಿಯಲ್ ಆಫೀಸರರನ್ನು ತೆಗೆದು ಹಾಕಿದ್ದೀರಿ. ಇದು ನ್ಯಾಯವೇ ? ಏನಾದರೂ ಆಪಾದನೆ ಬಂದರೆ ರಾಜೀನಾಮೆ ಕೊಡುತ್ತೇವೆಂದು ಹೇಳಿದ್ದಿರಿ, ಹಾಗಾದರೆ ಇನ್ನೂವರೆಗೆ ಏಕೆ ರಾಜೀನಾಮೆ ಕೊಡಲಿಲ್ಲ ? ನೀವು ಮಂತ್ರಿಗಳಾದ ಮೇಲೆ ಇರಲು ದೊಡ್ಡ ದೊಡ್ಡ ಮನೆ ಸಿಕ್ಕಿದೆ, ದೊಡ್ಡ ದೊಡ್ಡ ಕೋಟು ಹಾಕಿಕೊಂಡು ತಿರುಗಾಡುತ್ತೀದ್ದೀರಿ. ಇದುವರೆಗೂ ಸೀನಿಯಾರಿಟಿ ಲಿಸ್ಟ ಫೈನಲ್ಲಾಗಿ ಮಾಡಿಲ್ಲ. ಆಫೀಸುಗಳಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಯಾವಾಗಲೂ ಇದೇ ವಿಷಯವನ್ನೇ ಮಾತನಾಡುತ್ತಿರುತ್ತಾರೆ. ಕೆಲಸದ ಕಡೆಗೆ ಅವರ ಗಮನ ಇಲ್ಲ. ಈ ಸೀನಿಯಾರಿಟಿ ಬಗ್ಗೆ ಖಚಿತವಾದ ಉತ್ತರ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ತುಮಕೂರಿನಲ್ಲಿ ಒಬ್ಬ ಅಧಿಕಾರಿಗೆ 22 ವರ್ಷ ಸರ್ವಿಸ್ ಆಗಿದೆ, ಅವನು ಸರ್ವಿಸ್ ಬಿಟ್ಟು ಎಲ್ಲಿಗೆ ಹೋಗಬೇಕು ತಾವು ದಯವಿಟ್ಟು ಯೋಚನೆಮಾಡಿ. ಅಂಥವರಿಗೆ ಬಹಳ ಭಯ ಬಂದಿದೆ.

ಎಲ್ಲ ಜನರೂ ಒಂದು ಮಾತು ಹೇಳಿದ್ದಾರೆ. ನಾನೂ ಅದೇ ಸಲಹೆ ಮಾಡುತ್ತೇನೆ. ಪಾನ ನಿರೋಧ ತಕ್ಷಣ ಕ್ಲೋಜ್‌ಮಾಡಿ ಬಿಡಬೇಕು. ಪಾನ ನಿರೋಧ ಜಾರಿ ಮಾಡಿರುವುದನ್ನು ಮುಂದುವರಿಸುವುದರಲ್ಲಿ ಲಾಭವಿಲ್ಲ. ನಮ್ಮ ನೆರೆ ರಾಜ್ಯಗಳಾದ ಆಂಧ್ರ, ಮದ್ರಾಸ, ಮಹಾರಾಷ್ಟ್ರಗಳಲ್ಲಿ ಪಾನ ನಿರೋಧ ಕಾನೂನನ್ನು ಸಡಿಲಿಸಿದ್ದಾರೆ. ಈ ರೀತಿ ಇಲ್ಲಿಯೂ ಮಾಡಿದರೆ ಸರಕಾರಕ್ಕೆ ಹಣ ದೊರೆಯುತ್ತದೆ. ಹಾಗೂ ಒಂದು ಪ್ರೊಜೆಕ್ಟು ನಾಲ್ಕು ವರ್ಷಗಳಲ್ಲಿ ಮುಗಿಯಬೇಕಾದುದು ಎರಡು ವರ್ಷಗಳಲ್ಲಿ ಮುಗಿಯುತ್ತದೆ. ಪಾನ ನಿರೋಧ ತತ್ವ ಒಪ್ಪಿಕೊಳ್ಳೋಣ. ಅದನ್ನು ಯಶಸ್ವಿಗೊಳಿಸಲು ಜನರ ನೈತಿಕ ಮಟ್ಟ ಹೆಚ್ಚಿಸೋಣ. ಜನರಿಗೆ ನೀತಿ ಬೋಧನೆ ಮಾಡೋಣ. ನೈತಿಕ ಮಟ್ಟ ಹೆಚ್ಚಿದರೆ ಜನರು ಆರೋಗ್ಯದಿಂದ ಇರುತ್ತಾರೆ. ಆದುದರಿಂದ ಈ ಪಾನ ನಿರೋಧವನ್ನು ತಕ್ಷಣ ಬಿಟ್ಟುಬಿಡಬೇಕೆಂದು ಹೇಳುತ್ತೇನೆ.

6-00 P.M.

ಈ ಪಿ. ಡಬ್ಲ್ಯು. ಡಿ ಯಲ್ಲಿ "ಎ" ಕ್ಲಾಸ್ ಎಂದು ಒಂದು ಕಂಟ್ರಾಕ್ಟ್ ವರ್ಗವನ್ನು ನಿರ್ಮಾಣ ಮಾಡಿದ್ದಾರೆ. ಅದರಿಂದ ಹಣ ದುರುಪಯೋಗವಾಗುತ್ತಿದೆ. ಅದು ವಿಶ್ವಾಮಿತ್ರ ಸೃಷ್ಟಿ. ಅವರು ಮಂತ್ರಿಗಳನ್ನು ಕೆಳಗಿಳಿಸುವುದಕ್ಕೆ ಸಿದ್ಧರಾಗಿದ್ದಾರೆ; ಅವರನ್ನು ಎಲೆಕ್ಷನ್ನಿನಲ್ಲಿ ಸೋಲಿಸಿ ಮನೆಗೆ ಕಳುಹಿಸಲೂ ತಯಾರಾಗಿದ್ದಾರೆ. ಅವರಿಗೆ ಅಷ್ಟು ಸಾಮರ್ಥ್ಯವಿದೆ. ಅವರು ಮಾಡಿರತಕ್ಕಂಥ ಕಂಟ್ರಾಕ್ಟುಗಳಲ್ಲಿ 25-30-40-50 ಪರ್ಸೆಂಟು ದರವನ್ನು ಜಾಸ್ತಿ ಮಾಡಿದ್ದಾರೆಯೇ ವಿನಃ ಯಾವುದನ್ನೂ ಕಡಿಮೆಯಲ್ಲಿ ಮಾಡಿಲ್ಲ. ಈ ಕ್ಲಾಸಿನ ಕಂಟ್ರಾಕ್ಟುದಾರರ ಸಂಬಂಧವೆಲ್ಲಾ ಚೀಫ್ ಇಂಜನಿಯರು, ಸಂಬಂಧಪಟ್ಟ ಮಂತ್ರಿಗಳು ಅಥವಾ ಸಣ್ಣ ಸಣ್ಣ ಮಿನಿಸ್ಟರುಗಳೊಡನೆ ಮಾತ್ರ. ಅವರು ಅಸಿಸ್ಟೆಂಟ್ ಇಂಜನಿಯರು, ಎಕ್ಸಿಕ್ಯೂಟೀವ್ ಇಂಜನಿಯರು, ಮತ್ತಿತರರ್‍ಯಾರನ್ನೂ ಲಕ್ಷಕ್ಕೇ ಇಟ್ಟುಕೊಳ್ಳುವುದಿಲ್ಲ. ಈ ಕ್ಲಾಸಿನವರನ್ನು ತೆಗೆದರೆ ಕೋಟ್ಯಂತರ ರೂಪಾಯಿ ನಮ್ಮ ದೇಶಕ್ಕೆ ಉಳಿಯುತ್ತದೆ, ಇದು ಸತ್ಯವಾದ ಮಾತು. ನಿಮಗೆ ಬರುವ ವರಮಾನವನ್ನು ಹೇಳಿ, ಆಸ್ತಿಗಳ ಪಟ್ಟಿಯನು

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಕೊಡಿ ಅಂದರೆ ಒಬ್ಬರೂ ಹೇಳುವುದಿಲ್ಲ, ಕೊಡುವುದಿಲ್ಲ. ತಾವು ಇದಕ್ಕೆ ಮನಸ್ಸು ಕೊಡುತ್ತಿಲ್ಲ ವೆಂದರೆ ಅನುಮಾನ ಬರುತ್ತದೆ. ಮಂತ್ರಿಗಳು ಎಲೆಕ್ಷನ್ ಟೈಮಿನಲ್ಲಿ ಅದೆಷ್ಟು ಹಣ, ಜೀಪು ಉಪ ಯೋಗಿಸುತ್ತಾರೆ ಇಷ್ಟೊಂದು ಜೀಪುಗಳಿಗೆ ನಿಮಗೆ ಎಲ್ಲಿಂದ ಬರುತ್ತದೆ, ದೇಶದಲ್ಲಿ ಇನ್ಯಾವ ಉಮೇ ದುವಾರರು ಇಷ್ಟೊಂದನ್ನು ಕಮ್ಯಾಂಡ್ ಮಾಡಲಾರರು. ಚುನಾವಣೆ ಕಾಲದಲ್ಲಿ ನೇಫಾ ಗಡಿಗೂ ಹೋಗದಷ್ಟು ಜೀಪುಗಳು ನಿಮ್ಮ ಕ್ಷೇತ್ರಕ್ಕೆ ಬಂದು ಬಿಡುತ್ತವೆ. ಇದಕ್ಕೆ ಕಾರಣ ಈ "A" ಕ್ಲಾಸೇ. ಈ "A", 'B' ಕ್ಲಾಸು ಬೇಡ. ಕ್ವಾಲಿಟೇಟೀವ್ ಮತ್ತು ಕ್ವಾಂಟೀಟೇಟಿವ್ ಎರಡನ್ನೂ ಫಿಟ್ಟು ನೋಡಿ, ದುಡ್ಡು ಕೊಡುವಂಥ ವ್ಯವಸ್ಥೆ ಮಾಡಬೇಕು.

ಮಾನ್ಯ ಮಿತ್ರರೊಬ್ಬರು ಹೇಳಿದರು. ಗುಲ್ಬರ್ಗದಲ್ಲೋ, ರಾಯಚೂರಿನಲ್ಲೋ ಲಿಫ್ಟ್ ಇರ್ರಿಗೇಷನ್ ಸ್ಕೀಮಿಗೆ ಒಂದು ಆಫೀಸು ಮಾಡಿದ್ದಾರೆಂದು ಬಿಲ್ಡಿಂಗ್ ಮಾಡಿದ್ದಾರೆ. ಆದರೆ ಅದಕ್ಕೆ ಸ್ಟಾಫೇ ಹಾಕಿಲ್ಲ. ಇಲ್ಲಿ ಕೇಳಿದರೆ ಸ್ಟಾಫ್ ಜಾಸ್ತಿ ಇದೆ, ಹಣವಿಲ್ಲ ಅಂತ ಹೇಳುತ್ತಾರೆ. ಅಲ್ಲಿ ಕೇಳಿದರೆ ಟೆಕ್ನಿಕಲ್ ಹ್ಯಾಂಡ್ ಸಿಗುವುದಿಲ್ಲವೆನ್ನುತ್ತಾರೆ. ಚೀಫ್ ಇಂಜನಿಯರು 25 ಜನ ಅಸಿಸ್ಟೆಂಟ್ ಇಂಜನಿಯರುಗಳನ್ನು ಟ್ರಾನ್ಸ್‌ಫರ್ ಮಾಡಿದ್ದಾರಂತೆ; ಅವರಿಗೆ ಯಾವ ಪ್ಲೇಸೂ ತೋರಿಸಿರು ವುದಿಲ್ಲ; ಅವರಿಗೆಲ್ಲಾ ಒಂದು ತಿಂಗಳು ರಜ ತೆಗೆದುಕೊಳ್ಳಿ ಅಂತ ಹೇಳಿದ್ದಾರಂತೆ. ಅವರುಗಳಿಗೆ ಉದ್ಯೋಗವಿಲ್ಲವೇ ಏಕೆ ರಜ ಫೋರ್ಸ್ ಮಾಡುತ್ತಿದ್ದಾರೆ ! ಒಂದು ಕಡೆ ಸ್ಟಾಫ್ ಇಲ್ಲ, ಇನ್ನೊಂದು ಕಡೆ ಸ್ಟಾಫಿಗೆ ಕೆಲಸವಿಲ್ಲ, ಜಾಸ್ತಿ ಇದ್ದಾರೆ.

ಇನ್ನು ಈ ಜರ್ ಕ್ಯಾರಿಯಿಂಗ್ ರೋಡ್ ಮೇಲೆ ಹಣ ಹಾಕಿದ್ದಾರೆ. ಈ ಯೋಜನೆಯಲ್ಲಿ ಎಷ್ಟು ಹಣ "ಜರೆ"ಯಲ್ಲಿ ಹೋಗಿದೆಯೋ? ಬಹಳ ದುಡ್ಡು ಈ ರೋಡಿನಲ್ಲಿ ಪೋಲಾಗುತ್ತಿದೆ. ಯಾರಾದರೂ ನನ್ನ ಜೊತೆ ಬರುವುದಾದರೆ ಅದನ್ನು ತೋರಿಸುತ್ತೇನೆ. ಇದನ್ನು ಕೂಲಂಕಷವಾಗಿ ವಿಚಾರ ಮಾಡಿ. ಪಿ.ಡಬ್ಲ್ಯು.ಡಿ. ಸಮರ್ಪಕವಾಗಿ ಕೆಲಸ ಮಾಡುತ್ತಿದೆಯೆಂದು ಹೇಳುತ್ತಾರೆ. ಇಲ್ಲಿಯೇ ಸರಕಾರದವರು ಜಮೀನನ್ನು ಅಕ್ವೈರ್ ಮಾಡಿಕೊಳ್ಳದೆ ರೋಡ್ ಮಾಡಿಸಿದ್ದೀರ ಅಂದ ದಕ್ಕೆ, ಅದು ಸುಳ್ಳು ಎಂದು ಹೇಳಿದರು. ಆಮೇಲೆ ಎಕ್ಸಿಕ್ಯೂಟೀವ್ ಇಂಜನಿಯರನ್ನು ಬರಮಾಡಿ ಕೊಂಡು ಕೇಳಿದ್ದರಲ್ಲ ನಾವು ಹೇಳಿದ್ದು ನಿಜವಾಯಿತು. ನಾವು ಸ್ಥಳೀಯರು, ನಮಗೆ ನಿಜಾಂಶ ಗೊತ್ತಿರುತ್ತದೆ; ಅದನ್ನು ಹೇಳಿದರೆ ಬೆಲೆ ಕೊಡುವುದೇ ಇಲ್ಲ. ನಾನು ಇವರುಗಳ ಪೂರ್ಣ ಹಿಸ್ಟರಿ ತಯಾರು ಮಾಡಿದ್ದೇನೆ. ಆ ಹಿಸ್ಟರಿ ಬಿಚ್ಚಬೇಕಾದರೆ ಕೆಲವು ಕಾಲಾವಕಾಶ ಬೇಕಾಗುತ್ತದೆ. ಈ ಪಾರ್ಲಿಮೆಂಟರಿ ಸೆಕ್ರೆಟರಿಯವರೇ ಆ ಪ್ರಶ್ನೆಯಲ್ಲಿ ನಾವು ಹೇಳಿದ್ದು ಸರಿ ಎಂದು ಒಪ್ಪಿಕೊಂಡರು. ಗುತ್ತಿಗೆಗೆ ಉಬ್ಬಸ ಬಂದಾಗ ಇವರಿಗೆ ನಾವು ಹೇಳಿದ್ದು ಗೊತ್ತಾಗುತ್ತದೆ. ಈ ರೋಡು ಆಗುತ್ತಿದೆ. ಆಗಿಹೋಗಿದೆ, 100 ಅಡಿ ಅಗಲ ರೋಡು ಕಾಂಪೆನ್ಸೇಶನ್ ಅದಕ್ಕೆ ಕೊಟ್ಟಿದ್ದೀರಿ ಎಂದು ಶಾಸನ ಸಭೆಯಲ್ಲಿ ಕೊಶ್ಚನ್ ಹಾಕಿದರೆ, ಸರಿಯಾಗಿ ಅದಕ್ಕೆ ಉತ್ತರ ಬರುವುದಿಲ್ಲ. ಇಂಥ ಮಂತ್ರಿಗಳು ಇರುವುದಕ್ಕಿಂತ ರಾಜೀನಾಮೆ ಕೊಟ್ಟು ಹೋಗುವುದು ಮೇಲು. ರಾಜೀನಾಮೆ ಕೊಟ್ಟರೆ ಇವರಿಗೆ ಉದ್ಯೋಗವೇನಿದೆ ?

ಇನ್ನು ಸೇಲ್ಸ್‌ಟ್ಯಾಕ್ಸ್, ಇನ್‌ಕಂಟ್ಯಾಕ್ಸ್ ವಿಚಾರ ಹೇಳಬೇಕಾದರೆ, ಚೆಕ್‌ಪೋಸ್ಟುಗಳಲ್ಲಿ ಲಾರಿಗಳ ಚೆಕಿಂಗಿಗೆ ಏರ್ಪಾಡು ಮಾಡಿದ್ದಾರೆ. ಆ ಚೆಕ್ ಪೋಸ್ಟಿನಲ್ಲಿ ಒಂದು ಲಾರಿ ರೋಡಿಗೆ 50 ರೂಪಾಯಿ ಲಂಚ ಕೊಟ್ಟರೆ ಹಾಗೆಯೇ ಬಿಟ್ಟುಬಿಡುತ್ತಾರೆ. ಅದೇನೋ ಫಾರಮ್ಮುಗಳು ಇರುತ್ತ ವಂತೆ ಅದರಲ್ಲಿ ಒಂದು ಫಾರಂ ರಿಜಿಸ್ಟರು ಮಾಡಿಕೊಂಡು ಬಂದಿರುತ್ತಾರೆ, ಎಲ್ಲಿಯಾದರೂ ಯಾರಾ ದರೂ ಹಿಡಿದರೆ, ಎಂಟ್ರಿ ಮಾಡುವುದು ಇಲ್ಲವಾದರೆ ಹರಿದುಹಾಕಿ ಬಿಡುವುದು ಇಂಥ ಸಂದರ್ಭ ವಿರುತ್ತದೆ.

ಶ್ರೀ ಬಿ. ಡಿ. ಜತ್ತಿ.—ನಾನು ದೂರುಗಳಿಗೆ ಬಹಳ ಬೆಲೆ ಕೊಡುತ್ತೇನೆ. ಅನೇಕ ಸಾರಿ ಸರ್‌ಪ್ರೈಸ್ ಚೆಕ್ ಮಾಡಿದ್ದೇನೆ; ಇಂಥ ಒಂದು ಇನ್‌ಸಿಡೆಂಟೂ ಕಂಡಿಲ್ಲ. ನಾನು ಮಧ್ಯರಾತ್ರಿ, ಅರ್ಲಿ ಮಾರ್ನಿಂಗ್ ಸರ್‌ಪ್ರೈಸಾಗಿ ಚೆಕ್ ಮಾಡಿದ್ದೇನೆ; ಅಕ್ರಮಗಳು ನನಗೆ ಕಂಡಿಲ್ಲ. ಆದರೆ ಸಣ್ಣಪುಟ್ಟ ರೋಡುಗಳಿಗೆಲ್ಲಾ ಅನ್‌ಲೋಡ್ ಮಾಡಿಸುತ್ತಿದ್ದರು. ಅದನ್ನು ನಿಲ್ಲಿಸಿ ಎಂದು ಹೇಳಿ ದ್ದೇನೆ. ನಿಮ್ಮ ಜೊತೆಗೆ surprise checking ಬರುವುದಕ್ಕೆ ಯಾವಾಗಲೂ ಸಿದ್ಧನಿದ್ದೇನೆ. ಬೇಕಾದರೆ ಫೋನ್‌ಮಾಡಿ, ಕೂಡಲೆ ಹೋಗೋಣ. ಅದಿಲ್ಲದೆ ಸುಮ್ಮನೆ ಅಪಾದನೆ ಮಾಡಿದರೆ ಚೆನ್ನಾಗಿರುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಬಹಳ ಸಂತೋಷ. ನನಗೆ ಬಂದ ವರ್ತಮಾನ ಹೇಳಿದೆ. ಒಬ್ಬ ಮಂತ್ರಿಗಳಾದರೂ ಇಷ್ಟರವುಟ್ಟಿಗೆ ಸೌಹಾರ್ದಯುತವಾದ ಭರವಸೆ ಕೊಟ್ಟರಲ್ಲ. ಇನ್ಯಾವ ಮಂತ್ರಿಗಳೂ ನನಗೆ ಈ ರೀತಿ ಹೇಳಲಿಲ್ಲ. ಇಷ್ಟು ಧೈರ್ಯವಾಗಿ ಹೇಳುವ ಮಂತ್ರಿಯನ್ನು ನೋಡಿದೆ ನಲ್ಲಾ ಸಂತೋಷ.

ಸ್ವಾಮಿ, ಜಾಗ್ರತ ಮಂಡಲಿ ಅಂತಲೋ, ವಿಜಿಲೆನ್ಸ್ ಕಮಿಶನ್ ಅಂತಲೋ ಏನೋ ಮಾಡ ಬೇಕೆಂದಿದ್ದೀರ. ಅಲ್ಲ ಸ್ವಾಮಿ, ಈ ಕಮಿಷನ್ನಿನಲ್ಲಿ ಯಾವ ತರಹದವರು ಇರಬೇಕು ಕಳ್ಳರನ್ನು ಹಿಡಿಯಲು, ಕಳ್ಳರನ್ನೇ ಹಾಕಬಾರದು. ನಾನು ಕಳವು ಮಾಡಿದರೆ ಹಿಡಿಯುವವರು ಯಾರು? ಸಣ್ಣ ಪುಟ್ಟ ಅಧಿಕಾರಿಗಳನ್ನು ಹಿಡಿದಿದ್ದಾರೆ. ನಮ್ಮನ್ನು, ನಿಮ್ಮನ್ನು ಹಿಡಿಯುವವರು ಯಾರು? ತಾಲ್ಲೂಕು ಲೆವಲಿನಲ್ಲ, ಬೇರೆ ಎಲ್ಲಿಗೋ ಹೋಗಿ, ಅಲ್ಲಿ ನಾನು ಸಿಕ್ಕಿಹಾಕಿಕೊಂಡಿದ್ದಾಗ, ಇಂಥ ಮಂತ್ರಿಗಳಿಂದ ಅಧಿಕಾರಿಗಳಿಗೆ ಫೋನ್ ಮಾಡಿಸಿದೆ, ನನ್ನ ಮೇಲೆ ಇಂಥಿಂಥ ಚಾರ್ಜ್ ಮಾಡಿದ್ದರು, ಈ ಮಂತ್ರಿಗಳ ಅನುಗ್ರಹದಿಂದ ಪಾರಾದೆ ಎಂಬುದು ಕೇಳಿ ಬರುತ್ತಿದೆ. ಈ ಭ್ರಷ್ಟಾಚಾರ ಇಲ್ಲಿಂದ ಹುಟ್ಟಿದೆ; ಇದರ ಮೂಲ ಸರ್ಕಾರದಲ್ಲಿ, ವಿಧಾನ ಸೌಧದಲ್ಲಿ ಇದನ್ನು ಕಂಡುಹಿಡಿದು ನಿರ್ಮೂಲ ಮಾಡುವುದಕ್ಕೆ ಏನಾದರೂ ಒಬ್ಬ ಆಫೀಸರನ್ನು ತಮ್ಮ ಮೇಲೆ ಹಾಕಿದ್ದೀರೋ! ನೀವುಗಳು ಮುಂದಾದರೂ ಒಂದು ಉತ್ತಮವಾದ ನೈತಿಕವಟ್ಟಕ್ಕೆ ಬರುವುದಾದರೆ, ನಿಮ್ಮ ಹಿಂದಿನದನ್ನು ಮರೆತು ಬಿಡೋಣ. ಈ ಹಳೇ ಅಭ್ಯಾಸಗಳನ್ನು ಬಿಟ್ಟು ಬಿಡಿ. ಇದುವರೆಗೆ ಆಗಿದ್ದು ಆಗಿಹೋಯಿತು. ಹೊಸ ಅಧ್ಯಾಯ ಶುರು ಮಾಡಿ, ಮುಂದಕ್ಕೆ ಸರಿಯಾಗಿ ನಡೆದುಕೊಳ್ಳುತ್ತೇವೆಂದು ಪ್ರತಿಜ್ಞೆ ಮಾಡಿ. ಈ ಜಾಗೃತ ಮಂಡಲಿ ನೀವು ಮಾಡುವಾಗ ಅದಕ್ಕೆ ಯಾರನ್ನು ಸದಸ್ಯ ರಾಗಿ ಹಾಕುವುದು? ಅದಕ್ಕೋಸ್ಕರ ಹೈಕೋರ್ಟಿಗೇ ಅದರ ಪವರ್ಸ್ ಕೊಟ್ಟುಬಿಡಿ. ಏಕೆಂದರೆ ನೀವು ನೇಮಿಸುವವರಲ್ಲಿ ನಂಬಿಕೆ ಇರಬೇಕು. ಈಗ ನಾನೇ ಸರಿಯಾಗಿಲ್ಲದೇ, ದೇಶಕ್ಕೆಲ್ಲಾ ಭಾಷಣ ಮಾಡಿ, ನೀವು ಸರಿಯಾಗಿಲ್ಲ, ಎಂದರೆ ಯಾರೂ ಕೇಳುವುದಿಲ್ಲ. ನೀವು ಈ ಭ್ರಷ್ಟಾಚಾರ ನಿರ್ಮೂಲಕ್ಕೆ ನಾನು ಹೇಳಿದಂತೆ ಮಾಡದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ; ನೀವು ಬೇರೆ ತರಹ ಮಾಡಿದರೆ ಜನಗಳಿಗೆ ಅದರಲ್ಲಿ ನಂಬಿಕೆಯೂ ಬರುವುದಿಲ್ಲ.

ನಾನು ಕೋಲಾರದ ಒಂದು ವಿಷಯದ ಬಗ್ಗೆ ಪ್ರತಿಬಡ್ಜೆಟ್ ಭಾಷಣದಲ್ಲಿಯೂ ಹೇಳುತ್ತಿದ್ದೇನೆ. ಅದು ಒಂದು ವೀವರುಗಳ ಸೊಸೈಟಿಗೆ ಸಂಬಂಧಪಟ್ಟದ್ದು. ಅದು ನಿಂದೆಗೆ ಒಳಗಾಗಿದೆ. ಆದರೂ ಅದರ ಆನ್ಯುಯಲ್ ಜನರಲ್ ಮೀಟಿಂಗಿನಲ್ಲಿ, ಅಪಾದಿತರು ಮಂತ್ರಿಗಳ ಜೊತೆ ಫೋಟೋ ತೆಗೆಸಿ ಕೊಂಡು, ಆ ಫೋಟೋ ತೋರಿಸಿಕೊಂಡು ಸಣ್ಣ ಅಧಿಕಾರಿಗಳನ್ನು ದಿಗಲಿಟ್ಟು ಮೋಸಪಡಿಸುತ್ತಿ ದ್ದಾರೆ. ಅದಕ್ಕೆ ನಮ್ಮ ಚೀಫ್ ಮಿನಿಸ್ಟರೂ ಹೋಗಿದ್ದಾರೆ; ಹಣಕಾಸಿನ ಮಂತ್ರಿಗಳೂ ಹೋಗಿ ದ್ದಾರೆ; ಸಹಕಾರ ಮಂತ್ರಿಗಳೂ ಹೋಗಿದ್ದಾರೆ. ಅಂಥವರ ಜೊತೆ ಫೋಟೋ ತೆಗೆಸಿಕೊಂಡರೆ, ನಿಮ್ಮನ್ನು ಜನ ಏನನ್ನುತ್ತಾರೆ. ನಿಮ್ಮ ಮರ್ಯಾದೆ ಹೋಗುತ್ತದೆ. ಅವರ ಬಗ್ಗೆ ಎಚ್ಚರಿಕೆಯಿಂದ ಇರಿ ಎಂದು ಹೇಳುತ್ತಿದ್ದೇನೆ.

ಶ್ರೀ ಬಿ. ಡಿ. ಜತ್ತಿ.—ಫೋಟೋ ತೆಗೆಸಿಕೊಂಡಾಕ್ಷಣ ಯಾರನ್ನಾದರೂ ಬಿಟ್ಟಿದ್ದೇವೆಯೋ? ಅದು ಕಂಡು ಬಂದಿದೆಯೋ? ಕೇಸು ಹಾಕುತ್ತಾ ಇಲ್ಲವೋ?

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಇನ್ನು ಇಡತನೂರಿನಲ್ಲಿ 20 ಜನರನ್ನು ಒಂದು ಮನೆಯಲ್ಲಿ ಸೇರಿಸಿ ಸುಡಬೇಕಾದರೆ ಏನೋ ಹಿನ್ನೆಲೆ ಇರಬೇಕು. ಈ ಸರಕಾರದಲ್ಲಿ ನ್ಯಾಯ ದೊರಕುವುದಿಲ್ಲ ವೆಂದು ಜನ ಉದ್ರೇಕ ಸ್ಥಿತಿಗೆ ಬಂದಿರಬೇಕು. ಈ ದೇಶದಲ್ಲಿ ಸರಕಾರವಿದೆಯೇ? ಜನರನ್ನು ಪೋಲೀಸು ಸ್ಪೇಷಲ್ ಎದುರಿಗೆ ಸುಡಬೇಕಾದರೆ? ಈ ಪೋಲೀಸು ಇಲಾಖೆ ಇರುವುದು ಒಬ್ಬ ಕಾನ್ಸ್ಟೇಬಲ್ ವರ್ಗಮಾಡುವುದಕ್ಕೋ ಅಥವ ಅವನ ಎರಡು ರೂಪಾಯಿ ಸಂಬಳ ಹಿಡಿಯು ವುದಕ್ಕೋ? ನೀವುಗಳು ಮೃಷ್ಟಾನ್ನ ಭೋಜನ ಮಾಡಿಕೊಂಡು ಬಂಗಲೆಗಳಲ್ಲಿ ಮಜಾ ಮಾಡುವು ದಕ್ಕೆ ಇರುವುವೇನು? ನಿಮಗೆ ಮನುಷ್ಯತ್ವ, ಮಾನ, ಮರ್ಯಾದೆ ಇರುವುದಿಲ್ಲ. ಇಂಥ ಸರಕಾರ ಇರು ವುದು ನಾಚಿಕೆಗೇಡು. ನೀವು ಎಲ್ಲಿಗಾದರೂ ಹೋಗಿಬಿಡಿ. ಮನೆ ಮೇಲೆ ಧಾಳಿ ಮಾಡಿ 20 ಜನಗಳನ್ನು ಸುಡಬೇಕಾದರೆ ಆ ಪಟೇಲನ ಮೇಲೆ ಪೋಲೀಸಿಗೆ ಎಷ್ಟೋ ಅರ್ಜಿಗಳನ್ನು ದೂರುಗಳನ್ನೂ ಕೊಟ್ಟಿರಬೇಕು. ಅವುಗಳ ಮೇಲೆ ಸರಿಯಾದ ವೇಳೆಗೆ ಆಕ್ಷನ್ ತೆಗೆದುಕೊಳ್ಳದ್ದರಿಂದ, ಸರಕಾರ ಏನೂ ಮಾಡುವುದಿಲ್ಲ, ನಾವೇ ಮಾಡೋಣ ಎಂದು ಜನ ರೋಸಿ ಹೋಗಿ ಈ ರೀತಿ ಮಾಡಿರಬೇಕು. ಹಿಂದಿನಿಂದಲೂ ಇಬ್ಬರಿಗೂ ದ್ವೇಷವಿರಬೇಕು. ಅದನ್ನು ಏಕೆ ಪರಿಶೀಲಿಸಲಿಲ್ಲ; ನಾಲ್ಕು ಜನ ಪೋಲೀಸು ಸಿಬ್ಬಂದಿ ಅಲ್ಲಿ ಹಾಕಬೇಕಾದರೆ ಮೊದಲೇ ಅಲ್ಲಿಂದ ವೈಮನಸ್ಸು ಗೊತ್ತಿರಬೇಕು. ಈ ಘಟನೆ ನಿಮಗೆ ಮಾನ ತರುವುದಿಲ್ಲ. ಜನಕ್ಕೆ ಬೇಸರ ಬರಿಸುವಂಥ ವರ್ತನೆ ಅನುಸರಿಸುವ ಸರ್ಕಾರ ಅಧಿಕಾರ ಬಿಟ್ಟು ಹೋಗಲಿ.

†ಶ್ರೀ ಬಿ. ಬಸವಯ್ಯ (ಕೊಳ್ಳೇಗಾಲ):—ಮಾನ್ಯ ಸಭಾಪತಿಗಳೇ, 1964-65ನೇ ಇಸವಿಯ ಆಯವ್ಯಯವನ್ನು ಮಾನ್ಯ ಅರ್ಥಿಕ ಸಚಿವರು ಮಂಡಿಸಿರುವುದನ್ನು ನಾನು ಸ್ವಾಗತಿಸುತ್ತೇನೆ. ಈ ಸಂದರ್ಭದಲ್ಲಿ ಒಂದೆರಡು ವಿಚಾರಗಳನ್ನು ನಾನು ಸರ್ಕಾರದವರ ಮುಂದೆ ಇಡಲು ಬಯಸುತ್ತೇನೆ. ಮೊದಲನೆಯದಾಗಿ ಈ ವರ್ಷದ ಆಯವ್ಯಯದಲ್ಲಿ ಸರ್ಕಾರದ ಹಣಕಾಸಿನ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಕಷ್ಟಕರವಾಗಿದ್ದರೂ ಸಹ ನಮ್ಮ ಸಮತಾವಾದ ಸಮಾಜ ತತ್ವವನ್ನು ಅನುಸರಿಸಿರತಕ್ಕ ಸರ್ಕಾರ ಫ್ಯಾಮಿಲಿ ಪೆನ್‌ಷನ್, ಎನ್.ಜಿ.ಓ.ಗಳಿಗೆ 5 ರೂಪಾಯಿ ತುಟ್ಟಿಭತ್ಯ, ಮತ್ತು ಓಲ್ಡ್ ಏಜ್ ಪೆನ್‌ಷನ್ ಅಂತ ಹೇಳಿ ಈ ಮೂರು ವಿಧದಲ್ಲೂ ಸೋಷಿಯಲ್ ಸೆಕ್ಯೂರಿಟಿ ಮೆಷರನ್ನು ಇದರಲ್ಲಿ ಅಳವಡಿಸಿರುವುದು ನಿಜವಾಗಿಯೂ ಸಹ ಒಂದು ವಿಶೇಷವಾದಂತಹ ಲಕ್ಷಣ. ಇದಕ್ಕಾಗಿ ನಾನು ಮಾನ್ಯ ಹಣಕಾಸಿನ ಸಚಿವರನ್ನು ಅಭಿನಂದಿಸುತ್ತೇನೆ.

ಸರ್ಕಾರದವರು ಈಗ ಸಾಧಿಸಿರತಕ್ಕ ಇಂಡಸ್ಟ್ರಿಯಲ್ ಪ್ರೊಡಕ್ಷನ್‌ಗಾಗಿ ಅವರನ್ನು ಅಭಿನಂದಿಸದೇ ವಿಧಿ ಇಲ್ಲ. ಏಕೆಂದರೆ ನಮ್ಮ ಮೈಸೂರು ಸರ್ಕಾರ ವ್ಯವಸಾಯದ ವಿಷಯದಲ್ಲಿ ಅಷ್ಟು ತೃಪ್ತಿಕರವಾಗಿಲ್ಲದೆ ಇದ್ದರೂ ಸಹ-ಭಾರತ ದೇಶದಲ್ಲೇ ಅದು ತೃಪ್ತಿಕರವಾಗಿಲ್ಲ—ಕೈಗಾರಿಕಾ ಕ್ಷೇತ್ರದಲ್ಲಿ ಬಹುಮಟ್ಟಿನ ಅಭಿವೃದ್ಧಿಯನ್ನು ಹಾಗೂ ಉತ್ಪನ್ನವನ್ನು ಹೆಚ್ಚು ಮಾಡಿದೆ ಎಂದು ಹೇಳಿದರ ತಪ್ಪಾಗಲಾರದು.

ಸರ್ಕಾರದವರು ದೊಡ್ಡ ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ಮಾಡಲು ಮತ್ತು ಲಿಫ್ಟ್ ಇರಿಗೇಷನ್ ಅಲ್ಲದೆ ಗೊಬ್ಬರ ಇವುಗಳಿಗೆಲ್ಲಾ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹ ಇವತ್ತು ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳತಕ್ಕ ಪರಿಸ್ಥಿತಿಯಲ್ಲಿದೆ ಎಂದರೆ, ನಿಜವಾಗಿಯೂ ಸಹ ಇದು ಶೋಚನೀಯವಾದ ವಿಷಯ. ನನಗಾದರೂ ಅನಿಸುತ್ತದೆ ಸರ್ಕಾರದವರು ಇಷ್ಟೆಲ್ಲಾ ಸಹಾಯ ಮಾಡುತ್ತಿದ್ದರೂ ಸಹ ವ್ಯವಸಾಯದ ಉತ್ಪನ್ನ ಏಕೆ ಹೆಚ್ಚುತ್ತಿಲ್ಲ ಎಂದರೆ ಗ್ರಾಮಾಂತರ ಪ್ರದೇಶದಲ್ಲಿ ಈ ವ್ಯವಸಾಯವನ್ನು ಅವಲಂಬಿಸಿರತಕ್ಕ ಜನರಲ್ಲಿ ಸುಮಾರು ನೂರಕ್ಕೆ 80 ಜನ ವ್ಯವಸಾಯಗಾರರಲ್ಲಿ 40 ಜನ ವ್ಯವಸಾಯದ ಕಾರ್ಮಿಕರು ಇದ್ದಾರೆ. ಅವರ ಕಡೆಗೆ ಸರ್ಕಾರದವರು ನಿಜವಾಗಿಯೂ ಸಹ ಯಾವ ಗಮನವನ್ನು ಕೊಟ್ಟಿಲ್ಲ ಎಂದರೆ ತಪ್ಪಾಗಲಾರದು. ಮಿನಿಮಂ ವೇಜಸ್ ಆಕ್ಟ್ ಪ್ರಕಾರ ಒಬ್ಬ ವ್ಯವಸಾಯದ ಕೂಲಿಗಾರನಿಗೆ 12 ಅಣೆಯಿಂದ 1—1½ ರೂಪಾಯಿನವರೆಗೂ ಕೂಲಿ ಕೊಡಬೇಕೆಂದು ನಿಗದಿ ಮಾಡಿದೆ ಆದರೆ ನಿಜವಾಗಿಯೂ ಕೂಡ ಅನೇಕ ಕಡೆ ಅವನಿಗೆ ಅಷ್ಟು ಕೂಡ ದೊರೆಯುತ್ತಾ ಇಲ್ಲ. ಸರ್ಕಾರದಲ್ಲಿ ಅದನ್ನು ಯಶಸ್ವಿಯಾಗಿ ಕಾರ್ಯಾಚರಣೆ ಮಾಡುತ್ತಿದ್ದಾರೆಯೇ ಇಲ್ಲವೆ ಎಂಬುದನ್ನು ನೋಡುವವರು, ಕೇಳುವವರು ಯಾರೂ ಇಲ್ಲ. ಅದಕ್ಕೆ ಯಾರೂ ಸಹ ಗಮನ ಕೊಡುತ್ತಿಲ್ಲ. ಥಾರಕ್ಕೆ ಎರಡು ವಾರಕ್ಕೆ ಒಂದು ಸಲ ಆ ವ್ಯವಸಾಯ ಕಾರ್ಮಿಕರಿಗೆ ಜಮೀನ್ದಾರರು ಧಾನ್ಯ ಕೊಡುತ್ತಾರೆ. ಅಷ್ಟಕ್ಕೋಸ್ಕರ ಅವರು ಏನು ಕೆಲಸ ಹೇಳಿದರೂ ಮಾಡಬೇಕು. ಈ ಪದ್ಧತಿ ಮೊದಲಿನಿಂದಲೂ ಬಂದಿದೆ. ಗ್ರಾಮಾಂತರ ಪ್ರದೇಶದಿಂದ ಬಂದಿರುವ ನಮ್ಮ ಮಾನ್ಯ ಸ್ನೇಹಿತರು ಯಾರೂ ಕೂಡ ವ್ಯವಸಾಯ ಕಾರ್ಮಿಕರ ವಿಷಯದಲ್ಲಿ ಯಾವ ರೀತಿಯ ಒಂದು ಗಮನವನ್ನು ಕೊಡದೇ ಇರುವುದು ನಿಜವಾಗಿಯೂ ಶೋಚನೀಯವಾದ ವಿಚಾರ.

ನೀರಾವರಿ ಯೋಜನೆಗಳಿಗಾಗಿ ಸರ್ಕಾರದವರು ಬಹಳ ಹಣ ಖರ್ಚು ಮಾಡುತ್ತಾ ಇದ್ದರೂ ಕೂಡ ಕೆಲವು ಕಡೆ ಕೆಲಸ ಕಾರ್ಯಗಳು ತೃಪ್ತಿಕರವಾಗಿ ನಡೆದಿಲ್ಲ. ಯಳಂದೂರು ಜಹಗೀರಿ-ಮೈಸೂರು ರಾಜಮನೆತನದಿಂದ ಪೂರ್ಣಯ್ಯನವರಿಗೆ ಕೊಟ್ಟಲಾಗಾಯ್ತು ಅಲ್ಲಿ ಜನರು ಕಷ್ಟವನ್ನು ಅನುಭವಿಸುತ್ತಾ ಇದ್ದಾರೆ. 1811ರಲ್ಲಿ ಯಳಂದೂರು ತಾಲ್ಲೂಕನ್ನು ಜಹಗೀರಿಯಾಗಿ ಕೊಟ್ಟರು. ಅದರ ಪರಿಣಾಮವಾಗಿ ಈ 150 ವರ್ಷದ ಲಾಗಾಯ್ತು ಆ ಪ್ರದೇಶದಲ್ಲಿ ಕೆರೆ ಕಟ್ಟಿಸುವುದಾಗಲೀ, ಕಾಲುವೆ ಮಾಡಿಸುವುದಾಗಲೀ ಯಾವುದರಲ್ಲೂ ಅವರಿಗೆ ಆಸಕ್ತಿ ಇರಲಿಲ್ಲ. ಅದರಿಂದಾಗಿ ಆ ತಾಲ್ಲೂಕು ಎಲ್ಲಾ ವಿಷಯದಲ್ಲೂ ಹಿಂದುಳಿದಿದೆ. ಅಲ್ಲಿರತಕ್ಕ 750 ಮೈಲಿಯಲ್ಲಿ 100 ಮೈಲಿಯನ್ನು ಪಿ.ಡಬ್ಲ್ಯು.ಡಿ. ಅವರು ತೆಗೆದುಕೊಂಡಿದ್ದಾರ ಎಂದು ತಿಳಿದುಬಂತು. ಅದಕ್ಕಾಗಿ ಸರ್ಕಾರವನ್ನು ವಂದಿಸುತ್ತೇನೆ. ಕೊಳ್ಳೇಗಾಲ ತಾಲ್ಲೂಕು ಸಹ ಹೇಗೇ ಹಿಂದೆ 1791ರಿಂದಲೂ ಮದರಾಸ್ ಪ್ರಾಂತ್ಯಕ್ಕೆ ಸೇರಿದ್ದು ಆ ಪ್ರಾಂತ್ಯ ತಮಿಳು ನಾಡಿಗೆ ಸೇರಿ ಅಲ್ಲಿ ಯಾವ ಕೆಲಸ ಕಾರ್ಯಗಳೂ ಕೂಡ ನಡೆದಿಲ್ಲ. ಅಲ್ಲಿ ಪದೇ ಪದೇ ಕ್ಷಾಮ ಬರುತ್ತದೆ. 1950ರಲ್ಲಿ ಒಂದು ಸಾರಿ; 1955ರಲ್ಲಿ ಒಂದು ಸಾರಿ, 1960ರಲ್ಲಿ ಒಂದು ಸಾರಿ ಕ್ಷಾಮ ಬಂದಿತ್ತು. ಈ ವರ್ಷವೂ ಸಹ ಅಲ್ಲಿ ವಿಪರೀತವಾಗಿ ಡಿಸ್ಟ್ರೆಸ್ ಕಂಡೀಷನ್ ಬಂದು ಜನರು ಬಹಳವಾಗಿ ನೊಂದಿದ್ದಾರೆ. ಆದರೆ ಅವರಿಗೆ ಕಂದಾಯದ ರೆಮಿಷನ್ ಆಗಬೇಕಾಗಿದ್ದರೆ ಕರಣಂ ಅವರು ಬರೆಯಬೇಕು. ಅವರು ಬರೆದಿರುವ ಪಹಣಿ ಲೆಕ್ಕದ ಪ್ರಕಾರ ರೆಮಿಷನ್ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾ ಇದ್ದಾರೆ ಇದು ನಿಜವಾಗಿಯೂ ಶೋಚನೀಯವಾದ ವಿಚಾರ. ಆ ತಾಲ್ಲೂಕಿನಲ್ಲಿ ಇರಿಗೇಷನ್ ಪೊಟೆನ್ಸಿಯಾಲಿಟಿ ಬೇಕಾ

ದಷ್ಟು ಇದೆ. ಉಡುದೊರೆಹಳ್ಳ, ಗೊಡಲೂರು ಈ ಪ್ರದೇಶದಲ್ಲಿ 60-70 ಸಾವಿರ ಎಕರೆ ನೀರಾವರಿಗೆ ಬರತಕ್ಕ ಪೊಟೆನ್ಸಿಯಾಲಿಟಿ ಇದೆ. ಈ ತನಿಖೆ ಪೂರ್ತಿಯಾಗಿದೆ. ಇದಕ್ಕೆ ಆದ್ಯಗಮನ ಕೊಟ್ಟು ಶೀಘ್ರವಾಗಿ ಪರಿಶೀಲನೆ ಮಾಡುತ್ತಾರೆ ಎಂದು ನಂಬಿದ್ದೇನೆ.

ಕೊಳ್ಳೇಗಾಲ ಟೌನ್ 28 ಸಾವಿರ ಜನಸಂಖ್ಯೆಯಿರತಕ್ಕ ಪ್ರದೇಶ. ನಮ್ಮ ಹಣಕಾಸಿನ ಸಚಿವರು ಅಲ್ಲಿನ ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಸ್ಕೀಂಗೆ 10 ಲಕ್ಷ ರೂಪಾಯಿ ಸಾಲ ಕೊಡುತ್ತೇನೆ ಎಂದು ಪ್ರಾಮಿಸ್ ಮಾಡಿದ್ದರು. ಅವರ ಹಸ್ತದಲ್ಲೇ ಆ ಸ್ಕೀಂಗೆ ಅಸ್ತಿಭಾರ ಕೂಡ ಹಾಕಿದ್ದರು. ಈ ವರ್ಷ ಸರ್ಕಾರದವರು ನ್ಯಾಷನಲ್ ವಾಟರ್ ಸಪ್ಲೈ ಸ್ಕೀಂಗೆ 124ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಅದರಲ್ಲಿ ಕೊಳ್ಳೇಗಾಲದ ಎಸ್ಟಿಮೇಟ್ ಸಹ ಸೇರಿದೆ ಎಂದು ನಂಬಿದ್ದೇನೆ.

ಇನ್ನು ಸೋಷಿಯಲ್ ವೆಲ್‌ಫೇರ್ ವಿಷಯದಲ್ಲಿ ನಾಲ್ಕು ಮಾತುಗಳನ್ನು ಹೇಳಬೇಕೆಂದು ಬಯಸುತ್ತೇನೆ. ರಾಜ್ಯಪಾಲರು ಭಾಷಣ ಮಾಡುವಂತಹ ಕಾಲದಲ್ಲಿ ಈ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಮೈಸೂರು ರಾಜ್ಯದ ಏಕ ಪ್ರಕಾರವಾದಂಥ ಒಂದು ವಿಶಿಷ್ಟ ಷೆಡ್ಯೂಲ್ ಕ್ಯಾಸ್ಟ್ ನವರ ಪಟ್ಟಿಯನ್ನು ತಯಾರು ಮಾಡಿ ಕೇಂದ್ರ ಸರ್ಕಾರದವರಿಗೆ ಕಳುಹಿಸಿದ್ದೇವೆ ಎಂದು ಹೇಳಿದ್ದಾರೆ ಅದು ಯಾವ ರೂಪದಲ್ಲಿ ಕಳುಹಿಸಿದ್ದಾರೆ ಅಥವಾ ಅದರ ಲಕ್ಷಣವೇನು ಎಂಬುದು ನಮಗೆ ಗೊತ್ತಿಲ್ಲ. ಆ ಷೆಡ್ಯೂಲ್ಡ್ ಕ್ಯಾಸ್ಟ್ ಹೇಗೆ ಆಯಿತು ಎಂಬುದನ್ನು ಈ ಸಭೆಯ ಮುಂದೆ ನಾನು ಹೇಳಿದರೆ ಅನುಚಿತವಾಗಲಾರದು ಎಂದು ತಿಳಿದಿದ್ದೇನೆ. 1935ನೇ ಕಾನ್‌ಸ್ಟಿಟ್ಯೂಷನ್ ಜಾರಿಗೆ ಬರುವುದಕ್ಕೆ ಮುನ್ನ ರೌಂಡ್ ಟೇಬಲ್ ಕಾನ್‌ಫರೆನ್ಸ್ ಆದದ್ದು ಎಲ್ಲರಿಗೂ ತಿಳಿದ ವಿಷಯ. ಅವರಲ್ಲಿ ಡಿಪ್ರೆಸ್ಡ್ ಕ್ಲಾಸ್‌ನವರು, ಹರಿಜನರಿಗೆ ರಕ್ಷಣೆ ಕೊಡತಕ್ಕ ತತ್ವವನ್ನು ಒಪ್ಪಿಸಿದರು. ಅದಾದನಂತರ ಹಾರ್ಟ್‌ವರ್ತ್ ಎಂಬುವರ ನೇತೃತ್ವದಲ್ಲಿ ಒಂದು ಕಮಿಟಿ ರಚನೆಯಾಯಿತು. ಹಾರ್ಟ್‌ವರ್ತ್‌ರವರು ಪ್ರಾಂತ ಸರ್ಕಾರದಲ್ಲೆಲ್ಲಾ ಟೂರ್ ಮಾಡಿ ಹರಿಜನರು ಎಂದರೆ ಯಾರು ಎನ್ನುವ ವಿಷಯದಲ್ಲಿ ಒಂದು ತನಿಖೆ ನಡೆಸಿದರು. ಆಗ ಹರಿಜನರ ಮುಖಂಡರು ಅವರಿಗೆ ಒಂದು ಮನವಿಯನ್ನು ಸಲ್ಲಿಸಿದ್ದರು. ಅದೇನು ಎಂಬುದನ್ನು ಇಲ್ಲಿ ಹೇಳಿದರೆ ಅನುಚಿತವಾಗುವುದಿಲ್ಲ. ಏಕೆಂದರೆ ಆಗ ಹರಿಜನರು ಯಾರು ಅಂತ ಪರಿಗಣನೆ ಮಾಡುವುದಕ್ಕೆ ಕಠಿಣವಾಗಿತ್ತು ಅವಕ್ಕೆ ಅವರು the Depressed Class people are those that are Protestant Hindus ಎಂದು ಕರೆದರು. ಆ ರೀತಿ ಕರೆದು ಅವರು ತಮ್ಮ ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಅದರ ಮೇಲೆ ಸಮಿತಿಯವರು ಟೂರ್ ಮಾಡಿ ಯಾರ್ಯಾರು untouchables ಇದ್ದಾರೋ ಅವರನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಪಟ್ಟಿಯಲ್ಲಿ ತಂದು 1935ರ ಕಾನ್‌ಸ್ಟಿಟ್ಯೂಷನ್‌ನಲ್ಲಿ ಸೇರಿಸಿದರು. ಭಾರತ ದೇಶದಲ್ಲಿ ಅನುಸರಿಸಿದಂತಹ ಒಂದುಆಧಾರ ಷೆಡ್ಯೂಲ್ಡ್ ಕ್ಯಾಸ್ಟು ಯಾರು ಎಂದರೆ untouchables. Untouchables ಎಂದರೆ Scheduled Castes ಈ ತತ್ವವನ್ನು ಇಟ್ಟುಕೊಂಡು ಒಂದು ನ್ಯಾಷನಲ್ ಬೇಸಿಸ್ ಮೇಲೆ ಆ ಒಂದು ಪಟ್ಟಿಯನ್ನು ತಯಾರು ಮಾಡಿದ್ದರು. ಈಗ ಮೈಸೂರಿನಲ್ಲಿ ತಯಾರು ಮಾಡಿರತಕ್ಕ ಪಟ್ಟಿಯ ಲಕ್ಷಣ ಹೇಗಿದೆ ಎಂದರೆ touchable community, untouchable community ಎಲ್ಲ ಸೇರಿಸಿ ಒಂದು ಪಟ್ಟಿ ಮಾಡಿದ್ದಾರೆ.

ಹಳೆಯ ಮೈಸೂರು ದೇಶದಲ್ಲಿ ಟಚೆಬಲ್ಸ್ ಮತ್ತು ಅನ್‌ಟಚಬಲ್ಸ್ ಎಲ್ಲಾ ಸೇರಿ ಷೆಡ್ಯೂಲ್ಡ್ ಕ್ಯಾಸ್ಟ್ ಎಂದು ಮಾಡಿದರು. ಇಂಥ ಅನಾಮಲಿ ಬೇರೆ ಕಡೆ ಇಲ್ಲ. ಈ ಪಟ್ಟಿ ಬದಲಾಯಿಸುವುದಾಗಿ ಹೇಳಿದ್ದರು. ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದಿಂದ ಆದೇಶ ಬಂದಿರಬಹುದು. ಅದರ ಪ್ರಕಾರವಾಗಿ ಭಾರತ ದೇಶದಲ್ಲಿರುವವರ ಸಂಬಂಧದಲ್ಲಿ ಒಂದು ಏಕ ಪ್ರಕಾರವಾದ ಪಟ್ಟಿ ಒಂದು ಆಧಾರದ ಮೇಲೆ ಮಾಡಿ ಕಳುಹಿಸಿದ್ದಾರೆಂದು ನಂಬಿದ್ದೇವೆ.

ಹರಿಜನರ ಉದ್ಧಾರ ಕಾರ್ಯ ಈಗ ಸೋಷಿಯಲ್ ವೆಲ್‌ಫೇರ್ ಖಾತೆ ವಹಿಸಿಕೊಂಡಿರುವ ಮಂತ್ರಿಗಳು ಬಂದ ಮೇಲೆ ಚೆನ್ನಾಗಿ ನಡೆಯುವುದೆಂಬ ನಿರೀಕ್ಷೆಯಿತ್ತು. ಆದರೆ ಎಮರ್ಜೆನ್ಸಿ ಬಂದ ತಕ್ಷಣದಲ್ಲಿ ಪ್ಲಾನಿಂಗ್‌ಕಮಿಷನ್ ಷೆಡ್ಯೂಲ್ಡ್ ಕ್ಯಾಸ್ಟ್ ಅಮೆನಿಟಿಯಲ್ಲಿ ಶೇಕಡ 5ರಷ್ಟು ಜಾಸ್ತಿ ಖೋತ ಮಾಡಿದರು. ಆ ರೀತಿ ಆದೇಶ ಕೊಟ್ಟಿರುವುದಾಗಿ ತಿಳಿದುಬಂದಿದೆ. ಶೇಕಡ 26 ಹೋದ ವರ್ಷ ಖೋತ ಮಾಡಿ ಈಗ ಮತ್ತೆ ಮಾಡುವುದರಿಂದ ಖಂಡಿತವಾಗಿಯೂ ಈ ಪಂಗಡದವರ ಹಿತ ಕುಂಠಿತವಾಗಿದೆ ಎಂದು ಹೇಳಿದರೆ ತಪ್ಪಲ್ಲ.

ವಿದ್ಯಾಭ್ಯಾಸದ ವಿಷಯದಲ್ಲಿ ಹರಿಜನರಿಗೆ ಸಂಬಂಧಪಟ್ಟಂತೆ ತೀವ್ರ ಕಾರ್ಯಕ್ರಮ ಕೈಕೊಳ್ಳುತ್ತಿದ್ದರು. ಹೋದ ವರ್ಷ ಸರಿಯಾದ ಕಾರ್ಯಕ್ರಮ ಕೈಕೊಂಡಿಲ್ಲ. ಅಗ್ರಿಕಲ್ಚರಲ್ ಕಾಲೋನಿ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದಾರೆ ಮತ್ತು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಮೆರಿಟ್

(ಶ್ರೀ ಬಿ. ಬಸವಯ್ಯ)

ಸ್ಕಾಲರ್‌ಷಿಪ್ ಕೊಡುತ್ತಿದ್ದುದನ್ನು ಕೊಡದೆ ಕೈಬಿಟ್ಟಿದ್ದಾರೆ. ಬಹಳವಾಗಿ ನೆರವಾಗುತ್ತಿದ್ದ ಹೌಸಿಂಗ್ ಸ್ಕೀಮನ್ನು 1944ರಿಂದ ನಡೆಸುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ಅದನ್ನು ನಿಲ್ಲಿಸಿದ್ದಾರೆ. ಒಂದು ಕಡೆ ಗ್ರಾಂಟು ದುರುಪಯೋಗವಾಯಿತೆಂದು ನಿಲ್ಲಿಸುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ ಎಲ್ಲಾ ಕಡೆಯೂ ಎಲ್ಲಾ ಖಾತೆಗಳಲ್ಲೂ ಶೇಕಡ ಒಂದೆರಡರಷ್ಟು ದುರುಪಯೋಗವಾಗುತ್ತಲೇ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಹರಿಜನರಿಗೆ ಯಾವ ಯೋಜನೆ ಪ್ರಕಾರ ಮನೆ ಕಟ್ಟಿಕೊಳ್ಳಲು ಅನುಕೂಲವಿಲ್ಲದಿದ್ದರೆ 400 ರೂಪಾಯಿಗಳ ಗ್ರಾಂಟನ್ನು ಕೊಡುತ್ತಿದ್ದರು. ಈ ವರ್ಷ ಸಾಲ ಕೊಡುತ್ತೇವೆ, ಸೊಸೈಟಿ ಮಾಡಿಕೊಳ್ಳಿ ಎಂದು ರಿಮೈಂಡರ್ ಕೊಟ್ಟರು. ಒತ್ತಾಯ ಮಾಡಿ ಹಳ್ಳಿಗಳಲ್ಲಿ ಸೊಸೈಟಿ ಮಾಡಿದರೂ ಸಾಲ ಮತ್ತು ಸಬ್ಸಿಡಿ ಸಹ ಸಿಕ್ಕುತ್ತಿಲ್ಲ. ಈ ರೀತಿ ಆಗುತ್ತಿದ್ದರೆ ಪ್ರಗತಿಗೆ ಬಹಳ ಕುಂಠಿತವಾಗುತ್ತದೆ. ಇದಕ್ಕಾಗಿ ಸರ್ಕಾರದವರು ಎಲ್. ಐ. ಸಿ. ಯಿಂದ ಲೋನ್ ಸ್ಕೀಂಗೆ ಪ್ರಯತ್ನಿಸುವುದಾಗಿ ಹೇಳಿದ್ದಾರೆ. ಆದರೆ ಅಲ್ಲಿಂದ ಹಣ ದೊರೆಯುವುದು ಸಂಶಯವಾಗಿದೆ. ಕಾರ್ಪೊರೇಷನ್ನಿನವರೇ ಒಂದು ಸ್ಕೀಂ ಜಾರಿಗೆ ತಂದಿರುವುದರಿಂದ ಸರ್ಕಾರಕ್ಕೆ ಅವರು ಸಾಲ ಕೊಡುವ ಬಗ್ಗೆ ಸಂಶಯವಿದೆ. ಆದುದರಿಂದ ಸರ್ಕಾರ ಸಾಲದ ವ್ಯವಸ್ಥೆ ಮಾಡದೆ ಹಿಂದೆ ರೂಢಿಯಲ್ಲಿದ್ದ 400 ರೂಪಾಯಿಗಳ ಗ್ರಾಂಟನ್ನು ಕೊಡುವ ಪದ್ಧತಿಯನ್ನ ಮುಂದುವರೆಸುವುದು ಉತ್ತಮ.

ಎರಡನೆಯದಾಗಿ ಸರ್ವಿಸ್ ವಿಷಯದಲ್ಲಿ ಸರ್ಕಾರ ಬಹಳ ತೀವ್ರವಾಗಿ ಕಾರ್ಯಕ್ರಮ ಕೈಗೊಂಡಿದೆ. ಹರಿಜನರು ಉದ್ಧಾರವಾಗಬೇಕಾದರೆ ವಿದ್ಯಾವಂತರಾದವರು ಸರ್ಕಾರಿ ನೌಕರಿಗೆ ಸೇರಲೇಬೇಕು. ಕೇಂದ್ರಸರ್ಕಾರ ಡೈರೆಕ್ಟ್ ರಿಕ್ರೂಟ್‌ಮೆಂಟ್‌ಗೆ, ರಿಸರ್ವೇಷನ್ನಿಗೆ ಕಾನೂನು ಮಾಡಿದ ಅದೇರೀತಿ ಮಾಡಬೇಕೆಂದು ಕೇಂದ್ರ ಸರ್ಕಾರದ ಗೃಹ ಸಚಿವ ಶಾಖೆಯಿಂದ ಆದೇಶ ಬಂದಿದ್ದರೂ 1957ರಲ್ಲಿ ಪ್ರಾಂತ ಸರ್ಕಾರಗಳಿಗೆ ಆಜ್ಞೆ ಮಾಡಿದ್ದರೂ ಅದರ ಪ್ರಕಾರ ಈ ವಿಷಯದಲ್ಲಿ 1957—58 ರಿಂದ ಸರ್ಕಾರ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳದಿರುವುದು ಶೋಚನೀಯ. ಪ್ರಮೋಷನಲ್ ವೇಕೆನ್ಸಿಗಳಲ್ಲೂ ರಿಸರ್ವ್ ಮಾಡಬೇಕೆಂದು ಸೂಚಿಸಿದ್ದಾರೆ. ಪ್ರಮೋಷನಲ್ ಅಪಾಯಿಂಟ್‌ಮೆಂಟ್ ಪ್ರಶ್ನೆ ವಿಚಾರದಲ್ಲಿ ಸುಪ್ರೀಂ ಕೋರ್ಟಿಗೆ ಅಪೀಲು ಹೋಯಿತು. ಅಲ್ಲಿ ಸರ್ಕಾರಿ ಆಜ್ಞೆ ಕ್ರಮಬದ್ಧವಾಗಿದೆ, ಅಕ್ರಮವಿಲ್ಲ ಎಂದು ತೀರ್ಮಾನ ಕೊಟ್ಟಿದ್ದಾರೆ. ಹಾಗಿದ್ದರೂ ಕೂಡ ಪ್ರಮೋಷನಲ್ ವೇಕೆನ್ಸಿಗಳಲ್ಲಿ ಸರ್ಕಾರ ಹರಿಜನರಿಗೆ ಪ್ರಾತಿನಿಧ್ಯ ಕೊಡದಿರುವುದು ಶೋಚನೀಯ.

ಇನ್ನೊಂದು ಈಗ ರಿಟ್ರೆಂಚ್ ಆಗಿರುವ 17 ಸ್ಪೆಷಲ್ ಆಫೀಸರುಗಳ ವಿಷಯ. ಅವರಲ್ಲಿ ಕೆಲವರಿಗೆ 5ರಿಂದ 12 ವರ್ಷಗಳವರೆಗೆ ಸರ್ವಿಸ್ ಆಗಿದೆ. ಅವರ ನೇಮಕ ಅಕ್ರಮವಾಗಿದೆ, ಕೇಡರ್ ಮತ್ತು ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಅಕ್ರಮ ಎಂದು ರಿಟ್ರೆಂಚ್ ಮಾಡಿದ್ದಾರೆ. ಅವರ ನೇಮಕ ಮಾಡುವಾಗ ಯಾವ ಕಾನೂನಿತ್ತೋ ಅದಕ್ಕನುಗುಣವಾಗಿರಬೇಕೇ ವಿನಾ ಸಬ್ಸಿಕ್ವೆಂಟಾಗಿ ಆದ ಕಾನೂನು ಪ್ರಕಾರ ಇರಬೇಕಾದ ಅವಶ್ಯಕತೆಯಿಲ್ಲ. 12 ವರ್ಷಗಳ ಕೆಳಗೆ ನೇಮಕ ಮಾಡಲ್ಪಟ್ಟಿರುವವರನ್ನು ಈ ದಿವಸ ರೂಲ್ಸ್ ಮಾಡಿ ಅದರ ಪ್ರಕಾರ ತೆಗೆಯಬೇಕು ಎಂದರೆ ಸೋಷಿಯಲ್ ಜಸ್ಟಿಸ್ ಏನಿದ್ದ ಹಾಗಾಯಿತು? ಭಾರತ ಸಂವಿಧಾನವನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ದೊರಕಿಸುವುದಕ್ಕೆ ರಚಿಸಿದ್ದೇವೆ ಎಂದು ಹೇಳುವಾಗ, ಈ ದಿವಸ ರೂಲ್ಸ್ ಮಾಡಿ ಅದಕ್ಕನುಗುಣವಾಗಿದ್ದರೆ ಇರಬಹುದು ಎಂದು ಹೇಳಿದರೆ ಹಕ್ಕಿಗೆ ಚ್ಯುತಿ ಉಂಟು ಮಾಡಿದುದಾಗುತ್ತದೆ. ಈ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ದೊರಕಿಸಬೇಕು. ಮಂತ್ರಿಮಂಡಲ ಬದಲಾದಾಗಲೆಲ್ಲಾ ನೀತಿಯನ್ನು ಬದಲಾಯಿಸುವುದು ನ್ಯಾಯವೇ? ಹ್ಯೂಮನ್ ಕನ್‌ಸಿಡರೇಷನ್ ಬೇಡವೇ? ಈ ದಿವಸ ಸೆಕೆಂಡ್ ಡಿವಿಜನ್ ಕ್ಲಾರ್ಕ್ ಆಗಿ ಹೋಗಬೇಕೆಂದು ಹೇಳಬಹುದೇ? ಈ ಸಂದರ್ಭದಲ್ಲಾಗಿರುವ ಅನ್ಯಾಯ ಸರಿಪಡಿಸಬೇಕು ಎಂದು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

Sri B. D. JATTI.—We are here since 8-30 in the morning and it is already 6–30 P.M. now. It is impossible to sit any longer today. If members want to sit longer, we have no objection provided we are allowed to remain absent. If I am absent for some time, then some members complain that the Finance Minister is absent. There is a limit to our sitting.

Mr. DEPUTY SPEAKER.—We will see tomorrow whether we can give some time for speeches also. The House will now adjourn and meet tomorrow at 8-30 a.m.

The House adjourned at Thirty Minutes past Six of the Clock to meet again at Thirty Minutes past Eight of the Clock on Wednesday, the 11th March 1964.

W D 2492—GPB—900—16-5-64